ಐಕ್ಯ ರಂಗ

ಸಂಪುಟ 20 ಸಂಚಿಕೆ 4

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಜನವರಿ 19-25, 1998 ಬೆಲೆ ರೂ. 2.00

ಸುಸ್ಪಷ್ಟ ಧೋರಣೆಗಳು, ಕಾರ್ಯಕ್ರಮ ಇರುವುದು ಸಂಯುಕ್ತ ರಂಗದ ಬಳಿ ಮಾತ್ರ

ದೇಶದಲ್ಲಿ ರೂಪುಗೊಳ್ಳುತ್ತಿರುವ ಚುನಾವಣಾ ಸನ್ನಿವೇಶವನ್ನು ನೋಡುವಾಗ ಈ ತಿಂಗಳ ಮೂರನೇ ವಾರದ ವೇಳೆಗೆ ಸ್ಥಿತಿ ಸುಮಾರಾಗಿ ಸ್ಪಷ್ಟವಾಗುತ್ತದೆ. ಚುನಾವಣೆಗಳ ಪ್ರಧಾನ ಸ್ಪರ್ಧಿಗಳು ತಮ್ಮ ಅಭ್ಯರ್ಥಿಗಳ ಪಟ್ಟಿಯನ್ನು ಅಂತಿಮಗೊಳಿಸಿದಾಗ ಒಂದು ಸ್ಪಷ್ಟ ಚಿತ್ರಣ ಮೂಡಿಬರುತ್ತದೆ. ಆದರೆ ಪ್ರಸ್ತುತ ಘಟ್ಟದಲ್ಲೂ ಕೂಡಾ ಒಂದು ವಿಷಯವಂತೂ ಸ್ಪಷ್ಟವಾಗಿದೆ. ಅದೇನೆಂದರೆ ಸುಸ್ಪಷ್ಟ ಧೋರಣೆಗಳು ಹಾಗೂ ಒಂದು ಮೂರ್ತ ಕಾರ್ಯಕ್ರಮದೊಂದಿಗೆ ಜನರ ಬಳಿಗೆ ಹೋಗುತ್ತಿರುವುದು ಸಂಯುಕ್ತ ರಂಗ ಮಾತ್ರವೇ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್‌ಸಿಂಗ್ ಸುರ್ಜಿತ್ ಹೇಳಿದ್ದಾರೆ.

ಬಿಜೆಪಿಯಿಂದು ಸ್ಥಿರತೆಯ ರಾಗ ಆಲಾಪಿಸುತ್ತಿದ್ದರೂ ವಾಸ್ತವವಾಗಿ ಅದು ಒಟ್ಟಾರೆಯಾಗಿ ರಾಷ್ಟ್ರೀಯ ಐಕ್ಯತೆಯನ್ನು ಅಸ್ಥಿರಗೊಳಿಸುವ ಶಕ್ತಿ. ಕೋಮುವಾದಿ ವಿಚ್ಛಿದ್ರಕಾರಿ ಕೆಲಸಗಳ ದಾಖಲೆ ಹೊಂದಿರುವ, ಭಾರತದ ವಿವಿಧ ದೇಶೀ ವಿಶಿಷ್ಟತೆಗಳನ್ನು, ಆಕಾಂಕ್ಷೆಗಳನ್ನು ನಿರಾಕರಿಸುವ ಒಂದು ಪಕ್ಷ ಹೇಗೆ ತಾನೇ ಸ್ಥಿರತೆ ನೀಡ ಬಲ್ಲದು? ಆದ್ದರಿಂದ ನಿಜವಾದ ಸ್ಥಿರತೆ ಕೊಡುವ ಶಕ್ತಿಯೆಂದರೆ ಸಂಯುಕ್ತ ರಂಗ ಮಾತ್ರವೇ. ಏಕೆಂದರೆ ಅದು ಕೋಮುವಾದಿ ಮತ್ತು ಇತರ ಛಿದ್ರಕಾರಿ ಶಕ್ತಿಗಳನ್ನು ಮೆಟ್ಟಿಹಾಕುವ ಪಣ ತೊಟ್ಟಿದೆ. ಜತೆಗೆ ದೇಶದ ಒಕ್ಕೂಟ ಸ್ವರೂಪವನ್ನು ಬಲಪಡಿಸುವ ಪಣ ತೊಟ್ಟಿದೆ. ಧೋರಣೆ ಗಳಿಗೆ, ಕಾರ್ಯಕ್ರಮಗಳಿಗೆ ಬದ್ಧವಾದ ಒಂದು ಸಂಯುಕ್ತ ರಂಗ ಸ್ಥಿರತೆ ನೀಡ ಬಲ್ಲದು ಎಂಬುದಕ್ಕೆ ಇಪ್ಪತ್ತು ವರ್ಷಗಳಿಗೂ ಹೆಚ್ಚು ಕಾಲದಿಂದ ಪಶ್ಚಿಮ ಬಂಗಾಳದಲ್ಲಿ ಒಂದು ಸ್ಥಿರ ಸರ್ಕಾರವನ್ನು ನಡೆಸುತ್ತಿರುವ ಸಿಪಿಐ(ಎಂ) ನೇತೃತ್ವದ ಎಡರಂಗವೇ ಸಾಕ್ಷಿ ಎಂದು ಸುರ್ಜಿತ್ ಹೇಳಿದ್ದಾರೆ.

ಸಂಯುಕ್ತ ರಂಗದ ಸರಕಾರ ತನ್ನ ಎಲ್ಲಾ ಮಿತಿಗಳ ನಡುವೆಯೂ ಕೆಲವು ಗಮನಾರ್ಹ ಸಾಧ್ಯತೆಗಳನ್ನು ಮಾಡಿದೆ. ಇನ್ನೂ ಮುಖ್ಯ ಅಜೆಂಡಾ ಅದರ ಮುಂದಿತ್ತು. ಆದರೆ ಕಾಂಗ್ರೆಸ್(ಐ) ನ ಬುಡಮೇಲು ಕೃತ್ಯದಿಂದಾಗಿ ಅದು ಆಗಲಿಲ್ಲ. ಈಗ ಸಂಯುಕ್ತ ರಂಗದ ಅಂಗ ಪಕ್ಷಗಳು ಈ ಎಲ್ಲಾ ಜನ-ಪರ ಧೋರಣೆ ಗಳಿಗೆ ಜನಗಳ ಬೆಂಬಲ ಪಡೆಯಲು ಜನರ ಬಳಿಗೆ ಹೋಗುತ್ತಿದ್ದಾರೆ ಎಂದು ಸುರ್ಜಿತ್ ಹೇಳಿದ್ದಾರೆ.

ತದ್ವಿರುದ್ಧವಾಗಿ ಬಿಜೆಪಿ ಎಷ್ಟೇ ಆರ್ಭಟ ನಡೆಸಿದರೂ ಒಂದು ಮೂರ್ತ ಕಾರ್ಯಕ್ರಮವನ್ನು ಜನಗಳ ಮುಂದಿಡಲು ಅದಕ್ಕಿನ್ನೂ ಆಗಿಲ್ಲ. ತನ್ನ ನಿಜವಾದ ಕಾರ್ಯಕ್ರಮವನ್ನು ಅಂದರೆ ದೇವಸ್ಥಾನ ನಿರ್ಮಾಣದಂತಹ ವಿಭಜನಕಾರಿ ವಿಷಯಗಳನ್ನಾಧರಿಸಿದ ಕಾರ್ಯಕ್ರಮವನ್ನು ಮರೆಮಾಚುವ ಕೆಲಸವನ್ನಷ್ಟೇ ಮಾಡುತ್ತಿದೆ. ಧೋರಣೆಗಳ ಪ್ರಶ್ನೆಯಿಂದ ತಪ್ಪಿಸಿಕೊಳ್ಳಲು ತಾನು 'ಮೈತ್ರಿಕೂಟ' ಅಥವಾ ಯಾವುದೇ ರಂಗ ರಚಿಸಿಕೊಳ್ಳುತ್ತಿಲ್ಲ, ಸೀಟುಗಳ ಹೊಂದಾಣಿಕೆ ಮಾತ್ರ ಮಾಡಿಕೊಳ್ಳಲಾಗುತ್ತಿದೆ ಎಂದು ಬಿಜೆಪಿ ಹೇಳುತ್ತಿದೆ. ಹತಾಶರಾಗಿರುವ ಬಿಜೆಪಿ ಹಾಗೂ ಶಿವಸೇನಾ ಮುಖಂಡರು ಈಗ 'ಅಲ್ಪ ಸಂಖ್ಯಾತರೇ, ನಮ್ಮ ಪಕ್ಷಕ್ಕೆ ಮತನೀಡಲು ನೀವು ಹೆದರಬೇಕಾಗಿಲ್ಲ' ಎನ್ನುತ್ತಿದ್ದಾರೆ. ಆದರೆ ತಮ್ಮದೇ 'ನೈಜ' ಜಾತ್ಯಾತೀತತೆ ಎನ್ನುವ ಈ ಮಂದಿಗೆ ಧರ್ಮನಿರಪೇಕ್ಷತೆ ಯೆಂದರೆ ಏನರ್ಥ? ಧರ್ಮವನ್ನು ರಾಜಕೀಯದಿಂದ ಪ್ರತ್ಯೇಕಿಸುವುದು ಎಂಬ ನಿರ್ವಚನೆಯನ್ನು ದೇಶದ ಸರ್ವೋಚ್ಚ ನ್ಯಾಯಾಲಯವೇ ಎತ್ತಿ ಹಿಡಿದಿದೆ. ಅದನ್ನು ವಾಜಪೇಯಿ ಒಪ್ಪುತ್ತಾರೆಯೇ? ಅದನ್ನವರು ಸ್ಪಷ್ಟಪಡಿಸುತ್ತಿಲ್ಲ ಎಂದು ಸುರ್ಜಿತ್ ಟೀಕಿಸಿದ್ದಾರೆ.

ಇನ್ನು ಕಾಂಗ್ರೆಸ್ಸಿಗಂತೂ 1990 ರ ಸ್ಥಾನಗಳನ್ನು ಉಳಿಸಿಕೊಳ್ಳಲೂ ಸಾಧ್ಯವಿಲ್ಲ ಎಂದು ಸುರ್ಜಿತ್ ಹೇಳುತ್ತಾರೆ. ಶ್ರೀಮತಿ ಸೋನಿಯಾಗಾಂಧಿಯವರು ಚುನಾವಣಾ ಪ್ರಚಾರದಲ್ಲಿ ಭಾಗವಹಿಸುತ್ತಿರುವುದರಿಂದ ಕಾಂಗ್ರೆಸ್ಸಿಗರ ಆತಂಕ ತುಸು ಕಮ್ಮಿಯಾಗಿರಬಹುದಷ್ಟೇಎಂದು ಸುರ್ಜಿತ್ ಹೇಳಿದ್ದಾರೆ. (ಪುಟ 4ರ ಲೇಖನ ನೋಡಿ)

ಇಂತಹ ಸನ್ನಿವೇಶದಲ್ಲಿ ಎಡ ಪಕ್ಷಗಳ ಮೇಲೆ ಹೆಚ್ಚಿನ ಜವಾಬ್ದಾರಿಯಿದೆ. ಅದೀಗ ಸಂಯುಕ್ತ ರಂಗದ, ಎಡ-ಜಾತ್ಯಾತೀತ ಪ್ರಜಾಪ್ರಭುತ್ವವಾದೀ ಶಕ್ತಿಗಳ ಐಕ್ಯತೆಯನ್ನು ಇನ್ನಷ್ಟು ಬೆಸೆಯುವ ರೀತಿಯಲ್ಲಿ ಕೆಲಸ ಮಾಡಬೇಕಾಗಿದೆ, ಅಲ್ಲದೆ ಸಂಯುಕ್ತ ರಂಗ ಜನ-ಪರ ಕ್ರಮಗಳನ್ನು ಜಾರಿ ಮಾಡದೆ ಕಾಂಗ್ರೆಸ್ ದಾರಿ ಹಿಡಿಯದಂತೆ ತಡೆಯುವ ಕೆಲಸ ಮಾಡಬೇಕಾಗಿದೆ ಎಂದಿರುವ ಸುರ್ಜಿತ್‌ರವರು 'ದೇಶದಲ್ಲಿ ಅದೀಗ ಗಳಿಸಿರುವ ಪ್ರತಿಷ್ಠೆಯ ಆಧಾರದಲ್ಲಿ ಜನಗಳಿಗೆ ನಾವೀಗ ವಚನ ನೀಡ ಬಹುದಾಗಿದೆ-ಜನಗಳ ಹಿತಾಸಕ್ತಿಗಳನ್ನು ರಕ್ಷಿಸುವ ಜವಾಬ್ದಾರಿ ನಿರ್ವಹಿಸುತ್ತೇವೆ ಎಂಬ ಭರವಸೆ ನೀಡಬಹುದಾಗಿದೆ" ಎಂದಿದ್ದಾರೆ. ಇದಕ್ಕಾಗಿ ಎಡಪಕ್ಷಗಳ ಬಲ ಹಲವು ಪಟ್ಟು ಹೆಚ್ಚಬೇಕಾಗಿದೆ ಎಂದು ಸುರ್ಜಿತ್ ಕರೆ ನೀಡಿದ್ದಾರೆ.

ಕಾರ್ಮಿಕರ, ರೈತರ ಪರವಾಗಿ ಹೋರಾಟ ಪ್ರತಿನಿಧಿಗಳನ್ನು ಆರಿಸಿ

ಸಮಯಸಾಧಕ ಮೈತ್ರಿಯಿಂದ ಬಿಜೆಪಿ ಅಧಿಕಾರ ಹಿಡಿಯುವುದು ಆಗದ ಮಾತು..... ಅದು ಕೇವಲ ಪೇಪರ್ ಟೈಗರ್ ಎಲ್ಲಾ ಕಡೆ ತನ್ನ ಪರವಾಗಿ ಅಲೆ ಎದ್ದಿದೆ ಎಂದು ಹೇಳಿಕೊಳ್ಳುತ್ತಿದೆ. ಆದರೆ ವಸ್ತುಸ್ಥಿತಿಯೇ ಬೇರೆ-ಇದು ಚುನಾವಣೆಯ ಬಗ್ಗೆ ಪತ್ರಕರ್ತರು ಕೇಳಿದಾಗ ಹಿರಿಯ ಕಾರ್ಮಿಕ ಮುಂದಾಳು ಹಾಗೂ ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ಎಸ್. ಸೂರ್ಯನಾರಾಯಣ ರಾವ್‌ರವರ ಪ್ರತಿಕ್ರಿಯೆ.

ಬಿಜೆಪಿಗೆ ತನ್ನ ಮಿತ್ರಪಕ್ಷಗಳೊಂದಿಗೆ ಒಂದು ಕನಿಷ್ಠ ಕಾರ್ಯಕ್ರಮವನ್ನು



ಕಾಂ. ಸೂರಿ ಕರೆ

ರೂಪಿಸಲಾಗಿಲ್ಲ. 370 ನೇ ವಿಧಿ, ಸಮಾನ, ನಾಗರಿಕ ಸಂಹಿತೆ, ದೇವಸ್ಥಾನ ನಿರ್ಮಾಣ ಇತ್ಯಾದಿ ಬಿಜೆಪಿ ಒತ್ತು ನೀಡುವ ಪ್ರಶ್ನೆಗಳನ್ನೂ ಅವರ ಮಿತ್ರ ಪಕ್ಷಗಳು ವಿರೋದಿಸಿವೆ. ಬಾಬ್ರಿ ಮಸೀದಿ ಕೆಡವಿದ್ದು ನಾವೇ ಎಂದು ಹೇಳಿಕೊಂಡ ಶಿವಸೇನೆಯ ಮುಖ್ಯಸ್ಥ ಬಾಳ ಠಾಕ್ರೆ ಈಗ ಅಯೋಧ್ಯೆಯಲ್ಲಿ ರಾಷ್ಟ್ರೀಯ ಸ್ಮಾರಕ ಮಾಡಬೇಕು ಎಂದು ಹೇಳಿದ್ದಾರೆ. ಅಂದರೆ ಮಿತ್ರಪಕ್ಷಗಳೇ ಬಿಜೆಪಿಯ ವಿಚಾರಗಳನ್ನು ಒಪ್ಪುವದಿಲ್ಲ ಎಂದು ಸೂರಿಹೇಳಿದರು.

"ಕೇಂದ್ರದಲ್ಲಿ ಸಂಯುಕ್ತರಂಗದ 18 ತಿಂಗಳ ಆಡಳಿತ ಅವಧಿಯಲ್ಲಿ ಕೋಮುಗಲಭೆಗಳನ್ನು ನಿಯಂತ್ರಿಸಲಾಗಿದೆ. ರಾಜ್ಯಗಳಿಗೆ ಹೆಚ್ಚಿನ ಸ್ವಾಯತ್ತತೆ ನೀಡಿರುವುದಲ್ಲದೇ ಸಾಕಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ. ಎಲ್ಲಕ್ಕೂ ಹೆಚ್ಚಾಗಿ ತನ್ನ ಐಕ್ಯತೆ ಬಂಡೆಗಲ್ಲಿನಂತೆ ಬಲಿಷ್ಠ ಎಂಬುದನ್ನು ಸಂಯುಕ್ತರಂಗ ತೋರಿಸಿಕೊಟ್ಟಿದೆ. ಈ ರೀತಿಯ ಏಕತೆ ಬಿಜೆಪಿಯ ಮಿತ್ರ ಪಕ್ಷಗಳಿಗೆ ಸಾಧ್ಯವಿಲ್ಲ. ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಪಿ. ರಾಮಚಂದ್ರರಾವ್ ಪತ್ರಕರ್ತರೊಡನೆ ಮಾತನಾಡುತ್ತಾ ಹೇಳಿದರು.

ಮುಂದುವರೆದು ಅವರು "ಕಾಂಗ್ರೆಸ್ ಅಧಿಕಾರಕ್ಕೆ ಬರುವುದಿಲ್ಲ. ಸಂಯುಕ್ತರಂಗ ಸರ್ಕಾರದ ನೀತಿ ರೂಪಿಸಲು ಎಡಪಕ್ಷಗಳಿಂದ ಮಾತ್ರ ಸಾಧ್ಯ. ಈ ಹಿನ್ನೆಲೆಯಲ್ಲಿ ನಮ್ಮನ್ನು ಸೋಲಿಸಬೇಕೆಂಬ ಉದ್ದೇಶ ಹಿನ್ನೆಲೆ ಬಂಡವಾಳಶಾಹಿಗಳಿಗಿದೆ. ಆದರೆ ಮುಂದಿನ ಚುನಾವಣೆಗಳಲ್ಲಿ ಸಂಯುಕ್ತ ರಂಗವೇ ಅತ್ಯಧಿಕ ಸ್ಥಾನಗಳನ್ನು ಪಡೆಯುವುದು ಸತ್ಯ" ಎಂದು ರಾಮಚಂದ್ರರಾವ್ ಹೇಳಿದ್ದಾರೆ.

ಇದಕ್ಕೆ ಮೊದಲು ಬೆಂಗಳೂರಿನಲ್ಲಿ ಸಿಐಟಿಯು ಸಂಘಟಿಸಿದ್ದ ಕಾರ್ಮಿಕರ ಸಮಾವೇಶವೊಂದರಲ್ಲಿ ಮಾತನಾಡುತ್ತಾ ಸೂರಿಯವರು ಕಾಂಗ್ರೆಸ್ ಮತ್ತು

ಪುಟ 8 ನೋಡಿ

ಲೋಕಸಭಾ ಚುನಾವಣಾ ಪೂರ್ವ ರಾಜ್ಯದ ರಾಜಕೀಯ ರಣರಂಗ

ಸಮರ ಜನತಾದಳ ಮತ್ತು ಕಾಂಗ್ರೇಸ್ ನಡುವೆ

- ಪಿ. ರಾಮಚಂದ್ರರಾವ್

ಕರ್ನಾಟಕದಲ್ಲಿ 12 ನೇ ಲೋಕಸಭೆಆ ಚುನಾವಣೆ ಫೆಬ್ರವರಿ 16 ಮತ್ತು 22 ರಂದು ನಡೆಯಲಿದೆಯಷ್ಟೆ. ಇನ್ನೇನು ಕೆಲವೇ ದಿನಗಳಲ್ಲಿ ಚುನಾವಣಾ ವೇಳಾಪಟ್ಟಿ ಪ್ರಕಟವಾಗಿ ಚುನಾವಣಾ ಪ್ರಕ್ರಿಯೆ ಆರಂಭವಾಗಲಿದೆ.

ಸ್ವಾಭಾವಿಕವಾಗಿ ರಾಜ್ಯದಲ್ಲಿ ಚುನಾವಣಾ ತಯಾರಿ ಕಾರ್ಯ ದಿನೇ ದಿನೇ ಏರುತ್ತಾ ಬರುತ್ತಿದೆ. ಕಾಂಗ್ರೇಸ (ಐ) ಪಕ್ಷವು ಬೆಂಗಳೂರಿನಲ್ಲಿ ಬೃಹತ್ ಸಾರ್ವಜನಿಕ ಸಭೆ ಜರುಗಿಸಿ ಶ್ರೀಮತಿ ಸೋನಿಯಾಗಾಂಧಿಯ ಕೈಯಿಂದ ಚುನಾವಣಾ ಉದ್ಘಾಟನೆಯನ್ನು ನೆರವೇರಿಸಿ ಬಿಟ್ಟಿದೆ. ಅದೇ ವೇಳೆ ಜನತಾದಳದವರು ತಾವೇನೂ ಹಿಂದೆ ಇಲ್ಲವೆಂಬಂತೆ, ಜನತಾದಳದ ಕಾರ್ಯಕರ್ತರ ಬೃಹತ್ ಸಮಾವೇಶವನ್ನು ಹೊಸಕೋಟೆಯಲ್ಲಿ ಜರುಗಿಸಿ "ಕರ್ನಾಟಕದ ಮಣ್ಣಿನ ಮಗ ಶ್ರೀಮಾನ್ ದೇವೇಗೌಡರೇ ಮುಂದಿನ ದೇಶದ ಪ್ರಧಾನಿ" ಎಂದು ಸಾರಿದ್ದಾರೆ. ಹೆಚ್ಚು ಕಡಿಮೆ ಚುನಾವಣಾ ಪ್ರಚಾರವನ್ನು ಉದ್ಘಾಟಿಸಿದ್ದಾರೆ.

ಈಗಾಗಲೇ ಜನತಾದಳದ ಮುಖಂಡರು "ಈ ಚುನಾವಣೆಯ ಫಲಿತಾಂಶವು ರಾಜ್ಯದ ಜನತಾದಳದ ಭವಿಷ್ಯವನ್ನು ನಿರ್ಧರಿಸುತ್ತದೆ" ಎಂದೂ, "ಈ ಚುನಾವಣೆಯ ಫಲಿತಾಂಶ ಜನತಾದಳದ ಸರಕಾರದ ಭವಿಷ್ಯತ್ತನ್ನು ನಿರ್ಧರಿಸುತ್ತಿಲ್ಲ" ಎಂದೂ ವಿಭಿನ್ನ ಹೇಳಿಕೆಗಳನ್ನು ಕೊಟ್ಟು ತಮ್ಮೊಳಗಿನ ಭಿನ್ನಾಭಿಪ್ರಾಯಗಳನ್ನು ಪ್ರಕಟಿಸುತ್ತಿದ್ದಾರೆ.

ಕೆಲವೊಂದು ಮಂತ್ರಿಗಳು- ದೇಶಪಾಂಡೆ, ಜಿಗಜಿಣಗಿ....... ಮೊದಲಾದವರು ಜನತಾದಳದಿಂದ ರಾಜೀನಾಮೆ ಕೊಟ್ಟು ಹೆಗ್ಗಡೆಯವರ ಲೋಕಶಕ್ತಿಗೆ ಸೇರದವರು ಎಂಬ ವದಂತಿ ದಟ್ಟವಾಗಿ ಹರಡುತ್ತಿದೆ. ಜಾಲಪ್ಪನವರು ಗುಜ್ರಾಲ್ ಕ್ಯಾಬಿನೆಟ್‌ನಿಂದ ರಾಜಿನಾಮೆಕೊಟ್ಟು ಕಾಂಗ್ರೇಸ್(ಐ) ಪಕ್ಷದ ಉಮೇದುವಾರರಾಗಿ ಚಿಕ್ಕಬಳ್ಳಾಪುರದಿಂದ ಸ್ಪರ್ಧಿಸಲಿರುವರು ಎಂಬ ಸುದ್ದಿ ಹರಡಿದೆ.

ಎಲ್ಲಕ್ಕಿಂತಲೂ ಹೆಚ್ಚಾಗಿ ಬಿಜೆಪಿ ಅಧ್ಯಕ್ಷ ಅಡ್ವಾನಿಯವರು ಬೆಂಗಳೂರಿನಲ್ಲಿ ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ "ಹೆಗ್ಗಡೆಯವರ ಲೋಕಶಕ್ತಿ ಬಿಜೆಪಿ ಯೊಡನೆ ಒಡಂಬಡಿಕೆ ಮಾಡಿಕೊಂಡಿದೆ" ಎಂದು ಸಾರಿದಾಗ, ಸೇಲಂ ನಿಂದ ಹೆಗ್ಗಡೆಯವರು "ಇಲ್ಲ, ಬಿಜೆಪಿಯೊಡನೆ ಒಡಂಬಡಿಕೆಯಾಗಲಿಲ್ಲ" ಎಂದು ಹೇಳಿಕೆಯನ್ನಿತ್ತ ಬೆನ್ನಿನಲ್ಲೇ ದಿಲ್ಲಿಯಿಂದ "ಬಿಜೆಪಿಯೊಡನೆ ಒಪ್ಪಂದ ಮಾಡಿಕೊಳ್ಳಲಾಗಿದೆ" ಎಂಬ ಮರು ಹೇಳಿಕೆಬಂತು.

ಇನ್ನು ಸಂಯುಕ್ತರಂಗದ ಪಕ್ಷಗಳು ಈ ಸಲದ ಚುನಾವಣೆಗಳಲ್ಲಿ ಸಂಯುಕ್ತ ವಾಗಿಯೇ ಹೋರಾಟ ಮಾಡುವುದು ಎಂದು ಹೇಳಿದ ದೇವೇಗೌಡರು ಅಧ್ಯಕ್ಷರಾಗಿರುವ ಜನತಾದಳ ಪಕ್ಷವು ಕರ್ನಾಟಕಲಲ್ಲಿ ಎಡಪಕ್ಷಗಳಾದ ಸಿಪಿಐ(ಎಂ) ಮತ್ತು ಸಿಪಿಐ ಪಕ್ಷಗಳ ಜತೆ ಒಂದು ಸುತ್ತಿನ ಮಾತುಕತೆ ನಡೆಸಿ ರಾಜ್ಯದಲ್ಲಿ ಸೀಟು ಹೊಂದಾಣಿಕೆ ಮಾಡಿಕೊಂಡು ಜಂಟೀ ಪ್ರಚಾರ ಸಮಿತಿಯ ಆಶ್ರಯದಲ್ಲಿ ಪ್ರಚಾರಾಂದೋಲನವನ್ನು ಮಾಡೋಣ ಎಂದು ಪರಸ್ಪರ ಒಪ್ಪಿಕೊಂಡ ಜನತಾ ದಳವು ಮೌನವಾಗಿದೆ. ಎರಡನೆ ಅಥವಾ 3 ನೇ ಸುತ್ತಿನ ಮಾತುಕತೆ ಮಾಡಿ ತುರ್ತಾಗಿ ಸೀಟು ಹೊಂದಾಣಿಕೆ ಮಾಡಿಕೊಳ್ಳುವುದಕ್ಕೆ ಹಿಂದುಮುಂದು ನೋಡುತ್ತಿದೆ.

ಈ ಸಂದರ್ಭದಲ್ಲಿ ಸಿಪಿಐ(ಎಂ) ಪಕ್ಷದ ಕಾರ್ಯದರ್ಶಿ ಮಂಡಳಿಯು ಜನತಾದಳದ ಮುಖಂಡರಿಗೆ ಖಚಿತವಾಗಿ ಈ ಸಂದೇಶವನ್ನು ಮುಟ್ಟಿಸಿದ್ದಾರೆ. "ಜನತಾದಳದವರು ಸಿಪಿಐ(ಎಂ)ಗೆ ಕೋಲಾರ (ಮೀಸಲಾತಿ) ಕ್ಷೇತ್ರವನ್ನು ಒಡಂಬಡಿಕೆಯಲ್ಲಿ ಬಿಟ್ಟುಕೊಡಬೇಕು" ಇಲ್ಲವಾದರೆ ಸಿಪಿಐ(ಎಂ) ಪಕ್ಷವು ಕೋಲಾರ (ಮೀಸಲಾತಿ) ಮತ್ತು ಚಿಕ್ಕಬಳ್ಳಾಪುರ ಕ್ಷೇತ್ರಗಳಲ್ಲಿ ಸ್ಪರ್ಧಿಸಲು ನಿರ್ಬಂಧಿತವಾಗುವುದು ಮತ್ತು ಜಂಟೀಪ್ರಚಾರ ಇತ್ಯಾದಿ ಬಗ್ಗೆ ಪುನರಾಲೋಚನೆ ಮಾಡಲು ನಿರ್ಬಂಧಿತವಾಗುವುದು" ಎಂದು ಸ್ಪಷ್ಟಮಾಡಲಾಗಿದೆ.

ಸಿಪಿಐ(ಎಂ) ಪಕ್ಷದ ಅಭಿಪ್ರಾಯದಲ್ಲಿ ರಾಜ್ಯದ ಚುನಾವಣಾ ರಣರಂಗದಲ್ಲಿ ಜನತಾದಳ ಮತ್ತು ಕಾಂಗ್ರೆಸ್(ಐ) ನಡುವೆ ಮುಖ್ಯಸಮರ. ಬಿಜೆಪಿಯ ಜತೆ ರಾಮಕೃಷ್ಣ ಹೆಗ್ಗಡೆಯವರ ಲೋಕಶಕ್ತಿ ಸೇರಿದ್ದರಿಂದ ರಾಮಕೃಷ್ಣ ಹೆಗ್ಗಡೆಯವರು ರಾಜಕೀಯ ಹರಾಕಿರಿ ಮಾಡಿದಂತಾಗಿದೆ. ಆದರಿಂದ ಲೋಕಶಕ್ತಿಗೂ ಪ್ರಯೋಜನವಾಗಲಾರದು ಮತ್ತು ಬಿಜೆಪಿಗೂ ಹೆಚ್ಚಿನ ಪ್ರಯೋಜನವಾಗದು.... ಯಡಿಯೂರಪ್ಪನವರ "ಇದೊಂದು ವಿಧಾನಸಭಾ ಚುನಾವಣೆಗಳಿಗೂ ಮುಂದುವರಿಯುವ ಒಡಂಬಡಿಕೆ" ಎಂಬ ಹೇಳಿಕೆ ಕೇವಲ ಅವರ ಆಶೆಯ ಪ್ರತೀಕವಷ್ಟೆ.

ಈಗಾಗಲೇ ಲೋಕಶಕ್ತಿಯ ಹಲವು ಜಿಲ್ಲಾ ಮುಖಂಡರು ರಾಮಕೃಷ್ಣ ಹೆಗ್ಗಡೆಯವರು ತಾವೇ ಪ್ರತಿಪಾದಿಸುತ್ತಾ ಬಂದ ಜಾತ್ಯಾತೀತ ತತ್ವಕ್ಕೆ ದ್ರೋಹ ಬಗೆದಿದ್ದಾರೆ" ಎಂದು ಹೇಳಿ ಅವರ ಪಕ್ಷವನ್ನು ಬಿಟ್ಟು ಬಿಡುತ್ತಿದ್ದಾರೆ.

ಒಟ್ಟಿನಲ್ಲಿ, ದೇಶದಲ್ಲಿ ನಡೆಯುವಂತೆ ಕರ್ನಾಟಕ ರಾಜ್ಯದಲ್ಲೂ " ಬಿಜೆಪಿ ಇಂದು ದೇಶದ ಭವಿಷ್ಯತ್ತಿಗೆ ಗಂಡಾಂತರಕಾರಿಯಾಗಿ ಒಂದನೇ ವೈರಿಸ್ಥಾನದಲ್ಲಿದೆ" ಎಂದು ಜನತೆ ತಮ್ಮ ಮತಗಳನ್ನು ಹಾಕಲಿದ್ದಾರೆ ಎಂಬುದು ಸ್ಪಷ್ಟ.


ಸಿಪಿಐ(ಎಂ) ಅಭ್ಯರ್ಥಿಗಳನ್ನು ಗೆಲ್ಲಿಸಲು ಹಾಗೂ ಬಿಜೆಪಿಯನ್ನು ಸಂಪೂರ್ಣವಾಗಿ ಸೋಲಿಸಲು ರಾಜ್ಯದ ಜನತೆಯ ಎಲ್ಲಾ ರೀತಿಯಲ್ಲಿ ಮುಂದಾಗುವುದು ಎಂಬುದು ಸಿಪಿಐ(ಎಂ) ನ ನಿರೀಕ್ಷೆಯಾಗಿದೆ.



ಭಾರತೀಯ ವಿಮೋಚನಾ ಸಮರ


ಸುಮಾರು ಎರಡು ಶತಮಾನಗಳ (1757-1947) ವಸಾಹತುಶಾಹಿ ವಿರೋಧಿ ಸಮರದಲ್ಲಿ ಭಾರತ ಒಂದು ಆಧುನಿಕ ರಾಷ್ಟ್ರವಾಗಿ ಬೆಸೆದುಕೊಂಡ, ಭಾರತೀಯ ಜನಗಳ ಅಪಾರ ತ್ಯಾಗ-ಬಲಿದಾನಗಳ ಒಂದು ಪಕ್ಷಿನೋಟ.

ಫೆಬ್ರವರಿ 27, 1931. ಹಿಂದೂಸ್ತಾನ್ ಸೋಶಲಿಸ್ಟ್ ರಿಪಬ್ಲಿಕನ್ ಆರ್ಮಿಯ(HSRA ಹಿಂದೂಸ್ತಾನ್ ಸಮಾಜವಾದಿ ಗಣತಂತ್ರ ಸೇನೆ) ಯ ಸೇನಾಧಿಪತಿ ಹಾಗೂ ಕ್ರಾಂತಿಕಾರಿ ಯುವಜನರ ಒಬ್ಬ ಪ್ರಮುಖ ಮುಖಂಡ **ಚಂದ್ರಶೇಖರ್**



ಆಝಾದ್ ಅಲಹಾಬಾದ್‌ನ ಅಲ್ಫ್ರೆಡ್‌ಪಾರ್ಕ್‌ನಲ್ಲಿ ಬ್ರಿಟಿಶ್ ಪೋಲೀಸರೊಂದಿಗೆ ಸೆಣಸಾಡುತ್ತಾ ಅವರ ಗುಂಡುಗಳಿಗೆ ಬಲಿಯಾಗಿ ಹುತಾತ್ಮರಾದರು. ಅವರಿಗಾಗ 25 ವರ್ಷವೂ ಪೂರ್ಣವಾಗಿರಲಿಲ್ಲ.


ಹದಿನಾಲ್ಕನೇ ವಯಸ್ಸಿನಲ್ಲಿ ಗಾಂಧೀಜಿ ನೇತೃತ್ವದ ಅಸಹಕಾರ ಆಂದೋಲನದಲ್ಲಿ ಭಾಗವಹಿಸಿ 15 ಛಡಿಯೇಟಿನ ಶಿಕ್ಷೆ ತಿಂದಿದ್ದ ಈ ಬಾಲಕ ನಂತರ ಗಾಂಧೀಜಿಯ ಚಳುವಳಿಯಿಂದ ಭ್ರಮನಿರಸನಗೊಂಡು ಕ್ರಾಂತಿಕಾರಿ ದಾರಿ ಹಿಡಿದ. ಕಾಕೋರಿ ರೈಲು ಡಕಾಯಿತಿ ಘಟನೆಯಲ್ಲಿ ಭಾಗವಹಿಸಿ ಬಂಧನ ತಪ್ಪಿಸಿಕೊಳ್ಳಲು ಭೂಗತರಾಗಿ ಕೆಲಸ ಮಾಡಲಾರಂಭಿಸಿದ ಆಝಾದ್ ಭೂಗತರಾಗಿದ್ದುಕೊಂಡೇ ಗುಪ್ತ ಕ್ರಾಂತಿಕಾರಿ ಚಟುವಟಿಕೆ ನಡೆಸುತ್ತಿದ್ದವರು. 1928 ರಲ್ಲಿ ಭಗತ್ ಸಿಂಗ್ ಮತ್ತಿತರ ಕ್ರಾಂತಿಕಾರಿ ಯುವ ಜನರೊಂದಿಗೆ HSRA ಪಡೆ ಕಟ್ಟಿದರು. ಆತನನ್ನು ಜೀವಂತ ಅಥವಾ ಮೃತ ರೀತಿಯಲ್ಲಾದರೂ ತೋರಿಸಿಕೊಟ್ಟವರಿಗೆ 30 ಸಾವಿರ ರೂ. ಬಹುಮಾನ ಘೋಷಿಸಲಾಗಿತ್ತು. ಭಗತ್‌ಸಿಂಗ್, ರಾಜಗುರು, ಸುಖ್‌ದೇವ್ ಲಾಲ ಲಜಪತರಾಯ್‌ರವರ ಸಾವಿಗೆ ಕಾರಣನಾದ ಸೌಂಡರ್ಸ್‌ನನ್ನು ಕೊಂದಾಗ ಆಝಾದ್ ಅವರಿಗೆ ನೆರವಾಗಲು ಘಟನೆಯ ಸ್ಥಳದಲ್ಲೇ ಇದ್ದವರು. ಅಲ್‌ಫ್ರೆಡ್‌ಪಾರ್ಕಿನಲ್ಲಿ ಕುಳಿತಿದ್ದಾಗ ಪೋಲೀಸರು ಸುತ್ತುವರಿದರು. ಧೈರ್ಯಗೆಡದ ಆಝಾದ್ ಬಹಳ ಹೊತ್ತು ಏಕಾಂಗಿಯಾಗಿ ಹೋರಾಡಿ ಕೆಲವು ಪೋಲೀಸ್ ಅಧಿಕಾರಿಗಳನ್ನು ಗಾಯಗೊಳಿಸಿದರು. ಆದರೆ ಒಂದು ಗುಂಡು ಕೊನೆಗೂ ಆತನ ಬಲಿತೆಗೆದುಕೊಂಡಿತು.




ಕೇಂದ್ರೀಯ ಶಾಸನ ಸಭೆಯಲ್ಲಿ ಬಾಂಬೆಸೆತಕ್ಕಾಗಿ ಭಗತ್‌ಸಿಂಗ್ ಹಾಗೂ ಬಟುಕೇಶ್ವರ ದತ್‌ಗೆ ಜೀವಾವಧಿ ಶಿಕ್ಷೆ ವಿಧಿಸಲಾಯಿತು. ಅದೇ ವೇಳೆಗೆ ಸೌಂಡರ್ಸ್ ಕೊಲೆಯ ಲಾಹೋರ್ ಪಿತೂರಿ ಮೊಕದ್ದಮೆಯ ವಿಚಾರಣೆ ಆರಂಭವಾಯಿತು. ಭಗತ್‌ಸಿಂಗ್‌ರನ್ನೂ ಒಬ್ಬ ಆಪಾದಿತನಾಗಿ ಮಾಡಲಾಯಿತು. 24 ವರ್ಷದ **ಭಗತ್‌ಸಿಂಗ್, ರಾಜಗುರು** ಹಾಗೂ **ಸುಖದೇವ್**‌ಗೆ ಮರಣದಂಡನೆ ವಿಧಿಸಲಾಯಿತು. ಶಿವವರ್ಮಾ, ಕಿಶೋರಿ ಲಾಲ್ ಮತ್ತಿತರರಿಗೆ ಗಡೀಪಾರು ಜೀವಾವಧಿ ಶಿಕ್ಷೆ ವಿಧಿಸಲಾಯಿತು.

ಮಾರ್ಚ್ 23, 1931 ರಂದು ಭಗತ್‌ಸಿಂಗ್ ಮತ್ತು ಆತನ ಇಬ್ಬರು ಸಹಯೋಗಿಗಳನ್ನೂ ಗಲ್ಲಿಗೇರಿಸಲಾಯಿತು. ದೇಶಾದ್ಯಂತ ಪ್ರತಿಭಟನೆಗಳು ನಡೆದವು. 'ಇಂಕ್ವಿಲಾಬ್ ಜಿಂದಾಬಾದ್' ಎಲ್ಲೆಡೆ ಮೊಳಗಿತು.

ಇದಕ್ಕೆ ಕೆಲವೇ ದಿನಗಳ ಮೊದಲು ಲಾಹೋರ್ ವಿಶ್ವವಿದ್ಯಾಲಯದಲ್ಲಿ ಪಂಜಾಬಿನ ಗವರ್ನರ್ ಮೇಲೆ ಹಲ್ಲೆಗೆ ಪ್ರಯತ್ನಿಸಿ ಸಿಕ್ಕಿಬಿದ್ದ 22 ವರ್ಷದ **ಹರ್ಕಿಶನ್ ಲಾಲ್**‌ನಿಗೂ



ಮರಣದಂಡನೆ ವಿಧಿಸಲಾಯಿತು. ಈತ ಖಾನ್ ಅಬ್ದುಲ್ ಗಫಾರ್‌ಖಾನ್ ಸ್ಥಾಪಿಸಿದ ಖುದಾಯಿ ಖಿದ್ಮತ್‌ಗಾರ್ ಪಡೆಯ ಸದಸ್ಯನೂ ಅಲ್ಲದೆ, ಭಗತ್ ಸಿಂಗ್ ಮತ್ತಿತರರು ಸ್ಥಾಪಿಸಿದ್ದ ಭಾರತ್ ನೌಜವಾನ್ ಸಭಾದ ಸದಸ್ಯನೂ ಆಗಿದ್ದ. ಸ್ವತಃ 'ಖುದಾಯಿ ಖಿದ್ಮತ್‌ಗಾರ್' ಸದಸ್ಯನಾಗಿದ್ದ ತಂದೆ **ಗುರುದಾಸ್ ಮಾಲ್** ಮಗನಿಗೆ ಗುಂಡು ಹಾರಿಸುವ ತರಬೇತಿ ನೀಡಿದ್ದ. ಪಂಜಾಬಿನ ಗವರ್ನರ್ ಪಕ್ಕದಲ್ಲಿ



ಎಸ್.ರಾಧಕೃಷ್ಣನ್ ಕೂತಿದ್ದರಿಂದ ಅವರಿಗೆ ಗುಂಡೇಟು ತಗುಲದಂತೆ ಗವರ್ನರ್‌ಗೆ ಗುರಿಯಿಡುವ ಪ್ರಯತ್ನದಲ್ಲಿ ವಿಫಲನಾಗಿದ್ದ. ಜೂನ್ 9, 1931 ರಂದು ಮಗನನ್ನು ಗಲ್ಲಿಗೇರಿಸಿದ 25 ದಿನಗಳ ನಂತರ ಆರೋಗ್ಯ ಕೆಟ್ಟು ಗುರುದಾಸ್ ಮಾಲ್ ಕೂಡಾ ಜೈಲಿನಲ್ಲೇ ಮರಣಹೊಂದಿದ.

ಇಷ್ಟಲ್ಲದೇ ಈ ಅವಧಿಯಲ್ಲಿ ಇನ್ನೂ ಹಲವಾರು ಯುವಜನ ಪ್ರಾಣಾರ್ಪಣೆ ಮಾಡಿದರು. ಈ ವೇಳೆಯಲ್ಲಿ ಕರಾಚಿಯಲ್ಲಿ ಕಾಂಗ್ರೆಸ್ ಅಧಿವೇಶನ ನಡೆಯಿತು. ಗಾಂಧಿ-ಇರ್ವಿನ್ ಒಪ್ಪಂದವನ್ನು ವಿರೋಧಿಸಿದ್ದ ಭಗತ್‌ಸಿಂಗ್ ಮತ್ತಿತರ ಸಂಗಾತಿಗಳ ಗಲ್ಲುಶಿಕ್ಷೆಯಿಂದ ಸಿಟ್ಟಿಗೆದ್ದಿದ್ದ ಯುವಜನ ಗಾಂಧೀಜಿಯ ವಿರುದ್ಧ



ಕಪ್ಪುಬಾವುಟ ಪ್ರದರ್ಶನ ನಡೆಸಿದರು. 'ಯುವಜನರಿಗೆ ಸಿಕ್ಕಿದ್ದೇನು? ಭಗತ್ ಸಿಂಗ್‌ರ ನೇಣು?' ಎಂದವರು ಪ್ರಶ್ನಿಸಿದರು. ಆದರೂ ಕಾಂಗ್ರೆಸ್ ಅಧಿವೇಶನ ಗಾಂಧಿ - ಇರ್ವಿನ್ ಒಪ್ಪಂದಕ್ಕೆ ಅನುಮೋದನೆ ನೀಡಿತು. ಬಂಧಿತ ಸತ್ಯಾಗ್ರಹಿಗಳನ್ನು ಬಿಡುಗಡೆ ಮಾಡ ಲಾಯಿತು. ಕಾಂಗ್ರೆಸ್ ದುಂಡುಮೇಜಿನ ಪರಿಷತ್ತಿಗೆ ಭಾಗವಹಿಸಲು ದಾರಿ ಮಾಡಿಕೊಡಲಾಯಿತು. ಆದರೆ ಅತ್ತ ಲಾಹೋರ್, ಮೇರಠ್ ಮತ್ತಿತರ ಹಲವಾರು ಪಿತೂರಿ ಮೊಕದ್ದಮೆಗಳಲ್ಲಿ ಆಪಾದಿತರಾದವರು ಜೈಲಿನಲ್ಲೇ ಇದ್ದರು.

ಬ್ರಿಟಿಶ್ ಸರಕಾರ ಒಪ್ಪಂದದ ಶರತ್ತುಗಳನ್ನು ಪಾಲಿಸಲಿಕ್ಕಿಲ್ಲ ಎಂಬುದು ಬೇಗನೇ ಸ್ಪಷ್ಟವಾದರೂ ಗಾಂಧೀಜಿ ಕಾಂಗ್ರೆಸ್‌ನ ಏಕೈಕ ಪ್ರತಿನಿಧಿಯಾಗಿ ದುಂಡು ಮೇಜು ಪರಿಷತ್ತಿಗೆ ಹೋದರು. ಡಿಸೆಂಬರ್ 28, 1931 ರಂದು ಬರಿಗೈಯಲ್ಲಿ ವಾಪಾಸು ಬಂದರು. ಮತ್ತೆ ಕಾನೂನುಭಂಗ ಚಳುವಳಿ ಭುಗಿಲೆದ್ದಿತು. ಹೊಸ ವೈಸರಾಯ್ ದಮನ ಚಕ್ರ ಆರಂಭಿಸಿದ. ಜನವರಿ 1932 ರಲ್ಲಿ ಕಾಂಗ್ರೆಸ್ ಮತ್ತು ಅದರ ಸಹಾಯಕ ಸಂಘಟನೆಗಳನ್ನು ನಿಷೇಧಿಸಲಾಯಿತು. ಗಾಂಧೀಜಿ ಸೇರಿದಂತೆ ಹಲವು ಮುಖಂಡರನ್ನು ಬಂಧಿಸಲಾಯಿತು.

(ಮುಂದುವರೆಯುವುದು)



ವಿಡಿಐಎಸ್ ಎಂಬ ಶರಣಾಗತಿ

ಕೇಂದ್ರ ಹಣಕಾಸು ಮಂತ್ರಿ ಪಿ. ಚಿದಂಬರಂ ಅವರು 1997 -98 ರ ಸಾಲಿಗಾಗಿ ಮಂಡಿಸಿದ ಕನಸಿನ ಬಜೆಟ್ಟಿನ ಎಲ್ಲವೂ ವಿಫಲವಾಗಿದೆ - ಒಂದರ ಹೊರತಾಗಿ, ಈ ಒಂದು ವಿಡಿಐಎಸ್ ಅಥವಾ ವರಮಾನದ ಸ್ವಯಂ ಘೋಷಣಾ ಯೋಜನೆ. ಕಪ್ಪು ಹಣ ಅಪಾರವಾಗಿರುವವರು ತಮ್ಮ ಈ ಆದಾಯವನ್ನು ಘೋಷಿಸಿಕೊಂಡು ಶೇ. 30 ರಷ್ಟು ವರಮಾನ ತೆರಿಗೆ ತೆತ್ತರೆ ಸಾಕು. ಬಾರಾಕೂನ್ ಮಾಫ್ ಅಂತಾರಲ್ಲ. ಹಾಗೆ ಅವರಿಗೆ ಕ್ಷಮಾದಾನ. ಯಾವುದೇ ತೊಂದರೆಯಿಲ್ಲ, ತಕರಾರಿಲ್ಲ, ಬಹಳ ಸರಳ ವಿಧಾನ 1997 ರ ಡಿಸೆಂಬರ್ 31 ರಂದು ಕೊನೆಯ ದಿನ. ಈ ಕೊನೆಯ ದಿನದವರೆಗೆ 466031 ಜನ ತಮ್ಮ ಕಪ್ಪು ಹಣವನ್ನು ಘೋಷಿಸಿಕೊಂಡರಂತೆ. ಇವರ ಅಘೋಷಿತ (ಈ ಮೊದಲು ಘೋಷಿಸದೆ ತೆರಿಗೆ ತಪ್ಪಿಸಿಕೊಂಡು ಬಂದಂತಹದ್ದು) ಆದಾಯ ಆಸ್ತಿ 33,000 ಕೋಟಿ ರೂಪಾಯಿಗಳು.

ಎಂತಹ ಅದ್ಭುತ ಯಶಸ್ಸು ಈ ಯೋಜನೆಗೆ! ಎಲ್ಲರೂ ಹೊಗಳುವವರೆ. ಅದ್ಭುತ ಯಶಸ್ಸೇನೋ ಹೌದು. ಆದರೆ ಈ ಯಶಸ್ಸಿನ ಅರ್ಥವೇನು ? ಈ ಯಶಸ್ಸಿನ ಅರ್ಥ ದೇಶದೊಳಗೆ ತೆರಿಗೆ ತಪ್ಪಿಸಿಕೊಂಡು ನೆಮ್ಮದಿಯಿಂದಲೇ ಇರುವ ಲಕ್ಷಾಂತರ ಜನ ಶ್ರೀಮಂತರಿದ್ದಾರೆ. ಇವರಿಗೆ ಯಾವ ಸರ್ಕಾರದ ಹೆದರಿಕೆಯಿಲ್ಲ, ಕಾನೂನಿಗೆ ಕ್ಯಾರೇ ಅನ್ನದವರು ಇವರು. ಈಗ ಘೋಷಣೆಯಾಗಿರುವುದು ಅತ್ಯಲ್ಪ. ಇನ್ನೂ ಬಚ್ಚಿಟ್ಟಿರುವುದು ಅಪಾರವಾಗೇ ಇದೆ ಎಂದು ತಜ್ಞರು ಹೇಳುತ್ತಿದ್ದಾರೆ.

ಈ ಯೋಜನೆಯಡಿ ಸಂಗ್ರಹವಾದ ತೆರಿಗೆ ಮೊತ್ತ 10,050 ಕೋಟಿ ರೂಪಾಯಿಗಳು. ಈ ಯೋಜನೆಯ ಯಶಸ್ಸಿಗೆ ಒಂದು ಪ್ರಚಾರ ಕಾರ್ಯಕ್ರಮ ಹಮ್ಮಿಕೊಂಡು ಜಾರಿ ಮಾಡಲಾಯಿತು. ಈ ಪ್ರಚಾರ ಕಾರ್ಯಕ್ಕೆ 27 ಕೋಟಿ ರೂಪಾಯಿಗಳು ಖರ್ಚಾದವು. ವರಮಾನ ಇಲಾಖೆಯ ಉದ್ಯೋಗಿಗಳು ಅಧಿಕಾರಿಗಳು ಹಗಲಿರುಳು ದುಡಿದರು. ಕೇಂದ್ರ ಹಣಕಾಸು ಮಂತ್ರಿ ಮಹಾಶಯರೇ ಯೋಜನೆಯ ಮೇಲ್ವಿಚಾರಣೆ ಮಾಡಿದರು. ಅಂತೂ ಯೋಜನೆ ಯಶಸ್ವಿಯಾಯಿತು.

ಪಿ. ಚಿದಂಬರಂ ಅವರ ಬಜೆಟ್ಟು ಮತ್ತು ಅದಕ್ಕೂ ಹಿಂದೆ ಡಾ. ಮನಮೋಹನ ಸಿಂಗರ ಬಜೆಟ್ಟುಗಳನ್ನು ಈ ವಿಡಿಐಎಸ್ ನ ಹಿನ್ನೆಲೆಯಲ್ಲಿ ನೋಡಿದರೆ ಒಂದು ವಿಷಯ ಸ್ಪಷ್ಟವಾಗುತ್ತದೆ. ಬಂಡವಾಳಿಗರು ಕೋಟಿ ಕೋಟಿ ರೂಪಾಯಿಗಳ ತೆರಿಗೆಗಳ್ಳತನ ಮಾಡುವುದರಿಂದ ಸರ್ಕಾರದ ಕಂದಾಯ ಕಡಿಮೆಯೇ ಆಗುತ್ತಿದೆ. ಸಂಗ್ರಹಣೆ ಕಡಿಮೆ ಮಾಡಿದ್ದರಿಂದ ಹಣಕಾಸು ಕೊರತೆ ಬಜೆಟ್ ಕೊರತೆ ಇವೆಲ್ಲ ಉಂಟಾಗುತ್ತದೆ. ಈ ಕೊರತೆಗಳನ್ನು ತೊಡೆದುಹಾಕಲು ನಮ್ಮ ಕೇಂದ್ರ ಸರ್ಕಾರ ಏನು ಮಾಡುತ್ತಿದೆ? ಐಎಂಎಫ್ ಮತ್ತು ವಿಶ್ವಬ್ಯಾಂಕ್‌ಗಳ ನಿರ್ದೇಶನದಲ್ಲಿ ಜನರಿಗೆ ಅನುಕೂಲ ನೀಡುವಂತಹ ಕಾರ್ಯಕ್ರಮಗಳಿಗೆ ಹಣಕಾಸಿನ ಕಡಿತ. ಅಭಿವೃದ್ಧಿಕಾರ್ಯ ಸ್ಥಗಿತ ಅಥವಾ ಕಡಿಮೆ ಪ್ರಮಾಣದಲ್ಲಿ ಈ ಅಭಿವೃದ್ಧಿಗಾಗಿ ಖಾಸಗಿಯವರು ಹೂಡಿಕೆ ಮಾಡಬೇಕೆಂದೇ ಪ್ರತಿಪಾದನೆ. ಖಾಸಗಿಯವರು ಹಣ ಹೂಡಲು ಈ ಚಟುವಟಿಕೆಗಳ ಮೇಲೆ ಯಾವುದೇ ನಿರ್ಬಂಧ ಇರಬಾರದು ಎಂಬ ಇನ್ನೊಂದು ವಿಚಾರ ಖಾಸಗಿಯವರಿಗೆ ಪ್ರೋತ್ಸಾಹ ನೀಡುವುದಕ್ಕಾಗಿ ಇಂತಹ ಉದಾರೀಕರಣ. ಒಟ್ಟಾರೆಯಾಗಿ ಅಭಿವೃದ್ಧಿಯ ಒಟ್ಟಾರೆ ಜವಾಬ್ದಾರಿಯೇ ಖಾಸಗಿಯವರಿಗೆ . ಖಾಸಗಿ ಬಂಡವಾಳಿಗರು ಎಂದಿಗೂ ಜವಾಬ್ದಾರಿಯಿಂದ ವರ್ತಿಸಿದ ಇತಿಹಾಸವಿಲ್ಲ. ಅವರಿರುವುದು, ಹೂಡಿಕೆ ಮಾಡುವುದು ಲಾಭಕ್ಕಾಗಿ. ಲಾಭಕ್ಕಾಗಿಯೇ ಅವರ ಎಲ್ಲ ಚಟುವಟಿಕೆಗಳು. ಅಂತಹ ಖಾಸಗಿಯವರಿಗೆ ಅನುಕೂಲ ಮಾಡಿಕೊಡುವುದು ಸರ್ಕಾರದ ಕೆಲಸ!

ಈಗ ಮತ್ತೆ ಮೊದಲಿನ ವಿಚಾರಕ್ಕೆ ಹೋದರೆ ಈ ಖಾಸಗಿಯವರೇ ತೆರಿಗೆ ತಪ್ಪಿಸಿ ಕಪ್ಪು ಹಣ ಮಾಡಿಕೊಂಡಿದ್ದು, ಸರ್ಕಾರದ ಬೊಕ್ಕಸವನ್ನು ಸೊರಗಿಸಿದ್ದು ಎಲ್ಲವೂ. ಅವರಿಗೇ ಅಭಿವೃದ್ಧಿಯ ಹೆಸರಿನಲ್ಲಿ, ಮತ್ತೆ ಮಿತಿಮೀರಿ ಲಾಭ ಮಾಡಿಕೊಳ್ಳಲು ಅನುಕೂಲ.

ವಿಡಿಐಎಸ್ ನಂತಹ ಯೋಜನೆ ಯಶಸ್ವಿಯಾಗಿರುವುದಕ್ಕೆ ಇರುವ ಕಾರಣವೇ ಅದು. ಬಂಡವಾಳಿಗರಿಗೆ ಅನುಕೂಲ ಮಾಡಿಕೊಡುವ ಯೋಜನೆ ಇದು. ಆದ್ದರಿಂದಲೇ ಅದು ಯಶಸ್ವಿ. ಈ ಕಾರ್ಯಕ್ರಮದ ಉದ್ದೇಶವೂ ಅದೇ ಬಂಡವಾಳಿಗರಿಗೆ ಲಾಭ ಮಾಡಿಕೊಡುವ ಉದ್ದೇಶ. ಎದ್ದರೂ ಸಾವಿರ, ಬಿದ್ದರೂ ಸಾವಿರ ಎನ್ನುತ್ತಾರಲ್ಲ ಹಾಗೆ.

ಹೇಗಿದೆ ಈ ಕಾರ್ಯಕ್ರಮ!

ಈಗ ಇತರ ಆರ್ಥಿಕ ವಿಷಯಗಳು

ವಿಡಿಐಎಸ್ ಯೋಜನೆ ಕೊನೆಗೊಂಡಿದೆ. ಸರ್ಕಾರಕ್ಕೆ ಈ ಯೋಜನೆಯ ಯಶಸ್ಸಿನ ಮತ್ತು ಸ್ವಲ್ಪ ಏರಿರಬಹುದು. ಅದು ಆರ್ಥಿಕ ತಳಹದಿಯ ಮೇಲೇ ವರಮಾನ ತೆರಿಗೆ ಸಂಗ್ರಹಣೆಯನ್ನು ಹೆಚ್ಚಿಸುವ ಇನ್ನೊಂದು ಯೋಜನೆಯನ್ನು ಹರಡಿಕೊಂಡಿದೆ.

ಸೆಲ್ ಫೋನ್, ತೋಟದ ಮನೆ ಇತ್ಯಾದಿಗಳಿರುವವರು ಈಗ ಕಡ್ಡಾಯವಾಗಿ ವರಮಾನ ತೆರಿಗೆ ವರದಿ ಸಲ್ಲಿಸಬೇಕು. ಈ ಕಡ್ಡಾಯದಿಂದ ಅಲ್ಪಸ್ವಲ್ಪ ತೆರಿಗೆ ವಸೂಲಿಯಾಗಬಹುದು ನಿಜ, ಆದರೆ ಇದು ಹಿಂಬಾಗಿಲಿನ ತಂತ್ರ ಎಂಬುದು ಸ್ಪಷ್ಟ. ತೆರಿಗೆಯನ್ನು ನೇರವಾಗಿ ವಸೂಲಿ ಮಾಡುವ ಬದಲು ಇಂತಹ ಯೋಜನೆಗಳನ್ನು ಹಾಕಿಕೊಂಡು ತೆರಿಗೆಗಳ್ಳರು ಏನೋ ಒಂದು ಘೋಷಣೆ ಮಾಡಿ ತೆರಿಗೆ ಸಲ್ಲಿಸಿದರೆ ಅದನ್ನೇ ಒಪ್ಪಿಕೊಂಡು ಬಿಡುವುದು.

ಇಂತಹ ಯೋಜನೆಗಳಿಂದ ಹಾನಿಯಾಗುವುದು ದೇಶದ ಬಡಜನರಿಗೆ ದುಡಿವ ಜನಕೋಟಿಗೆ. ಈ ಬಡಜನ ಒಪ್ಪೊತ್ತಿನ ಊಟ ಮಾಡುತ್ತೇವೆ ಕೆಲಸ ನೀಡಿ. ನೀವು ನೀಡುವ ಅಲ್ಪ ಕೆಲಸ ಅಲ್ಪ ಆದಾಯವನ್ನೇ ತರುವುದು. ಈ ಹಣದಲ್ಲೇ ನಮಗೆ ಕಡಿಮೆ ದರದಲ್ಲಿ ಸ್ವಲ್ಪವಾದರೂ ಅನ್ನ ದೊರೆಯುವಂತೆ ಮಾಡಿ ಎಂದರೆ ಅದು ಉದ್ಧಟತನ! ಈ ಜನರ ಸೋಮಾರಿತನಕ್ಕೆ ಅದು ನಿದರ್ಶನ! ಆದರೆ ಉಳ್ಳ ಈ ದೊಡ್ಡವರು ತೆರಿಗಗಳ್ಳತನ ಮಾಡಿ ಬಡವರ ಹೊಟ್ಟೆಯ ಮೇಲೇ ನೇರವಾಗಿ ಹೊಡೆದರೆ ಅದು ಘನ ಕಾರ್ಯ. ಹೇಗಿದೆ ಬಂಡವಾಳಿಗರ ಈ (ಅ)ನ್ಯಾಯ?

ವಿಡಿಐಎಸ್ ನಲ್ಲಿ ಬಂದದ್ದು ವಿಆರ್‌ಎಸ್ ಗೆ

ಹೋಗಲಿ ಏನೋ ವಿಡಿಐಎಸ್‌ನಲ್ಲಿ ಅಪಾರ ಮೊತ್ತದ ಹಣ ಬಂತಲ್ಲ ಅದನ್ನಾದರೂ ಬಡಜನರ ಉಪಯೋಗಕ್ಕೆ ಬಳಸುತ್ತಾರಲ್ಲ ಎನ್ನಬಹುದು. ಯಾಕೆಂದರೆ ಯೋಜನಾ ವೆಚ್ಚದಲ್ಲಿನ ಶೇ 5 ರ ಕಡಿತವನ್ನು ಈಗ ತೆಗೆದು ಹಾಕಲಾಗಿದೆ. ಇದು ಒಂದು ಮುಖ. ಇನ್ನೊಂದು ಮುಖ ಬಹಳ ಗಂಭೀರವಾದದ್ದು. ಸಾರ್ವಜನಿಕ ಉದ್ದಿಮೆಗಳ ಶೇರು ಮಾರಾಟದಿಂದ ಬಂದ ಹಣ ಮತ್ತು ವಿಡಿಐಎಸ್‌ನಲ್ಲಿ ಸಂಗ್ರಹವಾದ ಹಣದ ಒಂದು ಭಾಗವನ್ನು ಸೇರಿಸಿ ವಿಆರ್‌ಎಸ್ ಗೆ ಬಳಸಬಹುದು. ವಿಆರ್‌ಎಸ್ ಎಂದರೆ ವಾಲಂಟರಿ ರಿಟೈರ್‌ಮೆಂಟ್ ಸ್ಕೀಮ್ ಅರ್ಥಾತ್ ಸ್ವಯಂ ನಿವೃತ್ತಿ ಯೋಜನೆ.

ಈ ವಿಆರ್‌ಎಸ್‌ನಲ್ಲಿ ನಿರುದ್ಯೋಗಿಯಾದ ಕೆಲಸಗಾರನಿಗೆ ಮತ್ತೆ ಬೇರೆಡೆ ಉದ್ಯೋಗಕ್ಕೆ ಸೇರಿಕೊಳ್ಳಲು ನೆರವಾಗುವಂತೆ ತರಬೇತಿ ಏರ್ಪಡಿಸುವುದು ಇತ್ಯಾದಿಯೆಲ್ಲ ಇದೆ. ಆದರೆ ಅದೆಲ್ಲ ಬರೀ ಬಾಯಿ ಮಾತಿಗೆ ಮಾತ್ರ. ನಿಜದಲ್ಲಿ ಈ ರೋಗಗ್ರಸ್ತ ಉದ್ದಿಮೆಗಳ ಕಾರ್ಮಿಕರನ್ನು ಮನೆಗೆ ಕಳುಹಿಸುವುದೇ ನಿಜವಾದ ಉದ್ದೇಶ. ಸಾರ್ವಜನಿಕ ವಲಯದ ಉದ್ದಿಮೆಗಳಿಗೆ ಅನುಕೂಲ. ಸಾರ್ವಜನಿಕ ಉದ್ದಿಮೆಗಳಲ್ಲಿನ ಕುಶಲ ಕಾರ್ಮಿಕರನ್ನು ಇವರು ಕಡಿಮೆ ಸಂಬಳಕ್ಕೆ ನೇಮಿಸಿಕೊಳ್ಳಬಹುದು. ಕಾರ್ಮಿಕರನ್ನು ಯಾವಾಗೆಂದರೆ ಆಗ ಮನೆಗೆ ಕಳುಹಿಸುತ್ತಿರಬಹುದು. ಬಹುರಾಷ್ಟ್ರೀಯ ಕಂಪನಿಗಳು ಮತ್ತು ನಮ್ಮಲ್ಲಿನ ದೊಡ್ಡ ಬಂಡವಾಳಿಗರು ಈ ವಿಆರ್‌ಎಸ್ ಅನ್ನು ಕೂಡಲೇ ಜಾರಿಗೆ ತನ್ನಿರೆಂದು ಒತ್ತಡ ಹೇರುತ್ತಲೇ ಇದ್ದಾರೆ. ಆದ್ದರಿಂದಲೇ ಈ ಕ್ರಮ. ಉದಾರೀಕರಣದ ಒಳಸುಳಿಗಳು ಹೀಗೆ ಒಂದರೊಳಗೊಂದು ತಳುಕು ಹಾಕಿಕೊಂಡಿರುವುದು ಕಾಣುತ್ತಿದೆಯಲ್ಲವೇ ?

ವಿದೇಶೀ ಹೂಡಿಕೆ : ಮಂಗಗಳ ಉಪವಾಸ

ವಿದೇಶೀ ಹೂಡಿಕೆಗೂ ಮಂಗಗಳ ಉಪವಾಸಕ್ಕೂ ಏನು ಸಂಬಂಧ ಎಂದು ನಗಬಹುದು. ಆದರೆ ಉದಾರೀಕರಣದ ಕ್ರಮಗಳು ಹೇಗೆ ಬರುತ್ತಿವೆಯೆಂದರೆ ಅದು ಮಂಗಗಳ ಉಪವಾಸದ ಕತೆಯಂತೆಯೇ. ವಾಸ್ತವವಾಗಿ ವಿದೇಶೀ ಹೂಡಿಕೆ ನಮ್ಮಲ್ಲಿ ಬರಬೇಕಾದರೆ ಅದು ಎಂತಹದ್ದು ನಮಗೆ ಎಷ್ಟು ಪ್ರಯೋಜನಕಾರಿ ನಮ್ಮ ಉದ್ದಿಮೆಗಳ ಮೇಲೆ ಜನರ ಮೇಲೆ ಎಂತಹ ಪರಿಣಾಮ ಬೀರುತ್ತದೆ ಎಂಬಿತ್ಯಾದಿಗಳನ್ನೆಲ್ಲ ಪರಿಶೀಲಿಸಬೇಕಾಗುತ್ತದೆ.

ಹಿಂದೆ ಇಡೀ ಕೇಂದ್ರ ಸಂಪುಟವೇ ಕುಳಿತು ಈ ಪರಿಶೀಲನೆ ಮಾಡುತ್ತಿತ್ತು. ನಮಗೆ ಹಾನಿಕಾರಕವಲ್ಲದಿದ್ದರೆ ಪರಸ್ಪರರಿಗೆ ಲಾಭವಿದ್ದರೆ ಅನುಮತಿ ದೊರೆಯುತ್ತಿತ್ತು. ಅ ನಂತರ ವಿದೇಶೀ ಹೂಡಿಕೆ ಅಭಿವೃದ್ಧಿ ಮಂಡಳಿ ಈ ಕೆಲಸವನ್ನು ಮಾಡುತ್ತಿತ್ತು. ಈಗ ಈ ಮಂಡಳಿಯನ್ನು ರದ್ದು ಮಾಡಲು ಜೋರಾಗಿ ಒತ್ತಡ ಬರುತ್ತಿದೆ. ಅಂದರೆ ಭಾರತೀಯ ರಿಸರ್ವ್ ಬ್ಯಾಂಕ್ ಈ ಸಂಬಂಧವಾದ ಅನು ಮತಿ ನೀಡಿದರೆ ಸಾಕು. ಬೇರಾರೂ ಈ ವಿಷಯದಲ್ಲಿ ವಿಚಾರ ಮಾಡುವುದು ಬೇಡ ಎಂಬಂತಹ ತೀರ್ಮಾನವನ್ನು ತೆಗೆದು ಕೊಳ್ಳಲಾಗುತ್ತಿದೆ.

ಇಂತಹ ತೀರ್ಮಾನ ದೇಶದ, ದೇಶದ ಜನರಿಗೆ ಅನುಕೂಲಕರವಾಗಿರುವುದಿಲ್ಲ. ಬದಲಿಗೆ ದೇಶಕ್ಕೆ ಹಾನಿಕರಕವಾಗಿರುತ್ತದೆ ಎಂಬುದು ಸ್ಪಷ್ಟ. ತನಗೆ ಅಪಾರ ಲಾಭ ದೊರೆವ ಕ್ಷೇತ್ರಗಳಿಗೆ ಮಾತ್ರ ವಿದೇಶೀ ಹೂಡಿಕೆ ಹರಿದು ಬರುತ್ತದೆ. ನಮ್ಮ ದೇಶಕ್ಕೆ ಅವಶ್ಯವಾದ ಕ್ಷೇತ್ರಗಳಿಗೆ ಈ ವಿದೇಶೀ ಹಣ ಹರಿದು ಬರುವುದಿಲ್ಲ. ಹೀಗೆ ಒಂದೊಂದೇ ನಿರ್ಬಂಧಗಳನ್ನು ತೆಗೆದು ಹಾಕಿ ನಮ್ಮ ದೇಶದ ಅಭಿವೃದ್ಧಿ ಅನಭಿವೃದ್ಧಿ ಪಥವನ್ನು ಈ ವಿದೇಶೀ ಹೂಡಿಕೆಗಾರರೇ ನಿರ್ಧರಿಸುವಂತಹ ಪರಿಸ್ಥಿತಿ ಉಂಟಾಗುತ್ತದೆ.

ಮೂಡಿಯ ಮೋಡಿ

ಮೂಡಿಸ್ ಎಂಬುದು ಅಂತರಾಷ್ಟ್ರೀಯ ರೇಟಿಂಗ್ ಸಂಸ್ಥೆ. ರೇಟಿಂಗ್ ಸಂಸ್ಥೆ ಎಂದರೆ ಯಾವುದೇ ಒಂದು ದೇಶದ ಆರ್ಥಿಕ ಅರ್ಹತೆ ಏನು ಎಂದು ತೀರ್ಮಾನಿಸುವ ಸಂಸ್ಥೆ. ಇನ್ನೂ ಸರಳವಾಗಿ ಹೇಳುವುದಾದರೆ ವಿದೇಶಿಯರು ಹಣ ಹೂಡಿಕೆ ಮಾಡಲು ಇಂತಿಂತಹ ದೇಶ ಅರ್ಹವೇ ಇಲ್ಲವೇ. ಮುಖ್ಯವಾಗಿ ಅಲ್ಲಿ ಹೂಡಿಕೆ ಮಾಡಿದರೆ ಪ್ರತಿಫಲ ದೊರೆಯುತ್ತದೆಯೇ ಇಲ್ಲವೇ, ಎಂಬುದನ್ನು ತೀರ್ಮಾನಿಸುವ ಸಂಸ್ಥೆ.

ಮೂಡೀಸ್ ಭಾರತದ ಬಗ್ಗೆ ಬರೆದದ್ದನ್ನೂ ವಿದೇಶೀ ಹೂಡಿಕೆದಾರರು ಓದಿ ಇಲ್ಲಿ ಹೂಡಿಕೆ ಮಾಡಬೇಕೋ ಬೇಡವೋ ಎಂದು ತೀರ್ಮಾನಿಸುತ್ತಾರೆ. ಈ ಮೂಡೀಸ್ ಭಾರತದ ಬಗ್ಗೆ ತನ್ನ ಹಿಂದಿನ ರೇಟಿಂಗ್‌ಗಳನ್ನು ಬದಲಿಸಿ ಇನ್ನೂ ಕೆಳಮಟ್ಟದ ಬಿಎಎಸ್ ರೇಟಿಂಗ್ ನೀಡುವ ವಿಚಾರ ಮಾಡುತ್ತಿ ದೆಯಂತೆ.

ಭಾರತದ ಹಲವು ಆರ್ಥಿಕ ತಜ್ಞರು ಇದನ್ನು ವಿರೋಧಿಸಿದ್ದಾರೆ. ಭಾರತೀಯ ರಿಸರ್ವ್ ಬ್ಯಾಂಕಿನ ಗವರ್ನರ್ ಅವರು ನಮ್ಮ ಶಕ್ತಿಗಳನ್ನು ಗಮನಿಸಬೇಕು ಎಂದಿದ್ದಾರೆ,ಇರಲಿ.

ಉದಾರೀಕರಣದಡಿ ಒಂದು ದೇಶದ ಭವಿಷ್ಯವೇ ಹೇಗೆ ಇಂತಹ ಒಂದು ರೇಟಿಂಗ್ ಕಂಪನಿಯ ಮೇಲೆ ಅವಲಂಬಿತವಾಗುತ್ತದೆ ಮತ್ತು ಈ ವಿದೇಶೀ ಹೂಡಿಕೆ ಎಂಬುದು ಎಂತಹ ಮರೀಚಿಕೆ ಎಂಬುದನ್ನು ಇದು ತೋರಿಸಿ ಕೊಡುತ್ತದೆ. ಉದಾರೀಕರಣವಾದಿಗಳಿಗೆ ಮಾತ್ರ ಇದು ಅರ್ಥವಾಗುತ್ತಿರುವಂತಿಲ್ಲ, ಇಲ್ಲ ಜಾಣ ದಡ್ಡತನವೇ ಇದು!

16ನೇ ರಾಜ್ಯ ಸಮ್ಮೇಳನ ಕೋಲಾರ ಸಿ.ಪಿ.ಐ.(ಎಂ)

ನಿರ್ಣಯಗಳು

ರಾಜ್ಯದ ವಿವಿಧ ದುಡಿಯುವ ಜನವಿಭಾಗಗಳ ಸಮಸ್ಯೆಗಳತ್ತ, ಅವುಗಳ ಪರಿಹಾರದತ್ತ, ರಾಜ್ಯದ ಅಭಿವದ್ದಿ ಅವಶ್ಯಕತೆಗಳತ್ತ ಗಮನ ಸೆಳೆದಿರುವ ಸಿಪಿಐ(ಎಂ) ನ 16ನೇ ರಾಜ್ಯಸಮ್ಮೇಳನದ ನಿರ್ಣಯಗಳಲ್ಲಿ ಕೆಲವನ್ನು ಕಳೆದ ಸಂಚಿಕೆಯೇ ಓದುವಿರಿ. ಇಲ್ಲಿ ಇನ್ನೂ ಕೆಲವು ನಿರ್ಣಯಗಳನ್ನು ಕೊಡಲಾಗಿದೆ.

ವಳ್ಳಿಯಪ್ಪ ಟೆಕ್ಸ್‌ಟೈಲ್ ಕಾರ್ಖಾನೆಯ ಕಾರ್ಮಿಕರ ಮೇಲೆ ಪೋಲೀಸ್ ದೌರ್ಜನ್ಯ ಖಂಡನೆ

ರಾಮನಗರ ವಿಧಾನಸಭಾ ಕ್ಷೇತ್ರದ ಹೆಜ್ಜಾಲದ ವಳ್ಳಿಯಪ್ಪ ಟೆಕ್ಸ್‌ಟೈಲ್ಸ್ ಕಾರ್ಮಿಕರ ಹೋರಾಟ ಅತಿ ತೀವ್ರವಾದ ಹೋರಾಟ. ಕಾರ್ಖಾನೆಯಲ್ಲಿ ದುಡಿಯುವ 400 ಮಂದಿ ಕಾರ್ಮಿಕರಲ್ಲಿ ಹೆಚ್ಚಿನವರು ಅಕ್ಕಪಕ್ಕದಲ್ಲಿ ವಾಸಮಾಡುವ ಕೃಷಿಕ ಮೂಲದವರು. ಈ ಪ್ರದೇಶದಿಂದ ದೇವೇಗೌಡರು ಅಸೆಂಬ್ಲಿಗೆ ಚುನಾಯಿತರಾಗಿ ರಾಜ್ಯದ ಮುಖ್ಯಮಂತ್ರಿಯಾದರು. ಸಿಐಟಿಯು ಸಂಘದ ಮಾನ್ಯತೆ, ಹಲವಾರು ವರ್ಷಗಳಿಂದ ಅತಿ ಕಡಿಮೆ ಕೂಲಿಗೆ ಅರ್ಧಕ್ಕರ್ಧ ಹೆಚ್ಚುವರಿ ಅಪ್ರೆಂಟಿಸ್‌ಗಳೆಂದು ಕರೆಯಲ್ಪಡುವ, ದುಡಿಯುತ್ತಿದ್ದ ಕಾರ್ಮಿಕರ ಕೆಲಸದ ಭದ್ರತೆ, ಸಂಬಳ ಹೆಚ್ಚಳ ಇತ್ಯಾದಿ ಬೇಡಿಕೆಗಳಿಗೆ ನಡೆಸುತ್ತಿದ್ದ ಹೋರಾಟಕ್ಕೆ ಸೂಕ್ತ ಪರಿಹಾರ ಒದಗಿಸುತ್ತೇನೆಂದು ದೇವೇಗೌಡರು ಚುನಾವಣೆಯ ಕಾಲದಲ್ಲಿ ಕೊಟ್ಟಿದ್ದ ಆಶ್ವಾಸನೆ ಮಾಲೀಕರುಗಳ ಸಂಘದ ಅಧ್ಯಕ್ಷನಾಗಿದ್ದ ವಳ್ಳಿಯಪ್ಪರವರ ಪ್ರಭಾವದಿಂದ ಈಡೇರಲಿಲ್ಲ. 5-6 ತಿಂಗಳ ಪರ್ಯಂತ ಎರಡು ಬಾರಿ ಬೀಗಮುದ್ರೆ, 10 ಮಂದಿ ಕಾರ್ಮಿಕ ನೇತಾರರ ಡಿಸ್‌ಮಿಸ್, ಸೆಕ್ಷನ್ 307 ಸೇರಿ ಹಲವಾರು ಕ್ರಿಮಿನಲ್ ಮೊಕದ್ದಮೆಗಳನ್ನು ಕಾರ್ಮಿಕರು ಎದುರಿಸ ಬೇಕಾಯಿತು. ಸಿಐಟಿಯು ಸಂಘ ಮುರಿಯಬೇಕೆಂದು ಈ ಮಾಲಿಕ ಕೋಟಿಗಟ್ಟಲೆ ರೂಪಾಯಿ ಖರ್ಚು ಮಾಡಿದ್ದಾನೆ.

ಈ ಮಧ್ಯೆ ಲೋಕಸಭೆಗೆ ಈ ಪ್ರದೇಶದಿಂದ ಚುನಾಯಿತರಾದ ಕುಮಾರಸ್ವಾಮಿಯವರೂ ಕೂಡ ಈ ಮಾಲಿಕನ ಪ್ರಭಾವದ ಎದುರು ಕಾರ್ಮಿಕರಿಗೆ ಯಾವ ಪರಿಹಾರ ಕೊಡಿಸಲೂ ಶಕ್ತರಾಗಲಿಲ್ಲ. ಮುಖ್ಯಮಂತ್ರಿ ಉಪ ಮುಖ್ಯಮಂತ್ರಿಗಳ ಮನೆಗಳ ಮುಂದೆ ಧರಣಿ, ಮೆರವಣಿಗೆ ಸಭೆ ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡೂ 2 ವರ್ಷಗಳಲ್ಲೂ ಸಮಸ್ಯೆ ಇತ್ಯರ್ಥವಾಗದಾಗ ಸಂಘವು ಕಾರ್ಖಾನೆಯ ಮುಂಭಾಗದಲ್ಲಿ ಎರಡು ಗಂಟೆಗಳ ಕಾಲದ ರಸ್ತೆರೋಕೋ ಕಾರ್ಯಕ್ರಮ ಹಮ್ಮಿಕೊಂಡಿತು. ಆಗಲೇ ನಡೆಸುತ್ತಿದ್ದ ಸಿಐಟಿಯು ಸಮ್ಮೇಳನದಲ್ಲೂ ಈ ಕಾರ್ಯಕ್ರಮವನ್ನು ಬೆಂಬಲಿಸಿ ದರು. ದೇಶದ ಪ್ರಧಾನಿ ದೇವೇಗೌಡರು ದೇಶದ ಪ್ರಧಾನಿಯಾದ್ದರಿಂದ ತೆರವಾದ ಈ ಪ್ರದೇಶದಲ್ಲಿ ಕೂಡಾ ಚುನಾವಣೆ ಬರುತ್ತಿದ್ದರೂ ರಾಜ್ಯದ ಮುಖ್ಯಮಂತ್ರಿ ಮತ್ತು ಉತ್ತಮ ಮುಖ್ಯಮಂತ್ರಿಯವರು ಒಂದು ಸಭೆಯನ್ನೂ ಕರೆಯದೇ ಕಾರ್ಮಿಕರಿಗೆ ಕಾರ್ಯಕ್ರಮವನ್ನು ಜಾರಿಗೆ ತರುವುದಲ್ಲದೆ ಬೇರೆದಾರಿಯಿರಲಿಲ್ಲ. ಕಾರ್ಮಿಕರು ಕುಟುಂಬ ಸಮೇತ ಈ ಕಾರ್ಯಕ್ರಮದಲ್ಲಿ 3-2-97 ರಂದು ಭಾಗವಹಿಸಿದರು. ಒಂದು ಗಂಟೆಯ ಕಾಲ ಕಾರ್ಯಕ್ರಮ ನಡೆಸಲು ಬಿಟ್ಟು ಪೋಲೀಸರು ನಂತರ ಮುಂಬಾಗದಲ್ಲಿ ಕುಳಿತಿದ್ದ ಹೆಣ್ಣು ಮಕ್ಕಳನ್ನು ಬಲವಂತವಾಗಿ ಎಳೆದೆಬ್ಬಿಸಲು ಲಾಠಿ ಪ್ರಹಾರ ಮಾಡಲು ಪ್ರಾರಂಭಿಸಿದರು. ನಮ್ಮನ್ನು ಬೇಕಾದರೆ ಬಂಧಿಸಿ, ಶಾಂತಿಯುತವಾಗಿ ಬಂಧನಕ್ಕೊಳಗಾಗುತ್ತೇವೆಂಬ ಮುಖಂಡರ ಮನವಿಯನ್ನು ಪೋಲೀಸರು ಧಿಕ್ಕರಿಸಿ ಅಶ್ರುವಾಯು ಪ್ರಯೋಗ, ಕಾರ್ಮಿಕರ ಚಪ್ಪರಕ್ಕೆ ಬೆಂಕಿ ಹಚ್ಚುವಿಕೆ ಇತ್ಯಾದಿ ದುಷ್ಕೃತ್ಯಗಳಿಗಿಳಿದರು. ಕಾರ್ಮಿಕರು ಮತ್ತು ಅವರ ಕುಟುಂಬದವರು ಚೆಲ್ಲಾಪಿಲ್ಲಿಯಾಗಿ ಓಡತೊಡಗಿದಾಗಲೂ ಬಿಡದೆ, ಪೂರ್ವಯೋಜಿತವಾಗಿ ತಯಾರಾದಂತೆ ಗುಂಡುಗಳನ್ನು ಅಟ್ಟಿಸಿಕೊಂಡು ಹೋಗಿ ಹಲವರುಗಳ ಮೇಲೆ ಹಾರಿಸಿದರು. 3 ಮಂದಿ ಗುಂಡೇಟಿನಿಂದ ಸತ್ತು ಹಲವಾರು ಮಂದಿ ಗಾಯಗೊಂಡರು. ಪೋಲೀಸರು ನಂತರ ರಾಜ್ಯ ಸಿಐಟಿಯು ಪ್ರಧಾನ ಕಾರ್ಯದರ್ಶಿಯಾದ ಕಾಂ.ವಿ.ಜೆ.ಕೆ. ನಾಯರ್‌ರನ್ನೊಳಗೊಂಡು ಹಲವಾರು ಮಂದಿಯನ್ನು ಅಕ್ರಮವಾಗಿ ಬಂಧಿಸಿ ಅವರುಗಳ ಮೇಲೆ ಐಪಿಸಿ ಸೆಕ್ಷನ್ 307 (ಕೊಲೆಗೆ ಪ್ರಯತ್ನ) ಸೇರಿಸಿ ಕ್ರಿಮಿನಲ್ ಮೊಕದ್ದಮೆಯನ್ನು ಹಾಕಿದರು. ಇದರ ವಿರುದ್ಧ ಬೆಂಗಳೂರಲ್ಲಿ ಮರುದಿನ ಬೃಹತ್ ಪ್ರದರ್ಶನ ನಡೆಯಿತು. ಆದರೆ ಮುಖ್ಯಮಂತ್ರಿಯವರು ಕಾಂ. ವಿ.ಜೆ.ಕೆ.ಯವರನ್ನು ಬಿಡುಗಡೆ ಮಾಡುತ್ತೇವೆಂದು ಕೊಟ್ಟ ಆಶ್ವಾಸನೆಯನ್ನು ನಡೆಸಿಕೊಡಲಿಲ್ಲ.

ಸಿಪಿಐ(ಎಂ) 16ನೇ ರಾಜ್ಯ ಸಮ್ಮೇಳನ ಕಾರ್ಮಿಕರ ನ್ಯಾಯವಾದ ಬೇಡಿಕೆಗಳ ಬಗ್ಗೆ ಅತೀವ ಅಸಡ್ಡೆತನ ತೋರಿಸುತ್ತಿರುವ ಮಾಲಿಕರೊಂದಿಗೆ ಶಾಮೀಲಾಗಿ ಕಾರ್ಮಿಕರ ಹೋರಾಟಗಳನ್ನು ಸದೆಬಡಿಯುತ್ತಿರುವ ಜನತಾದಳ ಸರಕಾರದ ಧೋರಣೆಯನ್ನು ತೀವ್ರವಾಗಿ ಖಂಡಿಸುತ್ತದೆ.

3 ಜನ ಅಮಾಯಕರನ್ನು ಬಲಿತೆಗೆದುಕೊಂಡು ಅನೇಕರಿಗೆ ಗಾಯಗಳಾದುದನ್ನು ಖಂಡಿಸುತ್ತದೆ.

ಈ ಧೋರಣೆ ಕೋಮುವಾದಿ ಶಕ್ತಿಗಳು ರಾಜ್ಯದಲ್ಲಿ ಪ್ರಬಲವಾಗಲು ಇಂಬುಕೊಡುತ್ತದೆ. ಇದನ್ನು ಸರಿಪಡಿಸಿಕೊಂಡು ಕೂಡಲೇ ವಳ್ಳಿಯಪ್ಪ ಕಾರ್ಮಿಕರ ಸಮಸ್ಯೆಗಳನ್ನು ಇತ್ಯರ್ಥಪಡಿಸಿ, ಕ್ರಿಮಿನಲ್ ಮೊಕದ್ದಮೆಗಳನ್ನು ಹುಟ್ಟಿಹಾಕಿಕೊಂಡು ಗುಂಡೇಟಿನಿಂದ ಮೃತಪಟ್ಟವರಿಗೆ ಮತ್ತು ಗಾಯಗೊಂಡವರಿಗೆ ಹೆಚ್ಚಿನ ಪರಿಹಾರ ಕೊಟ್ಟು ಅಂಗವಿಕಲರಾದವರ ಮತ್ತು ನಿರ್ಗತಿಕರಾದ ಕುಟುಂಬದವರಲ್ಲೊಬ್ಬರಿಗೆ ಸರಕಾರದಲ್ಲಿ ಉದ್ಯೋಗ ಒದಗಿಸಿಕೊಡಬೇಕಾಗಿ ಈ ಸಮ್ಮೇಳನ ಕರೆಕೊಡುತ್ತದೆ.

ಈಗ ನಡೆಯುತ್ತಿರುವ ನ್ಯಾಯಾಂಗ ತನಿಖೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಪೋಲೀಸರ ದೌರ್ಜನ್ಯವನ್ನು ಬಯಲಿಗೆಳೆಯಬೇಕೆಂದೂ ಹೋರಾಟ ನಡೆದ ಪ್ರದೇಶದ ರೈತ ಕಾರ್ಮಿಕರನ್ನು ಒಗ್ಗೂಡಿಸಿ ನಮ್ಮ ಪಾರ್ಟಿಯ ನೆಲೆಯನ್ನು ಬಲಪಡಿಸಬೇಕೆಂದೂ ಈ ಸಮ್ಮೇಳನ ಕಾರ್ಯಕರ್ತರಿಗೆ ಕರೆ ಕೊಡುತ್ತದೆ.

ಮಂಡನೆ: ಕೆ.ಎಸ್. ಸುಬ್ರಮಣ್ಯ
ಅನುಮೋಧನೆ: ಎಂ. ರಾಜಣ್ಣ

ರಾಜ್ಯದಲ್ಲಿ ಪ್ರತ್ಯೇಕತಾ ಚಳುವಳಿಯ ವಿರುದ್ಧ

ಕರ್ನಾಟಕ ರಾಜ್ಯದಲ್ಲಿ ಇತ್ತೀಚಿಗಿನ ವರ್ಷಗಳಲ್ಲಿ ಪ್ರಾದೇಶಿಕ ಅಸಮಾನತೆಯನ್ನು ಮುಂದೊಡ್ಡಿ ಉತ್ತರ ಕರ್ನಾಟಕ, ಕೊಡಗು ಜಿಲ್ಲೆಯು ಪ್ರತ್ಯೇಕ ರಾಜ್ಯಗವಾಗಬೇಕು ಎಂದು ಹಲವು ಅತೃಪ್ತ ಸ್ಥಳೀಯ ಭೂಮಾಲೀಕ ರಾಜಕೀಯ ಶಕ್ತಿಗಳು ಹಾಗೂ ಸ್ಥಾಪಿತ ಹಿತಾಸಕ್ತಿಗಳು ಚಳುವಳಿ ನಡೆಸುತ್ತಾ ರಾಷ್ಟ್ರೀಯ ಸಮಗ್ರತೆಗೆ ಮತ್ತು ಕರ್ನಾಟಕ ಏಕೀಕರಣಕ್ಕೆ ಅಪಾಯ ಒಡ್ಡುತ್ತಿರುವುದನ್ನು ಸಿ.ಪಿ.ಐ.(ಎಂ) ರಾಜ್ಯ 16ನೇ ಸಮ್ಮೇಳನವು ತೀವ್ರವಾಗಿ ಖಂಡಿಸುತ್ತದೆ. ಪ್ರಾದೇಶಿಕ ಅಸಮಾನತೆ ರಾಜ್ಯದಲ್ಲಿ ಹಾಸು ಹೊಕ್ಕಾಗಿರುವ ಬಂಡವಾಳಶಾಹಿ ಭೂಮಾಲಿಕ ಸಾಮಾಜಿಕ ವ್ಯವಸ್ಥೆಯೇ ಮೂಲಭೂತ ಕಾರಣವೆಂದು ಸಿ.ಪಿ.ಐ.(ಎಂ) ಧೃಡವಾಗಿ ನಂಬುತ್ತದೆ. ಕರ್ನಾಟಕವೂ ಸೇರಿದಂತೆ ದೇಶದ ವಿವಿಧ ಪ್ರದೇಶಗಳಲ್ಲಿ ಪ್ರತ್ಯೇಕತಾವಾದಿ ಹಾಗೂ ವಿಚ್ಛಿದ್ರಕಾರಿ ಚಳುವಳಿಗಳಿಗೆ ಸಾಮ್ರಾಜ್ಯಶಾಹಿಗಳ ಕುಮ್ಮಕ್ಕು ಇರುವುದರ ಕುರಿತೂ ಸಿ.ಪಿ.ಐ.(ಎಂ) ಎಚ್ಚರಿಸುತ್ತದೆ.

ಉತ್ತರ ಕರ್ನಾಟಕ ಪ್ರದೇಶದಿಂದ ಹಲವು ದಶಕಗಳಲ್ಲಿ ಮುಖ್ಯಮಂತ್ರಿಗಳು, ಮಂತ್ರಿಗಳು ರಾಜ್ಯದಲ್ಲಿ ಅಧಿಕಾರಕ್ಕೆ ಬಂದು ಹೋದರು ಅಭಿವೃದ್ಧಿಯಲ್ಲಿ ಹಿಂದೆ ಬೀಳಲು ಕಾರಣ ಏನು ಎಂದು ಚಿಂತೆ ಮಾಡುವ ಬದಲು, ಅಧಿಕಾರದಲ್ಲಿ ಇಲ್ಲದಾಗ ಮಾತ್ರ ಈ ಕುರಿತು ಗುಲ್ಲೆಬ್ಬಿಸಿ ಜನರನ್ನು ಪ್ರಾದೇಶಿಕತೆ ಆಧಾರದಲ್ಲಿ ಭಾವೋದ್ರೇಕ ಗೊಳಿಸುತ್ತಿರುವುದನ್ನು ಸಿ.ಪಿ.ಐ.(ಎಂ) ವಿರೋಧಿಸುತ್ತದೆ. ಅಭಿವೃದ್ಧಿಯಲ್ಲಿ ಅಸಮಾನತೆಯು ರಾಜ್ಯದ ಕೆಲವೇ ಜಿಲ್ಲೆಗಳಿಗೆ ಸೀಮಿತವಾಗದೆ, ಪ್ರತಿ ಜಿಲ್ಲೆಯಲ್ಲಿಯೂ ಅಭಿವೃದ್ಧಿಯಲ್ಲಿ ಹಿಂದುಳಿದಿರುವ ಪ್ರದೇಶಗಳಿವೆ. ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸಲು ಮೂಲಭೂತವಾಗಿ ರಾಜ್ಯಾದ್ಯಂತ ಭೂಸುಧಾರಣೆಯನ್ನು ಕಟ್ಟುನಿಟ್ಟಾಗಿ ಜ್ಯಾರಿಗೊಳಿಸಬೇಕೆಂದೂ, ಸಾರಿಗೆ ಸಂಪರ್ಕ, ನೀರಾವರಿ, ವಿದ್ಯುತ್, ಸಣ್ಣ ಮಧ್ಯಮ ಕೈಗಾರಿಕಾ, ಶೈಕ್ಷಣಿಕ ಆರೋಗ್ಯ ಮುಂತಾದ ಅಭಿವೃದ್ಧಿ ಯೋಜನೆಗಳನ್ನು ಜಿಲ್ಲಾವಾರು ಯೋಜನೆಗಳನ್ನು ಜನರು ಪಾಲುಗೊಳ್ಳುವಿಕೆಯ ಮೂಲಕ ರೂಪಿಸಿ ಜ್ಯಾರಿಗೊಳಿಸಬೇಕೆಂದು, ಆ ಮೂಲಕ ಭ್ರಷ್ಟಾಚಾರ ಸ್ವಜನಪಕ್ಷಪಾತಗಳನ್ನು ಹೋಗಲಾಡಿಸಬೇಕೆಂದು ಸಿ.ಪಿ.ಐ.(ಎಂ) ರಾಜ್ಯ ಸಮ್ಮೇಳನ ಕರ್ನಾಟಕ ಸರ್ಕಾರವನ್ನು ಒತ್ತಾಯಿಸುತ್ತದೆ. ಜನರ ಅತೃಪ್ತಿಯನ್ನು ತಪ್ಪುದಾರಿಗೆಳೆಯಲು ಪಟ್ಟಭದ್ರ ಹಿತಾಸಕ್ತಿಗಳು ಮಾಡುತ್ತಿರುವ ಪ್ರಯತ್ನಗಳನ್ನು ಧಿಕ್ಕರಿಸಬೇಕೆಂದು ಅದೇ ಸಮಯದಲ್ಲಿ ಕರ್ನಾಟಕದ ಸಮಾನ ಅಭಿವೃದ್ಧಿಗಾಗಿ ಪ್ರಜಾಸತ್ತಾತ್ಮಕ ಚಳುವಳಿಗೆ ಪ್ರಗತಿಪರ ಶಕ್ತಿಗಳು ಒಂದಾಗಬೇಕೆಂದು ಕರೆ ನೀಡುತ್ತದೆ.

ಈ ದಿಸೆಯಲ್ಲಿ ಪ.ಬಂಗಾಳ, ಕೇರಳ ಮತ್ತು ತ್ರಿಪುರಾ ರಾಜ್ಯಗಳಲ್ಲಿ ಸಿ.ಪಿ.ಐ.(ಎಂ) ನೇತೃತ್ವದ ಎಡರಂಗ ಸರ್ಕಾರಗಳು ಕೈಗೊಂಡ ಫಲಕಾರಿ ಕ್ರಮಗಳನ್ನು ಮಾರ್ಗದರ್ಶಿಯಾಗಿ ಇಟ್ಟುಕೊಳ್ಳಬೇಕೆಂದು ಒತ್ತಾಯಿಸುತ್ತದೆ.

ಕೊಡಗು ಜಿಲ್ಲೆಯಲ್ಲಿ ಕೊಡಗು ರಾಜ್ಯ ಮುಕ್ತಿಮೋರ್ಚಾ ಸಂಘಟನೆಯು ಪ್ರತೇಕತಾವಾದದ ಹೆಸರಿನಲ್ಲಿ ಒಟ್ಟಾರೆ ಜಿಲ್ಲೆಯ ಜನರನ್ನು ಕೊಡವರು ಮತ್ತು ಕೊಡವೇತರರೆಂದು ವಿಭಜಿಸಿ ಉದ್ರೇಕಕಾರಿ ರೀತಿಯಲ್ಲಿ ಜನರ ಐಕ್ಯತೆಯನ್ನು ಒಡೆಯುವ ಪ್ರಯತ್ನವನ್ನು ವಿರೋಧಿಸುತ್ತದೆ.

ಮಂಡನೆ: ಕಾಳಯ್ಯ
ಅನುಮೋದನೆ: ಗೈಬು ಜೈನ್‌ಖಾನ್

ಶಿಕ್ಷಣದ ಖಾಸಗೀಕರಣ ಮತ್ತು ವ್ಯಾಪಾರೀಕರಣವನ್ನು ವಿರೋಧಿಸಿ ನಿರ್ಣಯ

ಶಿಕ್ಷಣವನ್ನು ನೂತನ ಆರ್ಥಿಕ ನೀತಿಯ ಅಗತ್ಯಗಳಿಗೆ ಅನುಗುಣವಾಗಿ ರೂಪಿಸುವ ಹಿನ್ನೆಲೆಯಲ್ಲಿ ನೂತನ ಶಿಕ್ಷಣ ನೀತಿಯ ಜಾರಿ ಕರ್ನಾಟಕದಲ್ಲಿ ವ್ಯಾಪಕವಾಗಿ ನಡೆಯುತ್ತಿದೆ. ಕೆ.ಜಿ.ಯಿಂದ ಹಿಡಿದು ಪಿ.ಜಿ.ಯವರೆಗೆ ಶಿಕ್ಷಣವನ್ನು ಮಾರುವ ಕ್ರಿಯೆ ಅವ್ಯಾಹತವಾಗಿ ಸಾಗಿದೆ. ಪ್ರಾಥಮಿಕ ಶಿಕ್ಷಣವು ಸರ್ಕಾರದ ಆದ್ಯತೆ ಎಂದು ಹೇಳುತ್ತಾ ಉನ್ನತ ಶಿಕ್ಷಣವನ್ನು ಸಂಪೂರ್ಣವಾಗಿ ಸ್ವಂತ ಹಣದ ಶಿಕ್ಷಣವನ್ನಾಗಿ ಮಾರ್ಪಡಿಸುವ ಮತ್ತು ಉನ್ನತ ಹಾಗೂ ಪ್ರಾಥಮಿಕ ಶಿಕ್ಷಣಗಳನ್ನು ಪರಸ್ಪರ ಎತ್ತಿಕಟ್ಟುವ ಹುನ್ನಾರವನ್ನು ರಾಜ್ಯ ಸರ್ಕಾರ ಮಾಡುತ್ತಿದೆ. ಇದರಿಂದಾಗಿ ಒಂದು ಕಡೆಯಲ್ಲಿ ಉನ್ನತ ಶಿಕ್ಷಣವು ಬಡವರ ಪಾಲಿಗೆ ಮರೀಚಿಕೆಯಾಗಿ ಆಗುತ್ತಿದ್ದರೆ, ಮತ್ತೊಂದೆಡೆ ಪ್ರಾಥಮಿಕ ಶಿಕ್ಷಣದಲ್ಲೂ ಸರ್ಕಾರಿ ಹಣದ ವೆಚ್ಚ ಕಡಿಮೆಯೇ ಆಗಿದೆ. ಶಿಕ್ಷಣಕ್ಕೆ ಸರ್ಕಾರ ಮಾಡುವ ವೆಚ್ಚ ಅಗತ್ಯಕ್ಕನುಗುಣವಾಗಿ ಹೆಚ್ಚಳವಾಗದ ಕಾರಣದಿಂದಾಗಿ ಪ್ರಾಥಮಿಕ ಶಿಕ್ಷಣವೂ ಸೇರಿದಂತೆ ಶಿಕ್ಷಣದ ಆಸೆಯನ್ನೇ ಸಾಮಾನ್ಯ ಜನ ಕೈ ಬಿಡಬೇಕಾಗಿದೆ. ಮಹಿಳೆಯರ, ದಲಿತರ ಹಾಗೂ ಹಿಂದುಳಿದವರ ಶೈಕ್ಷಣಿಕ ಅಭಿವೃದ್ಧಿಗೆ ಇದು ಮಾರಕವಾಗಿದೆ.

ಸರ್ಕಾರಿ ಶಾಲೆ/ಕಾಲೇಜುಗಳನ್ನು ಮುಚ್ಚುತ್ತಾ ಖಾಸಗಿ ಸಂಸ್ಥೆಗಳಿಗೆ ಅನುಮತಿ ನೀಡುವ ಕ್ರಿಯೆ ಹೆಚ್ಚುತ್ತಿದೆ. ಪರ್ಯಾಯವನ್ನು ಸೃಷ್ಟಿಸದೆ ಪಿಯುಸಿಯನ್ನು ಪದವಿಯಿಂದ ಬೇರ್ಪಡಿಸುವ ಹೆಸರಲ್ಲಿ ಸರ್ಕಾರಿ ಪಿಯುಸಿ ಕೋರ್ಸುಗಳನ್ನು ಮುಚ್ಚುತ್ತಿರುವುದನ್ನೂ ಈ ಹಿನ್ನೆಲೆಯಲ್ಲೇ ಗಮನಿಸಬೇಕಾಗಿದೆ.

ರಾಜ್ಯದ ಶೈಕ್ಷಣಿಕ ಕ್ಷೇತ್ರ ವಿಪರೀತವಾಗಿ ಜಾತಿಸಂಘಟನೆಗಳ, ಮಠ ಮಾನ್ಯಗಳ ಹಿಡಿತದಲ್ಲಿರುವುದರಿಂದ ರಾಜ್ಯದ ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರದ ಮೇಲೆ ಇದು ದೂರಗಾಮಿ ಪರಿಣಾಮಗಳನ್ನು ಬೀರಲಿದೆ. ವಿ.ವಿ. ಶಿಕ್ಷಣವನ್ನು ಬಹುರಾಷ್ಟ್ರೀಯ ಕಂಪನಿಗಳ ಹಾಗೂ ಶ್ರೀಮಂತ ಕಂಪನಿಗಳ ಬೇಡಿಕೆಯನ್ನಾಧರಿಸಿ ಮಾರ್ಪಡಿಸುವ ಪ್ರೊ: ನವನೀತರಾವ್ ಸಮಿತಿ ವರದಿಯಾಗಲೀ, ಶುಲ್ಕಗಳನ್ನು ವಿಪರೀತವಾಗಿ ಏರಿಸುವ ಕ್ರಮಗಳಾಗಲೀ, ಆಡಳಿತವನ್ನು ಸಂಪೂರ್ಣವಾಗಿ ಅಪ್ರಜಾಸತ್ತಾತ್ಮಕಗೊಳಿಸುವ ಕರ್ನಾಟಕ ವಿ.ವಿ. ಕಾಯ್ದೆಗೆ ತಿದ್ದುಪಡಿ ತರುವ ಮಸೂದೆಯ ಪ್ರಯತ್ನವಾಗಲೀ ಸರ್ಕಾರದ ಖಾಸಗೀಕರಣದ ನೀತಿಗೆ ಕೈಗನ್ನಡಿಯಾಗಿದೆ. ಇತ್ತೀಚೆಗೆ ರಚನೆಯಾಗಿರುವ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸ್ವರೂಪವನ್ನು ಗಮನಿಸಿದರೆ ಇದು ಮತ್ತಷ್ಟು ಸ್ಪಷ್ಟವಾಗುತ್ತದೆ.

ರಾಜ್ಯ ಸರ್ಕಾರದ ಇಂತಹ ನೀತಿಗಳ ವಿರುದ್ಧ ವಿದ್ಯಾರ್ಥಿ ಸಂಘಟನೆಗಳು ಚಳುವಳಿಗಳನ್ನು ರೂಪಿಸಿದಾಗ ಅವುಗಳನ್ನು ದಮನ ಮಾಡಲು ಸರ್ಕಾರ ಅನುಸರಿಸಿದ ಕ್ರಮಗಳು ಖಂಡನೀಯವಾದುದಾಗಿದೆ.

ರಾಜ್ಯ ಜನತಾದಳ ಸರ್ಕಾರವು ಅನುಸರಿಸುತ್ತಿರುವ ಶಿಕ್ಷಣದ ಖಾಸಗೀಕರಣದ ನೀತಿಯನ್ನು ಕೈಬಿಡಬೇಕೆಂದು ಹಾಗೂ ಸರ್ಕಾರಿ ಶಿಕ್ಷಣ ವ್ಯವಸ್ಥೆಯನ್ನು ನಾಶ ಮಾಡುವ ಬದಲಿಗೆ ಗಟ್ಟಿಗೊಳಿಸುವ ಮತ್ತು ವಿಸ್ತರಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು ಎಂದು ಸಿಪಿಐ(ಎಂ) ನ 16ನೇ ರಾಜ್ಯ ಸಮ್ಮೇಳನವು ಒತ್ತಾಯಿಸುತ್ತದೆ.

ಮಂಡನೆ: ಚಂದ್ರಪ್ಪ ಹೊಸ್ಕೇರ್
ಅನುಮೋದನೆ: ಎ.ವಿ.ವೆಂಕಟರಾಮ್

ಕೃಷಿ ಕೂಲಿಕಾರರಿಗೊಂದು ಸಮಗ್ರ ಕಾನೂನಿಗಾಗಿ ಒತ್ತಾಯಿಸಿ ನಿರ್ಣಯ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ಯ ಕರ್ನಾಟಕ ರಾಜ್ಯದ 16ನೇ ಸಮ್ಮೇಳನವು ರಾಜ್ಯದ ಕೃಷಿ ಕೂಲಿಕಾರರ ಜೀವನ ಪರಿಸ್ಥಿತಿಯನ್ನು ವಿಶೇಷವಾಗಿ ಗಮನಿಸುತ್ತದೆ.

ಕರ್ನಾಟಕ ರಾಜ್ಯ ಗ್ರಾಮೀಣ ಪ್ರದೇಶದಲ್ಲಿ ಸರಾಸರಿ ಶೇಕಡಾ 50 ರಷ್ಟಿರುವ ಕೃಷಿ ಕೂಲಿಕಾರರು-ಸಮರ್ಥ ಬೇಸಾಯವನ್ನು ಬಲ್ಲವರಾಗಿದ್ದು ಇನ್ನೂ ಕೂಡ ಭೂಮಿಯು ವ್ಯಾಪಕವಾಗಿ ಭೂಮಾಲಿಕರ ವಶದಲ್ಲಿಯೇ ಇರುವುದರಿಂದ ವರ್ಷದಲ್ಲಿ ರಾಜ್ಯದ ಶೇ 90 ರಷ್ಟು ಪ್ರದೇಶದಲ್ಲಿ ಸರಾಸರಿ ಕೇವಲ 3 ತಿಂಗಳಿಗೂ ಕಡಿಮೆ ದಿನಗಳ ಕಾಲ ಕೆಲಸ ಮಾಡಿ; ದುಡಿಯುವ ಜನರಲ್ಲಿಯೇ ಅತ್ಯಂತ ಕಡಮೆ ಕೂಲಿ ಪಡೆದು ಜೀವನ ನಿರ್ವಹಣೆ ಮಾಡುವವರಾಗಿದ್ದಾರೆ. ಇವರ ಪಾಲಿಗೆ ಕೇಂದ್ರ-ರಾಜ್ಯ ಸರ್ಕಾರಗಳು ಕಳೆದ ಏಳೆಂಟು ವರ್ಷಗಳಿಂದ ಹೊಸ ಆರ್ಥಿಕ ನೀತಿ, ಹೊಸ ಕೃಷಿ ನೀತಿ; ಉದಾರೀಕರಣ; ಖಾಸಗೀಕರಣ ನೀತಿಗಳನ್ನು ಅನುಸರಿಸುತ್ತಿರುವುದರಿಂದ ಒಂದೆಡೆ ಗುಡಿ ಕೈಗಾರಿಕೆಗಳನ್ನೇ ನಂಬಿದ ಗ್ರಾಮಗಳ ಕುಶಲ ಕರ್ಮಿಗಳಾದ ಬಡಿಗರು, ಕುಂಬಾರರು, ಕಂಬಾರರು, ಅಕ್ಕಸಾಲಿಗರು, ಅಗಸರು, ವಡ್ಡರು ಮುಂತಾದವರು ಹೆಚ್ಚೆಚ್ಚು ಕೂಲಿಕಾರರಾಗಿ ಪರಿವರ್ತಿತರಾಗು ತ್ತಿದ್ದಾರೆ..! ಇನ್ನೊಂದೆಡೆ ಬಡರೈತರು ಸಾಲಗಾರರಾಗಿ ಭೂಮಿ ಕಳೆದು ಕೊಂಡು ಕೂಲಿಕಾರರ ಪಡೆಯ ಹೆಚ್ಚಳಕ್ಕೆ ಎಸೆಯಲ್ಪಡುತ್ತಿದ್ದಾರೆ.

ಇದರಿಂದಾಗಿ ಸಿಗುವ ಕಡಿಮೆ ಕೂಲಿ ದಿನಗಳಲ್ಲೂ ಕೂಲಿಕಾರರ ನಡುವೆ ಪೈಪೋಟಿ ಏರ್ಪಟ್ಟು ಅತ್ಯಂತ ಕಡಿಮೆ ಕೂಲಿಗೆ ದುಡಿಯುವ ಕೆಟ್ಟ ಪರಿಸ್ಥಿತಿ ಇವರದಾಗಿದೆ.

ಸರಾಸರಿ ಇವರ ವಾರ್ಷಿಕ ತಲಾ ಕೂಲಿ ಗರಿಷ್ಠ 3 ಸಾವಿರ ರೂಪಾಯಿಗಳನ್ನು ದಾಟಲಾರದೆಂದರೆ. ತೀವ್ರ ಬೆಲೆ ಏರಿಕೆಯ ಈ ಕಾಲದಲ್ಲಿ ತಿಂಗಳಿಗೆ 4 ಸಾವಿರ ರೂಪಾಯಿಯಷ್ಟು ಆದಾಯವಿರುವ ನೌಕರರು ಜೀವನ ನಿರ್ವಹಣೆಗೆ ತೊಂದರೆಯೆಂದು ಪೇಚಾಡುತ್ತಿರುವ ಈ ಕಾಲದಲ್ಲಿ ಅವರ ಜೀವನ ಮಟ್ಟ ಅವರ ಜೀವನ ಪರಿಸ್ಥಿತಿ ಅತ್ಯಂತ ಕಠೋರವಾಗಿರುತ್ತದೆಂಬುದು ಸರ್ವವೇಧ್ಯ.

ಹೊಸದಾಗಿ ಕೃಷಿಯನ್ನು ಪ್ರವೇಶಿಸುತ್ತಿರುವ ಬೃಹತ್ ಒಕ್ಕುವ ಯಂತ್ರಗಳು, ರಾಶಿ ಯಂತ್ರಗಳು, ನಾಟಿ ಯಂತ್ರಗಳು, ಕಳೆ ನಾಶಕಗಳು, ಭೂಮಿ ಅಗೆಯುವ, ಲೋಡ್ ಮಾಡುವ ಯಂತ್ರಗಳು ಸಿಗುತ್ತಿದ್ದು 3 ತಿಂಗಳ ಕೆಲಸದಲ್ಲಿ, ಈಗಾಗಲೇ ಶೇಕಡಾ 50 ರಷ್ಟು ಕೆಲಸವನ್ನು ಕಸಿದುಕೊಂಡಿವೆ. ಹಾಗೂ 100 ರಷ್ಟು ಕೆಲಸವನ್ನು ನುಂಗುವ ದಿಕ್ಕಿನಲ್ಲಿ ಮುನ್ನಡೆಯುತ್ತಿವೆ. ಈ ಸ್ಥಿತಿಯು ಮತ್ತಷ್ಟು ಭಾದಿಸಿದೆ.

ಕಡಿಮೆ ಆದಾಯದಿಂದಾಗಿ ಅವರ ಆರೋಗ್ಯ ಮಟ್ಟ ಕುಸಿಯುತ್ತಿದ್ದು ಸರಾಸರಿ ಜೀವಿತದ ಕಾಲಾವಧಿ ಉಳಿದವರಿಗಿಂತ ತೀವ್ರ ಕುಸಿಯುತ್ತಿದೆ. ಅನಕ್ಷರತೆ- ಮೂಢನಂಬಿಕೆ ಬೆಳೆಯುತ್ತಿದೆ, ಜೀವನ ನಿರ್ವಹಣೆಗಾಗಿ ಸಾಮಾಜಿಕ ಬಿಕ್ಕಟ್ಟಿಗೆ ಕಾರಣರಾಗುತ್ತಿದ್ದಾರೆ. ಇಳಿವಯಸ್ಸಿನಲ್ಲಿ ಆಸರೆಯಿಲ್ಲದೇ ಭಿಕ್ಷೆ ಬೇಡುವ ಪರಿಸ್ಥಿತಿ ಇದೆ.

ಕರ್ನಾಟಕ ರಾಜ್ಯವು ಕೇವಲ ಶೇ 22 ಮಾತ್ರ ನೀರಾವರಿ ಪ್ರದೇಶವಾಗಿರುವುದು ಉಳಿದ ಮಳೆಯಾಧಾರಿತ ಪ್ರದೇಶವು ಕನಿಷ್ಠ 3 ವರ್ಷಗಳಿಗೊಮ್ಮೆ ಬರವನ್ನು ಎದುರಿಸುತ್ತಿದ್ದು ಕೂಲಿಕಾರರನ್ನು ಅಲೆಮಾರಿಗಳನ್ನಾಗಿಸುತ್ತಿದೆ.

ಗ್ರಾಮ ಪಂಚಾಯತ್‌ಗಳಲ್ಲಿ ನೀಡುವ ರೋಜಗಾರ್ ಯೋಜನೆಯ ಹಣ ಕೂಲಿಕಾರರ ಕಣ್ಣೀರನ್ನು ತುಡಿಸಲಾರದು. ಬಂದಂತಹ ಅಲ್ಪ ಹಣವು ಗ್ರಾಮ ಪಂಚಾಯತ್ ಆಡಳಿತಗಾರರ ಭ್ರಷ್ಟತೆಗೆ ಬಲಿಯಾಗುತ್ತಿದೆ.

ಕೂಲಿಕಾರರ ದೊಡ್ಡ ವಿಭಾಗವು ಮಹಿಳೆಯರಿಂದ ಹಾಗೂ ಹರಿಜನ-ಗಿರಿಜನರಿಂದ ಕೆಳಜಾತಿಗಳ ಜನರಿಂದ ಕೂಡಿರುವುದರಿಂದ, ಅವರ ಈ ಪರಿಸ್ಥಿತಿಯು ಆಯಾ ಪ್ರದೇಶದ ಭೂಮಾಲೀಕರ, ಕಾಂಟ್ರಾಕ್ಟ್‌ದಾರರ, ಬಡ್ಡಿ ವ್ಯಾಪಾರಿಗಳ ಭ್ರಷ್ಟ ಅಧಿಕಾರಿಗಳ ದಬ್ಬಾಳಿಕೆಗೆ ಒಡ್ಡಿದೆ. ಕರ್ನಾಟಕದ ಬಹುಭಾಗ ದಲ್ಲಿ ಹೆಣ್ಣುಮಕ್ಕಳಿಗೊಂದು ಕೂಲಿ, ಗಂಡಿ ಗೊಂದು ಕೂಲಿ. ಈ ತಾರತಮ್ಯದ ವಿರುದ್ಧ ಸಮಾನ ಕೂಲಿಗಾಗಿ ಒತ್ತಾಯಿಸಬೇಕು.

ಹರಿಜನ-ಗಿರಿಜನರನ್ನು ಜಾತಿಯ ಅಸಮಾನತೆಯಿಂದ ಹಾಗೂ ಜೀತಗಾರಿಕೆಯಿಂದ, ದೇವದಾಸಿ ಪದ್ಧತಿಯಿಂದ ಮೇಲೆತ್ತದೇ ಮತ್ತಷ್ಟು ಅದರ ಆಳಕ್ಕೇ ಕೊಳೆಯುವಂತೆ ಬಲಾತ್ಕರಿಸುತ್ತದೆ.

ರಾಜ್ಯದ ಜನಸಂಖ್ಯೆಯ ಬಹುಸಂಖ್ಯಾತ ಶೋಷಿತ ಜನವಿಭಾಗವಾಗಿ ಹೊರಹೊಮ್ಮುತ್ತಿರುವ ಕೃಷಿ ಕೂಲಿಕಾರರು ಬಹಳ ಮುಖ್ಯವಾಗಿ ಉದ್ಯೋಗದ ಅಭದ್ರತೆಯನ್ನು, ಜೀವನದ ಅತಂತ್ರ ಸ್ಥಿತಿಯನ್ನು-ಪಾರತಂತ್ರ್ಯದ ಬದುಕನ್ನು ಅನುಭವಿಸುತ್ತಿದ್ದಾರೆ.

ಇದುವರೆಗೆ ಕರ್ನಾಟಕ ರಾಜ್ಯದಲ್ಲಿ ಆಳ್ವಿಕೆ ನಡೆಸಿದ ಯಾವುದೇ ರಾಜ್ಯ ಸರ್ಕಾರಗಳಾಗಲೀ, ಕೇಂದ್ರದ ಸರ್ಕಾರಗಳಾಗಲೀ ಪ್ರಧಾನ ವಿರೋಧಪಕ್ಷವೆಂದು ಬೀಗುವ ಬಿಜೆಪಿಯಾಗಲೀ ಕೂಲಿಕಾರರ ಇಂತಹ ಪರಿಸ್ಥಿತಿಯನ್ನು ತೊಡೆದು ಹಾಕಲು ಪ್ರಾಮಾಣಿಕ ಪ್ರಯತ್ನ ಮಾಡದೇ ಇರುವುದನ್ನು ಕೋಲಾರದಲ್ಲಿ ಸೇರಿರುವ ಸಿಪಿಐ(ಎಂ) ನ ಈ ಸಮ್ಮೇಳನ ಬಲವಾಗಿ ಖಂಡಿಸುತ್ತದೆ. ಹಾಗೇ ಹಾಲಿ ರಾಜ್ಯ ಸರ್ಕಾರ ಮತ್ತು ಮುಂಬರುವ ಕೇಂದ್ರ, ಸರ್ಕಾರಗಳು ಕೂಲಿಕಾರರ ಇಂತಹ ಅತಂತ್ರ ಸ್ಥಿತಿಯಿಂದ ಸಂಪೂರ್ಣ ಸಂರಕ್ಷಣೆ ನೀಡಲು ಸಾಧ್ಯವಾಗುವಂತಹ

1-ವರ್ಷದಲ್ಲಿ ಕನಿಷ್ಠ 9 ತಿಂಗಳು ಕೂಲಿ ಕೆಲಸ ನೀಡುವಂತಹ
2-ಎಲ್ಲರಿಗೂ ಉಚಿತ ವಸತಿ ನೀಡುವಂತಹ
3-ಅವರ ಆರೋಗ್ಯವನ್ನು ಉಚಿತವಾಗಿ ಸಂರಕ್ಷಿಸುವಂತಹ
4- ಹಸಿರು ಕಾರ್ಡ್‌ಗೆ 16 ಅಗತ್ಯ ಸಾಮಾನುಗಳನ್ನು ಅರ್ಧ ಬೆಲೆಗೆ ಒದಗಿಸುವಂತಹ;
5- ಪ.ಬಂಗಾಳದ ಮಾದರಿಯಲ್ಲಿ ಭೂಸುಧಾರಣೆ ಮೂಲಕ ಭೂಮಿ ನೀಡುವಂತಹ
6-ಕನಿಷ್ಠ ಕೂಲಿ ಖಾತರಿಯಾಗಿ ಒದಗಿಸುವಂತಹ, ಲಿಂಗ ಭೇದವಿಲ್ಲದ ಸಮಾನ ಕೂಲಿ ದೊರೆಯುವಂತಹ ರೋಜಗಾರ್ ಯೋಜನೆಗೆ ವ್ಯಾಪಕ ಹಣನೀಡಿ; ಭ್ರಷ್ಟತೆಯನ್ನು ತೊಲಗಿಸುವಂತಹ
7-ಇಳಿ ವಯಸ್ಸಿಗೆ ; ಸಹಾಯಕವಾಗುವಂತಹ ರೀತಿಯಲ್ಲಿ ಕನಿಷ್ಠ 50 ಸಾವಿರ ರೂಪಾಯಿಗಳ ಭವಿಷ್ಯನಿಧಿ ಯೋಜನೆ, ಮಾಸಿಕ ಕನಿಷ್ಠ 250 ಪೆನ್ಷನ್ ದೊರೆಯುವಂತಹ
8-ವಿಮಾ ಯೋಜನೆ.... ಸಾಲನೀತಿ ಇತರೆ ಅನುಕೂಲಗಳಿರುವ ಸಮಗ್ರವಾಗಿ ಅವರನ್ನು ಸಂರಕ್ಷಿಸುವ ಸಮಗ್ರ ಕಾನೂನೊಂದನ್ನು ರಚಿಸಲು 16ನೇ ಕರ್ನಾಟಕ ರಾಜ್ಯ ಮಟ್ಟದ ಸಿಪಿಐ(ಎಂ) ನ ಸಮ್ಮೇಳನ ಬಲವಾಗಿ ಒತ್ತಾಯಿಸುತ್ತದೆ.


ಮುಂಬರುವ ದಿನಗಳಲ್ಲಿ ಪಕ್ಷದ ಸದಸ್ಯರು-ಘಟಕಗಳು ಕೂಲಿಕಾರರನ್ನು ವ್ಯಾಪಕವಾಗಿ ಸಂಘಟಿಸಿ ಭೂಮಿ ಪ್ರಶ್ನೆಯಂತೆಯೇ ಕೂಲಿಯ ಪ್ರಶ್ನೆ ಹಾಗೂ ಕಾನೂನಿನ ಪ್ರಶ್ನೆಯನ್ನು ಪ್ರಧಾನವಾಗಿ ಪರಿಗಣಿಸಿ ವಿಶಾಲ ಚಳುವಳಿಯನ್ನು ಸಂಘಟಿಸಲು; ಇದಕ್ಕಾಗಿ ರಾಜ್ಯದಲ್ಲಿ ಒಂದೇ ದಿನ ಏಕಕಾಲದಲ್ಲಿ ಎಲ್ಲಾ ತಾಲೂಕು ಕೇಂದ್ರದಲ್ಲಿ ಸಾಮೂಹಿಕ-ಧರಣಿ ನಡೆಸಲು ಈ ಸಮ್ಮೇಳನ ಕರೆ ಕೊಡುತ್ತದೆ.

ಮಂಡನೆ: ಯು. ಬಸವರಾಜ
ಅನುಮೋದನೆ: ಬಾಲಪ್ಪ

ಪತ್ರಿಕೆಯ ಹೆಸರು ಜ. 19-25, 1998

ಬಿಜೆಪಿಗೆ ಬಂಡವಾಳಿಗರ ಹಣದ ಬಲ ಕಾಂಗ್ರೆಸ್[ಐ]ಗೆ ಸೋನಿಯಾ ವರ್ಚಸ್ಸಿನ ಬಲ ಆದರೆ ಜನ ಬೆಂಬಲ?!

ಹರ್ಕಿಶನ್‌ಸಿಂಗ್ ಸುರ್ಜಿತ್



ದಿನಗಳೆದಂತೆ, ಚುನಾವಣೆ ಸಮೀಪಿಸ ಲಾರಂಭಿಸಿದಂತೆ ಸುದ್ದಿಮಾಧ್ಯಮದಲ್ಲಿ ಬಿಜೆಪಿಯ ಅಬ್ಬರ ಹೆಚ್ಚುತ್ತಿದೆ. ಆದರೆ ಇದರ ಉದ್ದೇಶ ದಿಲ್ಲಿಯ ಅಧಿಕಾರ ಗಿಟ್ಟಿಸಲು ಬೇಕಾಗುವ ಬೆಂಬಲವನ್ನು ಅದಕ್ಕೆ ಕೊಡಲು ಜನರಿನ್ನೂ ಸಿದ್ಧರಿಲ್ಲ ಎಂಬುದನ್ನು ಮರೆಮಾಚಲಿಕ್ಕಷ್ಟೆ.

ಇದು ಕೇವಲ ಸಹಜವಷ್ಟೇ ಅಲ್ಲ. ದೊಡ್ಡ ಬಂಡವಾಳಿಗರಿಂದ ಹಣ ಹಾಗೂ ಗುತ್ತೇದಾರಿ ಬಂಡವಾಳಿಗರ ನಿಯಂತ್ರಣ ದಲ್ಲಿರುವ ಮಾಧ್ಯಮಗಳಿಂದ ಬಿಜೆಪಿಗೆ ಇತರ ಪಕ್ಷಗಳಿಗಿಂತ ತುಸು ಹೆಚ್ಚಿನ ಸಾಧನೋಪಾಯ ಸಿಕ್ಕಿರಬಹುದು. ಆದರೆ ಜನರ ಬೆಂಬಲದ ಅಭಾವವನ್ನಂತೂ ಅದು ಪೂರ್ತಿ ಮಾಡಲು ಸಾಧ್ಯವಿಲ್ಲ. ಇಂತಹ ಸಾಧನೋಪಾಯ ಬಿಜೆಪಿಗೆ ಹಿಂದೆಯೂ ಇತ್ತು. ಅದರಿಂದ ಅಧಿಕಾರದ ಗದ್ದುಗೆ ಗಿಟ್ಟಿಸುವುದು ಅದಕ್ಕಾಗಿರಲಿಲ್ಲ.

ಸಂಯುಕ್ತ ರಂಗದ್ದು ಕೇವಲ ನಕಾರಾತ್ಮಕ ಕಾರ್ಯಕ್ರಮ, ತನ್ನನ್ನು ಅಧಿಕಾರಕ್ಕೆ ಬರದಂತೆ ತಡೆಯುವ ಕಾರ್ಯಕ್ರಮ ಎಂದು ಬಿಜೆಪಿ ಪ್ರತಿಪಾದಿಸುತ್ತಿತ್ತು. ಆದರೆ ಅದೀಗ ಮಿತ್ರರನ್ನು ಸೆಳೆದುಕೊಳ್ಳಲು ಮಾಡುತ್ತಿರುವ ಪ್ರಯತ್ನಗಳನ್ನು ಕಂಡರೆ ಬಿಜೆಪಿಯ ಏಕ ಅಂಶದ ಕಾರ್ಯಕ್ರಮವೆಂದರೆ ಹೇಗಾದರೂ ಮಾಡಿ ಅಧಿಕಾರ ಗಿಟ್ಟಿಸುವುದು ಮಾತ್ರ ಎಂಬುದಂತೂ ಈಗ ಬಯಲಾಗಿದೆ.

ಬಿಜೆಪಿಯ ಪ್ರಚಾರ ಹೇಗಿರುತ್ತದೆ ಎಂಬುದು ಡಿಸೆಂಬರ್ 25 ರಂದು ಒಂದೇ ದಿನ ಬಿಜೆಪಿ ಹಲವು ಕೋಟಿ ರೂಪಾಯಿ ಗಳನ್ನು ಖರ್ಚು ಮಾಡಿರುವುದು ಸ್ಪಷ್ಟಪಡಿಸುತ್ತದೆ. ಅದು ಅಟಲ್ ಬಿಹಾರಿ ವಾಜಪೇಯಿಯವರ 74ನೇ ಜನ್ಮ ದಿನಾಚರಣೆಯ ಸಂದರ್ಭವನ್ನು ಬಳಸಿ ಎಂಟು ಪುಟಗಳ ಪ್ರಾಯೋಜಕ ಪುರವಣಿ ಗಳನ್ನು ಹೊರಡಿಸಲು ಬೇಕಾದ ಅಪಾರ ಹಣವನ್ನು ಅನಿವಾಸಿ ಭಾರತೀಯರ ಲೆಕ್ಕಕ್ಕೆ ಹಾಕಿ, ಹಣದ ಶಕ್ತಿಯಿಂದ ಚುನಾವಣಾ ನೀತಿ ಸಂಹಿತೆಯನ್ನು ಉಲ್ಲಂಘಿಸಲಾಗಿದೆ ಯೆಂಬ ಆಪಾದನೆಯಿಂದ ತಪ್ಪಿಸಿಕೊಳ್ಳಲು ಬಿಜೆಪಿ ಪ್ರಯತ್ನಿಸುತ್ತಿದೆ ಎಂಬ ಸುದ್ದಿಯಿದೆ. ದೊಡ್ಡ ಬಂಡವಾಳಿಗರ ಹಣದ ಮೇಲೆ ಇಷ್ಟೊಂದು ಅವಲಂಬಿಸಿರುವ ಒಂದು ಪಕ್ಷ ನಿಜವಾಗಿಯೂ ಜನಸಾಮಾನ್ಯರ ಹಿತಾಸಕ್ತಿ ಗಳನ್ನು ರಕ್ಷಿಸಬಲ್ಲುದೆ ಎಂದು ಎಲ್ಲರೂ ಯೋಚಿಸಬೇಕು.

ಎಂತಹಾ ದ್ವಂದ್ವ!

ಬಿಜೆಪಿಯ ಹತಾಶೆಯನ್ನು ತೋರುವ ಇನ್ನೊಂದು ಸಂಗತಿಯೆಂದರೆ ಇತ್ತೀಚಿನ ವರೆಗೂ ಏಕಾಂಗಿಯಾಗಿ ತಾನು ಸರಕಾರ ರಚಿಸಬಲ್ಲೆ ಎಂದು ಕೊಚ್ಚಿಕೊಳ್ಳುತ್ತಿದ್ದ, ಸಮಿಶ್ರ ಸರಕಾರಗಳ ವಿರುದ್ಧ ಎಗರಾಡುತ್ತಿದ್ದ ಈ ಪಕ್ಷ ಈಗ ಎಲ್ಲರಂತೆ ಮಿತ್ರರ ಹುಡುಕಾಟದಲ್ಲಿದೆ ಎಂಬುದು ಶೋಚನೀಯ ಸಂಗತಿಯಲ್ಲವೇ?

ಈ ದುರಂತದಲ್ಲೂ ಒಂದು ತಮಾಷೆ ಇಲ್ಲದಿಲ್ಲ. ಬಿಜೆಪಿಗೆ ಪಕ್ಷಾಂತರ ಮಾಡುವ ಕುಮಾರಮಂಗಲಂಗಳು, ಅಸ್ಲಾಂ ಶೇರ್ ಖಾನ್‌ಗಳಂತವರು ಯಾವುದೇ ಸ್ವಂತ ನೆಲೆಯಿಲ್ಲದ ವ್ಯಕ್ತಿಗಳು ಎಂಬ ಸಂಗತಿ ಯಂತೂ ಒತ್ತಟ್ಟಿಗಿರಲಿ. ಬಿಜೆಪಿ ಮಿತ್ರತ್ವ ಬಯಸುವ ಹಲವು ಪಕ್ಷಗಳು ಕೂಡಾ ನಾಮಮಾತ್ರದವುಗಳು. ತಮಿಳು ನಾಡಿನಲ್ಲಿ ಸುಬ್ರಮಣ್ಯ ಸ್ವಾಮಿಯ ಜನತಾದಳ, ಗುಜರಾತಿನಲ್ಲಿ ಆತ್ಮರಾಂ ಪಟೇಲ್ ಗುಂಪು, ಜಮ್ಮು-ಕಾಶ್ಮೀರದಲ್ಲಿ ಕೋಕಾ ಪಾರ್ರೇ ಗುಂಪು ಈ ವಿಧದ ಪಕ್ಷಗಳು.

ಹೀಗೆ ಬಿಜೆಪಿಯ ಅಜೆಂಡಾದಲ್ಲಿ ದೇವಸ್ಥಾನ ಮತ್ತು ಇತರ ವಿಭಜಕ ಪ್ರಶ್ನೆಗಳು ಇದೆ ಕೂಡಾ! ಇಲ್ಲ ಕೂಡಾ! ಅದೇ ರೀತಿ ಅದು ಸಮಿಶ್ರ ಸರಕಾರದ ರಾಜಕೀಯಕ್ಕೆ ವಿರುದ್ಧವಾಗಿದೆ.ಆದರೆ ಸ್ವತಃ ಅದೇ ಸಮಿಶ್ರ ರಾಜಕೀಯದಲ್ಲಿ ತೊಡಗಿದೆ!

ಒಂದೆಡೆ ತನ್ನ ಹಳೆಯ, ಹೊಸ ಮಿತ್ರರ ಒತ್ತಡ, ಇನ್ನೊಂದೆಡೆ ಆರ್.ಎಸ್.ಎಸ್-ವಿ.ಹೆಚ್.ಪಿ. ಒತ್ತಡ, ಇವೆರಡರ ನಡುವೆ ತನ್ನ ನಿಜವಾದ ಕಾರ್ಯಕ್ರಮ ಏನೆಂದು ಹೇಳಲಾಗಲೀ, ಅಥವಾ ಅದನ್ನು ತ್ಯಜಿಸಲಾಗಲೀ, ಬಿಜೆಪಿಗೆ ಆಗುತ್ತಿಲ್ಲ. ಹೇಗಾದರೂ ತನಗೇ ಬಹುಮತ ದೊರೆತರೆ ಸಮತಾ ಪಾರ್ಟಿಯಂತಹ ಮಿತ್ರ ಪಕ್ಷಗಳನ್ನು ಬದಿಗೊತ್ತಬಹುದು ಎಂಬ ಭ್ರಮೆ ಅದಕ್ಕೆ ಇನ್ನೂ ಇದ್ದಂತಿದೆ. ಅತ್ತ ಸಮತಾ ಪಾರ್ಟಿ ತಡವಾಗಿ ಯಾದರೂ ತಾನು ಬಿಜೆಪಿಯ ಬಾಲ ಅಲ್ಲ ಎಂದು ತೋರಿಸಲು ಪ್ರಯತ್ನಿಸು ತ್ತಿದೆ. ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ, ಆಂಧ್ರದಲ್ಲಿ ಲಕ್ಷ್ಮಿ ಪಾರ್ವತಿ ಬಿಜೆಪಿಯ ಮಂತ್ರವನ್ನು ಅದಕ್ಕೆ ತಿರುಮಂತ್ರವಾಗಿಸಲು ಪ್ರಯತ್ನಿಸುತ್ತಿದ್ದರೆ ಅದರಲ್ಲಿ ಆಶ್ಚರ್ಯವಿಲ್ಲ.

ವಾಸ್ತವತೆಯೇನು?

ದಕ್ಷಿಣ ಮತ್ತು ಈಶಾನ್ಯ ಭಾರತದಲ್ಲಿ ಅದು ಎರಡು-ಮೂರಕ್ಕಿಂತ ಹೆಚ್ಚು ಸ್ಥಾನ ಗಳಿಸುವ ನಿರೀಕ್ಷೆಯಿಲ್ಲ. ಅತಿ ಹೆಚ್ಚೆಂದರೆ 150 ಸ್ಥಾನಗಳಲ್ಲಿ ಹತ್ತರಲ್ಲಿ ಗೆಲ್ಲಬಹುದು. ತಮ್ಮ ಜೇಬಿನಲ್ಲಿದೆ ಎಂದು ಬಿಜೆಪಿ ಮುಖಂಡರು ಇದುವರೆಗೆ ತಿಳಿದಿದ್ದ ಮಧ್ಯಪ್ರದೇಶ, ಗುಜರಾತ್‌ಗಳಲ್ಲಿ ಹಿಂಜರಿತ ಅವರಿಗೆ ಕಾದಿದೆ. ಒರಿಸ್ಸಾದಲ್ಲಿ ಬಿಜು ಜನತಾದಳದ ಸಹಾಯವನ್ನು ಅವರು ನೆಚ್ಚಿದ್ದಾರೆ. ಆದರೆ ಅಲ್ಲಿ ಜನತಾದಳ ವಿಭಜನೆಯಿಂದ ಕಾಂಗ್ರೆಸ್ಸಿಗೆ ಲಾಭವಾಗಬಹುದಷ್ಟೇ. ಬಿಹಾರದಲ್ಲಿ ಈಗಿರುವ 12 ಸ್ಥಾನಗಳನ್ನು ಉಳಿಸಿ ಕೊಳ್ಳುವುದೂ ಅದಕ್ಕೆ ಅಸಾಧ್ಯ ಕೆಲಸವಾಗಬಹುದು. ಮಹಾರಾಷ್ಟ್ರ, ಹರ್ಯಾಣ, ಪಂಜಾಬ್‌ಗಳಲ್ಲೂ ಬಿಜೆಪಿಯ ಜನ ಬೆಂಬಲ ಇಳಿಯಲಿದೆ. ಉತ್ತರ ಪ್ರದೇಶದಲ್ಲೂ ಅದರ ಸ್ಥಾನಗಳು ಕಮ್ಮಿಯಾದರೆ ಆಶ್ಚರ್ಯವಿಲ್ಲ.

ಒಟ್ಟಿನಲ್ಲಿ ಚುನಾವಣೆ 1998 ಬಿಜೆಪಿಗೆ ಅದು ಹಿಂದೆ-ಮುಂದೆಂದೂ ಕಾಣಲಾರದ ಅಘಾತವನ್ನು ಕೊಡಲಿದೆ, ಹಿಂದಿನಂತೆಯೇ ಪ್ರಭುತ್ವ ಅಧಿಕಾರ ಬಿಜೆಪಿಯ ಅಳವಿನಿಂದ ದೂರವೇ ಉಳಿಯುತ್ತದೆ ಎಂದು ಖಂಡಿತವಾಗಿ ಹೇಳಬಹುದು.

ಕಾಂಗ್ರೆಸ್(ಐ)-ಪುನಶ್ಚೇತನ ಅಸಾಧ್ಯ

ಇನ್ನು ಕಾಂಗ್ರೆಸ್(ಐ) ಬಗ್ಗೆ ಹೇಳ ದಿರುವುದೇ ಒಳ್ಳೆಯ ದೇನೋ. ಮಿತ್ರ ಪಕ್ಷಗಳನ್ನು ಹುಡುಕುವ ಅದರ ಕೆಲಸದಲ್ಲಿ ಈಗ ಸ್ವಲ್ಪ ಬದಲಾವಣೆಯಾಗಿದೆ. ಶ್ರೀಮತಿ ಸೋನಿಯಾಗಾಂಧಿಯವರು ಚುನಾವಣಾ ಪ್ರಚಾರಕ್ಕೆ ಇಳಿಯುವ ಘೋಷಣೆ ನಿಸ್ಸಂದೇಹವಾಗಿಯೂ ಕಾಂಗ್ರೆಸ್ಸಿನಲ್ಲಿ ಸ್ವಲ್ಪ ಮಟ್ಟಿಗೆ ಉತ್ಸಾಹ ತುಂಬಿದೆ. ಈ ಹೊಸ ಉತ್ಸಾಹದಿಂದಾಗಿ ಲಾಲೂ ಪ್ರಸಾದ್ ಯಾದವ್‌ರ 'ಜಾತ್ಯಾತೀತ ರಂಗ' ರಚಿಸುವ ಪ್ರಯತ್ನಕ್ಕೆ ತಣ್ಣೀರೆರಚಿದೆ.

ಆದರೆ ಸೋನಿಯಾ ಗಾಂಧಿಯವರ ನಿರ್ಣಯದಿಂದಾಗಿ ಪಕ್ಷ ಬಿಟ್ಟುಹೋದ ಮುಖಂಡರು ಹಿಂದಿರುಗಬಹುದು ಎಂಬ ಕಾಂಗ್ರೆಸ್(ಐ) ನ ಹಳೆಯ ತಲೆಮಾರಿನ ನಿರೀಕ್ಷೆ ಗಮನಾರ್ಹ ಪ್ರಮಾಣದಲ್ಲಿ ಈಡೇರಿಲ್ಲ. ಇನ್ನು ಸೋನಿಯಾ ಅಂಶದ ಬಗ್ಗೆ ಹೇಳುವುದಾದರೆ ಆಕೆಯ 'ಆಕರ್ಷಕ ವ್ಯಕ್ತಿತ್ವ'ದ ಭ್ರಮೆ ಇಳಿಯಲು ಬಹಳ ಸಮಯ ಬೇಕಾಗಲಿಕ್ಕಿಲ್ಲ. ಒಂದೇ ಚುನಾವಣೆಯ ಫಲಿತಾಂಶ ಸಾಕು ಅದನ್ನು ತೆಪ್ಪಗೆ ಮಣ್ಣು ಮಾಡಲು. ನಿಜ ಒರಿಸ್ಸಾ, ಮಧ್ಯಪ್ರದೇಶ, ಪಂಜಾಬ್ ಇತ್ಯಾದಿಗಳಲ್ಲಿ ಒಟ್ಟಾರೆಯಾಗಿ ಎಡ ಮತ್ತು ಪ್ರಜಾಪ್ರಭುತ್ವ ವಾದಿ ಶಕ್ತಿಗಳು ದುರ್ಬಲವಾಗಿರುವಲ್ಲಿ ಕಾಂಗ್ರೆಸ್ (ಐ) ಬಿಜೆಪಿ ಮತ್ತು ಅದರ ಮಿತ್ರರಿಂದ ಕೆಲವು ಸೀಟುಗಳನ್ನು ಕಸಿದು ಕೊಳ್ಳಬಹುದು. ಆದರೆ ಅದರ ಸ್ಥಾನಗಳ ಒಟ್ಟು ಸಂಖ್ಯೆಯಲ್ಲಿ ಹೆಚ್ಚಳವಾಗುವ ಸಾಧ್ಯತೆ ಇಲ್ಲ. ಆದರ 'ಪುನಶ್ಚೇತನ'ದ ಮಾತಂತೂ ಅರ್ಥಹೀನ.

ಈಗಲೂ ಕೂಡಾ ಆ ಪಕ್ಷ ಒಂದು ಪ್ರಾಮಾಣಿಕ ಆತ್ಮ ವಿಮರ್ಶೆಗೆ, ಎಲ್ಲಿ ತಪ್ಪಾಯಿತು ಎಂಬುದರ ಪರಾಮರ್ಶೆಗೆ ಸಿದ್ಧವಿಲ್ಲ. ಜನಸಮೂಹಗಳು, ವಿಶೇಷವಾಗಿ ಅಲ್ಪಸಂಖ್ಯಾತರು, ಬುಡಕಟ್ಟು ಜನಗಳು, ಇತರ ದುರ್ಬಲ ವಿಭಾಗದ ಜನಗಳು ತನ್ನಿಂದ ಏಕೆ ದೂರ ಸರಿದರು ಎಂದು ವಿಮರ್ಶಿಸಲು ಅದು ಸಿದ್ಧವಿಲ್ಲ. ಅದನ್ನು ಅತಂತ್ರ ಸ್ಥಿತಿಗೆ ತಂದಂತಹ ಸ್ವಾತಂತ್ರ್ಯ ನಂತರದ ಅದರ ಜನವಿರೋಧಿ ಧೋರಣೆ ಗಳನ್ನು, ಅವನ್ನು ಇನ್ನಷ್ಟು ತೀವ್ರಗೊಳಿಸಿ ರಾವ್-ಸಿಂಗ್ ಜೋಡಿ ಅಂಗೀಕರಿಸಿದ ಐಎಂಎಫ್-ವಿಶ್ವಬ್ಯಾಂಕ್ ಹೇರಿದ ಖಾಸಗೀಕರಣ, ಉದಾರೀಕರಣ ನೀತಿ ಗಳನ್ನು ಕೈ ಬಿಡಲು ಅದಿನ್ನೂ ಸಿದ್ಧವಿಲ್ಲ.

ಇಂತಹ ಆತ್ಮ ವಿಮರ್ಶೆಯಿಲ್ಲದೆ ಆ ಪಕ್ಷದ ಪುನಶ್ಚೇತನದ ಬಗ್ಗೆ ಯಾವುದೇ ನಿರೀಕ್ಷೆ ಇಟ್ಟುಕೊಳ್ಳುವಂತಿಲ್ಲ. ಕೇವಲ ಅಬ್ಬರದ ಮಾತುಗಳಿಂದ ಪ್ರಯೋಜನ ವಾಗುವುದಿಲ್ಲ. ಇತ್ತೀಚೆಗೆ ಮನಮೋಹನ ಸಿಂಗ್ ಹೇಳಿದರಂತೆ-ಪ್ರತಿ ವರ್ಷ 1 ಕೋಟಿ ಉದ್ಯೋಗವಕಾಶ ನಿರ್ಮಿಸಿ ಮುಂದಿನ ಎರಡು ವರ್ಷಗಳಲ್ಲಿ ನಿರುದ್ಯೋಗ ಶಾಪವನ್ನು ನಿರ್ಮೂಲ ಮಾಡಲು ಕಾಂಗ್ರೆಸ್‌ಗೆ ಮಾತ್ರ ಸಾಧ್ಯ ಎಂದು! 1991 ರ ಚುನಾವಣಾ ಘೋಷಣೆ ನೀಡಿದ್ದ ಈ ವಚನವನ್ನು ಅಧಿಕಾರಕ್ಕೆ ಬಂದ ಒಂದೇ ವರ್ಷದೊಳಗೆ ಅವರೇಕೆ ಕೈ ಬಿಟ್ಟರು ಎಂದು ಮೊದಲು ಹೇಳಲಿ.

ಜನಮೋರ್ಚಾ- ಇನ್ನೊಂದು ಸಮಯಸಾಧಕ ಗುಂಪು

ಇನ್ನು ಲಾಲೂ ಪ್ರಸಾದ್ ಯಾದವ್‌ರ 'ಜಾತ್ಯಾತೀತ ರಂಗ' ನೆಲದಿಂದ ಮೇಲೆದ್ದಿಲ್ಲ. ಅದು ನಿರೀಕ್ಷಿತವೇ.

ಸೋನಿಯಾಗಾಂಧಿಯವರ ಪ್ರವೇಶ ದಿಂದ ಉತ್ಸಾಹಗೊಂಡ ಕಾಂಗ್ರೆಸ್ ಈ ಬಗ್ಗೆ ಮೊದಲು ತೋರಿದ ಆಸಕ್ತಿಯನ್ನು ತೋರಿಸುತ್ತಿಲ್ಲ. ಇನ್ನು ಮಾಯಾವತಿ ಯವರಂತೂ ಈ ರಂಗದ ಕಾಂಗ್ರೆಸ್(ಐ), ಆರ್.ಜೆ.ಡಿ. ಅಜಿತ್‌ಸಿಂಗ್‌ರ ಬಿಕೆಕೆಪಿ ಹಾಗೂ ಸದಾ ಏಕಾಂಗಿಯಾದ ಚಂದ್ರಶೇಖರ್‌ರವರ ಅಳಿದುಳಿದ ಸಮಾಜ ವಾದಿ ಜನತಾ ಪಕ್ಷದ ಆಗ್ರಹಗಳನ್ನು ಉತ್ತರ ಪ್ರದೇಶದಲ್ಲಂತೂ ಒಪ್ಪಿಕೊಳ್ಳಲು ಸಿದ್ಧವಿಲ್ಲ. ನಿಜ ಸಂಗತಿಯೆಂದರೆ ಈ ಹೆಚ್ಚಿನ ಪಕ್ಷಗಳು ಇನ್ನೂ ಈ 'ಜನ್‌ಮೋರ್ಚ' ಸೇರುವು ದಾಗಿ ಹೇಳಿಲ್ಲ. ವಾಸ್ತವವಾಗಿ ಇದು ಎಡ ಪಕ್ಷಗಳು ಮಹತ್ವದ ಪಾತ್ರ ವಹಿಸುತ್ತಿರುವ ನೈಜ ಜಾತ್ಯಾತೀತ ಪಕ್ಷಗಳ ಸಂಯುಕ್ತ ರಂಗದ ಸಾಧ್ಯತೆಗಳನ್ನು ವಂಚಿಸಲು ಪ್ರಯತ್ನಿಸುವ ರಂಗವಷ್ಟೆ. ಈ ರಂಗ ಬಿಜೆಪಿ ಕೂಡಿಹಾಕಲು ಪ್ರಯತ್ನಿಸುತ್ತಿರುವ ಸಮಯ ಸಾಧಕ ರಂಗಕ್ಕಿಂತ ಭಿನ್ನವಾಗೇನೂ ಇಲ್ಲ. ಇದುವರೆಗೆ ಆಂಧ್ರ, ನಾಡು ಮತ್ತಿತರ ಹೆಸರೇ ಕೇಳದ ಗುಂಪುಗಳನ್ನು ಸೇರಿಸಿಕೊಳ್ಳುವಲ್ಲಿ ಮಾತ್ರವೇ ಈ 'ಜನ್‌ಮೋರ್ಚಾ' ಯಶಸ್ವಿಯಾಗಿದೆ.

ಸಂಯುಕ್ತ ರಂಗ - ಹಣಾಹಣಿಗೆ ಸಿದ್ಧ

ಇಂತಹ ಸನ್ನಿವೇಶದಲ್ಲಿ ಸಂಯುಕ್ತ ರಂಗ ಕಾಂಗ್ರೆಸ್(ಐ) ಮತ್ತು ಬಿಜೆಪಿ ಎರಡರೊಂದಿಗೂ ಹಣಾಹಣಿಗೆ ಇಳಿಯ ಬೇಕಾಗಿದೆ. ಸಾಧ್ಯತೆಗಳು ಯಾವುದೇ ರೀತಿಯಲ್ಲಿ ನಿರುತ್ತೇಜಕ ವಾಗಿಲ್ಲ. ಆದರೆ ಇದು ಈಡೇರಬೇಕಾದರೆ ಬಹಳಷ್ಟು ಶ್ರಮವಹಿಸಬೇಕಾಗುತ್ತದೆ. ತನ್ನ ಒಂದೂವರೆ ವರ್ಷಗಳ ಅಸ್ತಿತ್ವದಲ್ಲಿ ಸಂಯುಕ್ತ ರಂಗ ಕೆಲವು ಗಮನಾರ್ಹ ಯಶಸ್ಸು ಸಾಧಿಸಿದೆ ಎಂಬುದರಲ್ಲಿ ಸಂದೇಹವಿಲ್ಲ. ಉದಾ: ಕೋಮುವಾದ ವನ್ನು ತಡೆ ಹಿಡಿಯುವಲ್ಲಿ, ಕೇಂದ್ರ ರಾಜ್ಯ ಸಂಬಂಧಗಳನ್ನು ಸುಧಾರಿಸುವಲ್ಲಿ, ನೆರೆದೇಶಗಳೊಂದಿಗೆ ಸಂಬಂಧ ಸುಧಾರಿಸು ವಲ್ಲಿ, ಒಟ್ಟಾರೆಯಾಗಿ ಅಂತರ್ರಾಷ್ಟ್ರೀಯ ರಂಗದಲ್ಲಿ ಭಾರತದ ಪ್ರತಿಷ್ಠೆ ಹೆಚ್ಚಿಸುವಲ್ಲಿ ಯಾವುದೇ ಭ್ರಷ್ಟಾಚಾರದ ಆಪಾದನೆಗೆ ಸಂಯುಕ್ತ ರಂಗ ಆಡಳಿತ ಒಳಗಾಗಲಿಲ್ಲ ಎಂಬ ಮುಖ್ಯ ಅಂಶವನ್ನು ಅದರ ಎದುರಾಳಿಗಳೂ ಒಪ್ಪುತ್ತಾರೆ.


ಪ್ರಭುತ್ವ ಅಧಿಕಾರ, ಕೋಮುವಾದಿ ಗಳ ಕೈಗೆ ಹೋಗದಂತೆ ತಡೆಯುವುದೆ ಮೊದಲ ಹಾಗೂ ತಕ್ಷಣದ ಅವಶ್ಯಕತೆ. ಇದಕ್ಕಾಗಿಯೇ ಸಂಯುಕ್ತ ರಂಗದ ಅಂಗ ಪಕ್ಷಗಳು ಈ ವೇದಿಕೆಯ ಮೇಲೆ ಒಂದಾಗಿರುವುದು. ಆದರೆ ಇಷ್ಟೇ ಸಾಲದು. ಜನಗಳನ್ನು ಕಾಡಿಸುವ ಇನ್ನೂ ಗಂಭೀರವಾದ ಪ್ರಶ್ನೆಗಳಿಂದ ಇದನ್ನು ಪ್ರತ್ಯೇಕಿಸಿ ನೋಡಲು ಸಾಧ್ಯವಿಲ್ಲ. ವಾಸ್ತವವಾಗಿ ಇದು ಇನ್ನೂ ದೊಡ್ಡ ಪ್ರಶ್ನೆ. ಇದನ್ನು ಸಂಯುಕ್ತ ರಂಗದ ಪಕ್ಷಗಳು ಅರಿಯಬೇಕಾಗಿದೆ. ಆದ್ದರಿಂದ ಸಂಯುಕ್ತ ರಂಗ ಇನ್ನೂ ಮುಂದೆ ಹೋಗಿ ಜನಗಳ ಎದುರು ಒಂದು ಸಕಾರಾತ್ಮಕ ಹಾಗೂ ಬಡತನ - ನಿರುದ್ಯೋಗವನ್ನು ನಿರ್ಮೂಲ ಮಾಡುವ, ಸಾಕ್ಷರತೆ, ಸಾಮೂಹಿಕ ಶಿಕ್ಷಣ ಹಾಗೂ ಸಾರ್ವಜನಿಕ ಆರೋಗ್ಯವನ್ನು ಪ್ರೋತ್ಸಾಹಿಸುವ, ದಾರಿದ್ರ್ಯ ಪೀಡಿತರಿಗೆ ಒಂದು ಗೌರವಾರ್ಹವೆನಿಸುವ ಬಾಳ್ವೆ ಒದಗಿಸುವ ಹಾಗೂ ದೇಶದ ಸ್ವಾವಲಂಬನೆ ಯನ್ನು ಬಲಗೊಳಿಸುವ ಒಂದು ವಿಶ್ವಾಸಾರ್ಹ ಕಾರ್ಯಕ್ರಮವನ್ನು ಜನಗಳ ಮುಂದಿಡಬೇಕು.

ದುರ್ಬಲತೆಗಳನ್ನು ಮೀರಿ ನಿಲ್ಲಬೇಕು.

ನಿಜ, ಸಮಾನ ಕನಿಷ್ಠ ಕಾರ್ಯಕ್ರಮ ಹಲವು ಜನ-ಪರ ಅಂಶಗಳನ್ನು ಹೊಂದಿದೆ. ಆದರೆ ಅವನ್ನು ಪ್ರಾಮಾಣಿಕತೆ ಯಿಂದ ಜಾರಿಗೊಳಿಸಲಾಗುತ್ತದೆ ಎಂದು ಜನ ಸಾಮಾನ್ಯರಲ್ಲಿ ಭರವಸೆ ಹುಟ್ಟಿಸಬೇಕಾಗುತ್ತದೆ. ತನ್ನ 18 ತಿಂಗಳ ಆಡಳಿತದಲ್ಲಿ ಸಂಯಕ್ತ ರಂಗ ಸರಕಾರ ಇವುಗಳಲ್ಲಿ ಕೆಲವು ಅಂಶಗಳನ್ನು ಜಾರಿಗೆ ತರುವ ಬದಲು ಲಾಭದಾಯಕವಾಗಿ ನಡೆಯುತ್ತಿರುವ ಸಾರ್ವಜನಿಕ ವಲಯದ ಕಂಪನಿಗಳ ಶೇರುಗಳನ್ನು ಕೂಡಾ ಮಾರಾಟ ಮಾಡುವಂತಹ ಅನಪೇಕ್ಷಿತ ಕ್ರಮಗಳ ಮೇಲೆಯೇ ಮುಖ್ಯ ಗಮನ ಕೇಂದ್ರೀ ಕರಿಸಿತು. ವಾಸ್ತವವಾಗಿ ಈ ಸಾರ್ವಜನಿಕ ವಲಯದ ಘಟಕಗಳನ್ನು ರಕ್ಷಿಸುವ, ಬಲಿಷ್ಠಗೊಳಿಸುವ ಮಾತು ಸಮಾನ ಕನಿಷ್ಠ ಕಾರ್ಯಕ್ರಮದಲ್ಲಿತ್ತು. ಆದರೆ ಐಎಂಎಫ್ ಶರತ್ತುಗಳ ಪ್ರಕಾರ ಹಣಕಾಸು ಕೊರತೆಯನ್ನು ಇಳಿಸುವುದೇ ಸಂಯುಕ್ತ ರಂಗ ಸರ್ಕಾರದ ಗೀಳಾಗಿ ಬಿಟ್ಟಿತ್ತು. ಜನಗಳಿಗೆ ಸಬ್ಸಿಡಿ ಇತ್ಯಾದಿಗಳ ಮೂಲಕ ಸ್ವಲ್ಪವಾದರೂ ಪರಿಹಾರ ನೀಡುವ ಸಾಮಾಜಿಕ ಸೇವೆಗಳಲ್ಲಿ ಕಡಿತ ಮಾಡುವ ಮೂಲಕವೇ ಇದನ್ನು ಸಾಧಿಸಲು ಪ್ರಯತ್ನಿಸಲಾಯಿತು. ಒಂದು ವೇಳೆ ಸಂಯುಕ್ತ ರಂಗ ಸರಕಾರ ಬಡತನ ನಿವಾರಣೆ, ನಿರುದ್ಯೋಗ ನಿವಾರಣೆ ಇತ್ಯಾದಿಗಳ ಬಗ್ಗೆಯೂ ಅಷ್ಟೇ ಆತಂಕ ತೋರಿದ್ದರೆ ಬಹುಶಃ ಈಗ ಸಂಯುಕ್ತ ರಂಗದ ಸ್ಥಾನ ಮಾನಕ್ಕೆ ಯಾರೂ ಸವಾಲು ಹಾಕಲು ಸಾಧ್ಯವಾಗದಂತಹ ಪರಿಸ್ಥಿತಿ ಇರುತ್ತಿತ್ತು.

ಆದರೂ ಈಗಿನ ಸನ್ನಿವೇಶದಲ್ಲಿ ಇಂತಹ ಕ್ರಮಗಳನ್ನು ಕೇವಲ ಸಂಯುಕ್ತ ರಂಗದಿಂದ ಮಾತ್ರವೇ ನಿರೀಕ್ಷಿಸಲು ಸಾಧ್ಯ ಎಂಬುದೂ ಅಷ್ಟೇ ಸತ್ಯ. ಬಿಜೆಪಿ ಮತ್ತು ಕಾಂಗ್ರೆಸ್ (ಐ) ಇಂತಹ ಕರ್ತವ್ಯ ನಿರ್ವಹಣೆಗೆ ಸಂಪೂರ್ಣ ಅಸಮರ್ಥ ವಾಗಿವೆ.

ಇಲ್ಲಿಯೇ ಎಡಪಕ್ಷಗಳ ಕಣ್ನೋಟ ಏನಿರಬೇಕು ಎಂಬ ಪ್ರಶ್ನೆ ಬರುವುದು. ಜನಸಮೂಹಗಳಿಗೆ ಸ್ವಲ್ಪ ಪರಿಹಾರ ಪಡೆಯಲು ಸಾಮೂಹಿಕ ಹೋರಾಟ ಗಳನ್ನು ಆರಂಭಿಸಿ ತೀವ್ರಗೊಳಿಸುವುದಲ್ಲದೆ, ರಾಷ್ಟ್ರೀಯ ಮಟ್ಟದಲ್ಲಿ ವರ್ಗ ಬಲಾಬಲವನ್ನು ಬದಲಿಸಲು ಪ್ರಯತ್ನಿ ಸುವುದಲ್ಲದೆ ತಕ್ಷಣದ ಸನ್ನಿವೇಶದಲ್ಲಿ ಎಡಪಕ್ಷಗಳು ಕಾವಲು ಪಡೆಯ ಪಾತ್ರ ವಹಿಸಿ ಸಂಯುಕ್ತ ರಂಗ ಸರಿಯಾದ ಹಾದಿಯಲ್ಲಿರುವಂತೆ ನಾವು ಮಾಡುತ್ತೇವೆ ಎಂಬ ಭರವಸೆಯನ್ನು ಜನರಿಗೆ ಕೊಡ ಬೇಕಾಗುತ್ತದೆ. ಮುಂದೆ ರಚನೆಯಾಗುವ ಸರಕಾರ ಶ್ರಮಜೀವಿ ಸಮೂಹಗಳಿಗೆ ಸಾಂತ್ವನ ಒದಗಿಸುವ, ಅವರ ಜೀವನವನ್ನು ಉತ್ತಮ ಪಡಿಸುವ ಅದೇ ವೇಳೆಗೆ ದೇಶದ ಹಿತಾಸಕ್ತಿಗಳನ್ನು, ಆರ್ಥಿಕ ಸಾರ್ವಭೌಮತೆ ಯನ್ನು ರಕ್ಷಿಸುವಂತಹ, ಸ್ವಾವಲಂಬನೆ ಯನ್ನು ಬಲ ಪಡಿಸುವಂತಹ ಕ್ರಮಗಳನ್ನು ಕೈಗೊಳ್ಳುವಂತೆ ಮಾಡಬೇಕು. ದೇಶ ಮತ್ತು ಜನತೆಯನ್ನು ಬಾಧಿಸುವ ಮೂಲಭೂತ ಪ್ರಶ್ನೆಗಳನ್ನು ಉಪೇಕ್ಷಿಸಿ ಸಂಯುಕ್ತ ರಂಗವೂ ಕಾಂಗ್ರೆಸ್‌ನ ಹಾದಿಯಲ್ಲಿಯೇ ಹೋಗಲು ಸಾಧ್ಯವಿಲ್ಲ. ಬದಲಿಗೆ, ಈ ಪ್ರಶ್ನೆಗಳ ಮೇಲೆ ಗಮನ ಕೇಂದ್ರೀಕರಿಸಿಯೇ ಸಂಯುಕ್ತ ರಂಗ ತನ್ನ ಮುಂದಿರುವ ಉಜ್ವಲ ಅವಕಾಶಗಳನ್ನು ಬಳಸಿಕೊಂಡು. ತನ್ನ ಪ್ರಭಾವವನ್ನು ಕ್ರೋಢೀಕರಿಸಿ ಬಲಪಡಿಸಿಕೊಳ್ಳುವ, ಕೋಮುವಾದಿ-ಫ್ಯಾಸಿಸ್ಟ್ ಶಕ್ತಿಗಳು ಅಧಿಕಾರ ವಹಿಸಿಕೊಳ್ಳದಂತೆ ತಡೆಯುವ ತನ್ನ ತಕ್ಷಣದ ಕರ್ತವ್ಯವನ್ನೂ ನೆರವೇರಿಸಲು ಸಾಧ್ಯ.



ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಉನ್ನಿ

ಕಾಂಗ್ರೆಸ್, ಬಿಜೆಪಿಗಳ ನಿಜ ಬಣ್ಣ ಬಯಲು

- ಸೀತಾರಾಂ ಯೆಚೂರಿ

ಒಂದೂವರೆ ವರ್ಷದ ಹಿಂದೆ ಸಮ್ಮಿಶ್ರ ಸರಕಾರಗಳ ವಿರುದ್ಧ ಎಗರಾಡುತ್ತಿದ್ದ ಕಾಂಗ್ರೆಸ್ ಮತ್ತು ಬಿಜೆಪಿಗಳು ಇಂದು ಯಾರು ತನ್ನೊಂದಿಗೆ ಮೈತ್ರಿಯ ಆಶಯ ವ್ಯಕ್ತಪಡಿಸಿದರೂ ಎದ್ದು - ಬಿದ್ದು ಓಡುತ್ತಿವೆ. ಆದರೆ ಹೀಗೆ ಮಾಡುವಾಗ ಅವು ತಮ್ಮ ಸಮಯಸಾಧಕತೆಯನ್ನಷ್ಟೇ ಪ್ರದರ್ಶಿಸುತ್ತಿವೆ. ವಾಸ್ತವವಾಗಿ ಜಾತ್ಯಾತೀತತೆ ಮತ್ತು ಒಕ್ಕೂಟ ಸ್ವರೂಪವನ್ನು ಬಲಪಡಿಸಿ ದೇಶದ ಐಕ್ಯತೆಯನ್ನು ಉಳಿಸುವ ಸೈದ್ಧಾಂತಿಕ ನೆರೆಯಿರುವುದು ಕೇವಲ ಸಂಯುಕ್ತ ರಂಗಕ್ಕೆ ಮಾತ್ರವೇ ಎಂಬುದು ಕಳೆದ ಒಂದೂವರೆ ವರ್ಷದಲ್ಲಿ ಸಾಬೀತಾಗಿದೆ ಎನ್ನುತ್ತಾರೆ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರಾದ ಸೀತಾರಾಂ ಯೆಚೂರಿಯವರು.

ಈಗ ಭಾರತೀಯ ರಾಜಕಾರಣದ ಚೌಕಟ್ಟೇ ಬದಲಾದಂತಿದೆ. ಸೈದ್ಧಾಂತಿಕ ಚರ್ಚೆ ಹಾಗೂ ನೀತಿಗಳ ಆಧಾರದಲ್ಲಿನ ರಾಜಕೀಯದಿಂದ ದೂರಸರಿದಿರುವ ಆಳುವ ವರ್ಗಗಳ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿಜೆಪಿ ರಾಜಕೀಯ ಪ್ರಾಮಾಣಿಕತೆಯ ಎಲ್ಲಾ ನಿಯಮಾವಳಿಗಳನ್ನು ಗಾಳಿಗೆ ತೂರಿವೆ; ಆಧುನಿಕ ಭಾರತದ ಪ್ರಜಾಸತ್ತಾತ್ಮಕ ಅಡಿಗಲ್ಲಿಗೆ, ಜತೆಗೆ ಜಾತ್ಯಾತೀತತೆಗೆ ಗಂಭೀರ ಸವಾಲೊಡ್ಡಿವೆ. ಆದ್ದರಿಂದ ೧೯೯೮ ರ ಮಧ್ಯಾವಧಿ ಚುನಾವಣೆಗಳು ಈ ಅವನತಿಯನ್ನು ತಡೆಗಟ್ಟಲು ಹಾಗೂ ಜಾತ್ಯಾತೀತ ಪ್ರಜಾಪ್ರಭುತ್ವ ಸ್ವರೂಪವನ್ನು ಧಿಕ್ಕರಿಸಿ ಭಾರತದ ರಾಜಕಾರಣವನ್ನು ತಪ್ಪುದಾರಿಗೊಯ್ಯುವುದನ್ನು ತಡೆಗಟ್ಟಲು ಒಂದು ಅವಕಾಶ, ನಮ್ಮ ಕರ್ತವ್ಯ ಕೂಡ.

ಹೀಗೆ ಜಾತ್ಯಾತೀತ ಪ್ರಜಾಸತ್ತಾತ್ಮಕ ಅಡಿಗಲ್ಲಿಗೆ ಸವಾಲೊಡ್ಡುವಾಗ ಕಾಂಗ್ರೆಸ್ ಮತ್ತು ಬಿಜೆಪಿ 'ಸಮ್ಮಿಶ್ರ' ಮತ್ತು ಸ್ಥಿರತೆ ಎಂಬ ಪದಗಳನ್ನು ದುರುಪಯೋಗ ಮಾಡುತ್ತಿವೆ. ಸಂಯುಕ್ತ ರಂಗ ಸ್ಥಾಪಿಸಿ ಸರಕಾರ ರಚನೆಗೊಂಡಾಗ ಇವು ಹೇಳಿದ್ದೇ ಹೇಳಿದ್ದು - ಸಮ್ಮಿಶ್ರ ಸರಕಾರಗಳು ಸ್ವಭಾವತಃ ಅಸ್ಥಿರವಾಗಿರುತ್ತವೆ ಎಂದು. ಏಕಪಕ್ಷ ಬಹುಮತವಿದ್ದಾಗ ಮಾತ್ರವೇ ಸ್ಥಿರತೆ ಹಾಗೂ ಇಂತಹ ಸ್ಥಿರತೆಯನ್ನು ತಾವು ಮಾತ್ರ ನೀಡಲು ಸಾಧ್ಯ ಎಂದು ಇವು ಆಗ ನಮಗೆ ಹೇಳಿದ್ದವು.

ಆದರೆ ಇಂದು ಈ ಪಕ್ಷಗಳು ಯಾರು ತಮ್ಮೊಂದಿಗೆ ಮೈತ್ರಿಮಾಡಿಕೊಳ್ಳಲು ಇಚ್ಛೆ ಪಡುತ್ತಾರೋ ಅವರನ್ನೆಲ್ಲಾ ಹಣ, ಮಂತ್ರಿ ಪದವಿಗಳ ಆಮಿಷ ತೋರಿಸಿ ಅನೀತಿಯುತವಾಗಿ ಆಕರ್ಷಿಸಲು ಎದ್ದು ಬಿದ್ದು ಓಡುತ್ತಿವೆ!

ವಿಚಿತ್ರ ಸನ್ನಿವೇಶಗಳನ್ನು ನೋಡಿ -

- ಮೇವು ಹಗರಣದಲ್ಲಿ ಸಿಬಿಐ ಆಪಾದಿತ ಮಾಜಿ ಮುಖ್ಯಮಂತ್ರಿಯೊಬ್ಬರು, ಈ ಹಿಂದೆ ಕಡು ಕಾಂಗ್ರೆಸ್-ವಿರೋಧದಿಂದ ತನ್ನ ರಾಜಕೀಯ ನೆಲೆ ಸ್ಥಾಪಿಸಿದ್ದರೂ ಈಗ ಕಾಂಗ್ರೆಸ್ಸಿನ ಅತ್ಯಂತ ನಿಕಟ ಮಿತ್ರ!!
- ಹಗರಣಕಾರಿ ಭ್ರಷ್ಟಾಚಾರಕ್ಕೆ ಕುಪ್ರಸಿದ್ಧರಾಗಿದ್ದು, ಅದಕ್ಕಾಗಿ ತಮಿಳುನಾಡು ಜನತೆ ಭಾರೀ ಸೋಲುಣಿಸಿದ್ದ ಮತ್ತೊಬ್ಬ ಮಾಜಿ ಮುಖ್ಯಮಂತ್ರಿ(ಣಿ) ಈಗ ಬಿಜೆಪಿಯ ಹೆಮ್ಮೆಯ 'ಸಾಧನೆ'! ಸೈದ್ಧಾಂತಿಕವಾಗಿಯಂತೂ ಈ ಮೈತ್ರಿ ಇತ್ತೀಚಿನ ವರ್ಷಗಳ ಅತ್ಯಂತ ಸಮಯಸಾಧಕ ಮೈತ್ರಿ. ಇಂದು ಮೇಲ್ಜಾತಿಯ ಆರ್ಯ ಪಾರ್ಟಿ(ಆರ್‌ಎಸ್‌ಎಸ್/ಬಿಜೆಪಿ) ಹಾಗೂ ದ್ರಾವಿಡರ ಮೇಲ್ಜಾತಿ-ವಿರೋಧಿ ಆಂದೋಲನಕ್ಕೆ ಪರಸ್ಪರ ಕೈ ಮಿಲಾಯಿಸಲು ಯಾವುದೇ ತೊಂದರೆಯಾಗುತ್ತಿಲ್ಲ. ಏಕೆಂದರೆ ಇಬ್ಬರ ಹಿಂದಿರುವ ಗುರಿಯೊಂದೇ - ರಾಜಕೀಯ ಸ್ವಪ್ರತಿಷ್ಠೆ.

ಇಂತಹ ನೀತಿ ವಿಹೀನ ಸಮಯಸಾಧಕತನ ಏನನ್ನು ತೋರಿಸುತ್ತದೆ? ಈ ಎರಡೂ ಪ್ರಮುಖ ರಾಜಕೀಯ ಪ್ರತಿಸ್ಪರ್ಧಿಗಳು - ಕಾಂಗ್ರೆಸ್ ಹಾಗೂ ಬಿಜೆಪಿ-ಇಂದು ರಚಿಸಬಯಸುವುದು ಸಮ್ಮಿಶ್ರ ಸರಕಾರಗಳನ್ನೇ ಹೊರತು ಬೇರೆಯೇನಲ್ಲ. ಆದ್ದರಿಂದ ಈಗಿನ ಸನ್ನಿವೇಶದಲ್ಲಿ ಸಮ್ಮಿಶ್ರ ಸರಕಾರದ ಬಗ್ಗೆ ಯಾರೂ ಅವಹೇಳನ ಮಾಡುವಂತಿಲ್ಲ.

ಇದು 1996 ರ ಸಂಯುಕ್ತ ರಂಗದ ರಚನೆಯೊಂದಿಗೆ ಆರಂಭವಾದ ಪ್ರಕ್ರಿಯೆಯನ್ನು ಸಮರ್ಥಿಸುತ್ತಿದೆ. ಅಂದರೆ ಭಾರತದ ಸಾಮಾಜಿಕ ವೈವಿಧ್ಯತೆ ರಾಜಕೀಯದಲ್ಲೂ ಪ್ರತಿಫಲನಗೊಂಡಿರುವುದರ ಲಕ್ಷಣವಿದು. ಆದ್ದರಿಂದ ಕಾಂಗ್ರೆಸ್, ಬಿಜೆಪಿಗಳು ಆಪಾದಿಸುತ್ತಿರುವಂತೆ ಸಮ್ಮಿಶ್ರ ಸರಕಾರಗಳು ಭಾರತೀಯ ಪ್ರಜಾಪ್ರಭುತ್ವದ ಹಿನ್ನಡೆಯ ಲಕ್ಷಣವಲ್ಲ ಬದಲಾಗಿ ಭಾರತೀಯ ಪ್ರಜಾಪ್ರಭುತ್ವ ಪ್ರೌಢಗೊಳ್ಳುತ್ತಿರುವ ಪ್ರಕ್ರಿಯೆಯ ಸಂಕೇತ. ವಿಭಿನ್ನ ಭಾಷಿಕ, ಧಾರ್ಮಿಕ ಹಾಗೂ ಜನಾಂಗೀಯ ಗುಂಪುಗಳಿಂದ ಸೇರಿರುವ ಭಾರತೀಯ ಸಾಮಾಜಿಕ ಹಂದರ ರಾಜಕೀಯದಲ್ಲಿ ತಂತಮ್ಮ ನ್ಯಾಯಬದ್ಧ ಹಕ್ಕನ್ನು ಪ್ರತಿ ಪಾದಿಸುತ್ತಿರುವುದರ ಸಂಕೇತವಿದು.

ಇದರರ್ಥ ಹಿಂದಿನ ಏಕಪಕ್ಷ ಕಾಂಗ್ರೆಸ್ ಸರಕಾರ ಕೇವಲ ಒಂದು ಭ್ರಮೆಯೆಂದಾಗಲೀ ಅಥವಾ ಇನ್ನು ಮುಂದೆ ಏಕಪಕ್ಷ ಸರಕಾರ ಸಾಧ್ಯವೇ ಇಲ್ಲ ಎಂದಾಗಲೀ ಅರ್ಥವಲ್ಲ. ನಮ್ಮ ದೇಶದ ವಿಶಾಲ ವೈವಿಧ್ಯತೆಯನ್ನು ಒಂದುಗೂಡಿಸಬಲ್ಲ ಒಂದು ಕಣ್ಣೋಟವನ್ನು ಹೊಂದಬಲ್ಲ, ಸಾಮಾಜಿಕ ಬಾಹುಳ್ಯತೆಯ ಆಂತರಿಕ ಗತಿಶೀಲತೆಯನ್ನು ಪ್ರತಿಫಲಿಸಬಲ್ಲ ಒಂದು ಪಕ್ಷ ಜನತೆಯ ವಿಶ್ವಾಸ ಗಳಿಸಿ ಏಕಪಕ್ಷ ಸರಕಾರ ರಚಿಸಬಲ್ಲದು. ಕಾಂಗ್ರೆಸ್ ಅವನತಿ ಹೊಂದುತ್ತಾ ಇತ್ತೀಚಿನ ವರ್ಷಗಳಲ್ಲಿ ಇಂತಹ ಒಂದು ಕಣ್ಣೋಟವನ್ನು ಹೊಂದಲಾರದೇ ಹೋಗಿರುವುದರಿಂದಲೇ ಒಂದು ಶೂನ್ಯ ಸೃಷ್ಟಿಯಾಗಿದ್ದು, ಇದನ್ನು ತುಂಬಲು ಬಲಪಂಥೀಯರು ಮತ್ತು ಎಡಪಂಥೀಯರು ಸ್ಪರ್ಧೆ ನಡೆಸುತ್ತಿದ್ದಾರೆ.

ಕಾಂಗ್ರೆಸ್ ತಾನು ಸ್ವಾತಂತ್ರ್ಯದ ಮೊದಲು ಹಾಗೂ ಸ್ವಾತಂತ್ರ್ಯದ ನಂತರ ಕೂಡಾ ಒಂದು ರಾಜಕೀಯ ಆಂದೋಲನಕ್ಕೆ ನೇತೃತ್ವ ನೀಡದ್ದೇನೆ ಎಂದು ಹೇಳಿಕೊಳ್ಳಬಹುದಾದರೂ ಬಿಜೆಪಿ ಇದನ್ನು ಹೇಳಿಕೊಳ್ಳುವಂತಿಲ್ಲ. ವಾಸ್ತವವಾಗಿ ಅದರ ಸೈದ್ಧಾಂತಿಕ ನೆಲೆ ಒಂದು ಆಧುನಿಕ, ಒಕ್ಕೂಟ ಸ್ವರೂಪದ, ಜಾತ್ಯಾತೀತ ಪ್ರಜಾಪ್ರಭುತ್ವದ ಕಣ್ಣೋಟಕ್ಕೆ ತದ್ವಿರುದ್ಧವಾದದ್ದು. ಎಡಪಕ್ಷಗಳು ಪ್ರತಿಪಾದಿಸುತ್ತಿರುವಂತೆ - ಭಾರತದಂತಹ ಒಂದು ವಿಶಾಲ, ಶ್ರೀಮಂತ ವೈವಿಧ್ಯತೆಯುಳ್ಳ ದೇಶದ ಐಕ್ಯತೆಯನ್ನು ಕಾಪಾಡಿಕೊಳ್ಳಬೇಕಾದರೆ ಅದು ಈ ವೈವಿಧ್ಯತೆಯಲ್ಲಿನ ಸಮಾನ ಅಂಶಗಳನ್ನು ಬಲಪಡಿಸುವ ಮೂಲಕ ಮಾತ್ರವೇ ಸಾಧ್ಯ. ಈ ವೈವಿಧ್ಯತೆಯ ಮೇಲೆ ಏಕರೂಪತೆಯೊಂದನ್ನು ಹೇರುವ ಮೂಲಕ ಇದು ಸಾಧ್ಯವಿಲ್ಲ. ಬಿಜೆಪಿಯ ಸೈದ್ಧಾಂತಿಕ ನೆಲೆ ಇದನ್ನೇ ಮಾಡಬಯಸುವಂತದ್ದು. ಒಂದು ಏಕರೂಪದ 'ಹಿಂದೂರಾಷ್ಟ್ರ' ದೊಳಗೆ ದೇಶದ ಅಪಾರ ವೈವಿಧ್ಯತೆಯನ್ನು ತುರುಕಬಯಸುವ, ಅದಕ್ಕಾಗಿ ಉನ್ಮತ್ತ ಕೋಮುವಾದ ಹಾಗೂ ಅಲ್ಪಸಂಖ್ಯಾತರನ್ನು ಕುರಿತಂತೆ ಫ್ಯಾಸಿಸ್ಟ್ ಮಾದರಿಯ ದ್ವೇಷವನ್ನು ಹುಟ್ಟಿಸುವ ನಿಲುವುಗಳು ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ಬುಡಮೇಲು ಮಾಡುವ ಪ್ರವೃತ್ತಿಗಳನ್ನೇ ಬಲಪಡಿಸುತ್ತವೆ.

ಈ ಸಂದರ್ಭಗಳಲ್ಲಿ ಬಿಜೆಪಿಯ ಪ್ರಸ್ತುತ ಕಸರತ್ತುಗಳು ಅದರ ದುಷ್ಟ ಆಟಗಳನ್ನು ತೋರ್ಪಡಿಸಿವೆಯಷ್ಟೆ. ಒಂದೆಡೆ ಅದು ಹೊಸ ಮಿತ್ರರನ್ನು ಆಕರ್ಷಿಸಲು ವಿವಾದಾತ್ಮಕ ವಿಷಯಗಳ ಬಗ್ಗೆ ತನ್ನ ತೀವ್ರ ಕೋಮುವಾದಿ ನಿಲುವುಗಳನ್ನು ಮೆದುಗೊಳಿಸಿ ಒಂದು ಗೌರವಾನ್ವಿತ ಮುಖ ಪಡೆಯಲು ಪ್ರಯತ್ನಿಸುತ್ತಿದೆ. ಇನ್ನೊಂದೆಡೆಯಲ್ಲಿ ಅದರ ಕುಡಿಗಳಾದ ವಿ.ಹೆಚ್.ಪಿ., ಭಜರಂಗ ದಳ ಇತ್ಯಾದಿಗಳು ಅತ್ಯಂತ ಉದ್ರೇಕಕಾರಿ ಪ್ರಚಾರದ ಮೂಲಕ ಕೋಮುವಾದಿ ಭಾವೋದ್ವೇಗಕ್ಕೆ ಪ್ರಯತ್ನಿಸುತ್ತಿವೆ. ಕಾಶಿ, ಮಥುರಾಗಳಲ್ಲೂ ಆಯೋಧ್ಯೆಯ ಪುನರಾವರ್ತನೆ ಮಾಡುವ ವಿ.ಹೆಚ್.ಪಿ. ಯ ಬೊಬ್ಬೆಯನ್ನೇ ಗಮನಿಸಿ ಪ್ರಧಾನಮಂತ್ರಿಗಳ ಸ್ಥಾನಕ್ಕೆ ತಮ್ಮ ಅಭ್ಯರ್ಥಿ ಒಂದು 'ಮುಖವಾಡ', ಪಕ್ಷದ ನಿಜಮುಖವನ್ನು ಮರೆಮಾಚುವ ಮುಖವಾಡ ಎಂದು ಬಿಜೆಪಿಯ ಪ್ರಧಾನ ಕಾರ್ಯದರ್ಶಿಯೊಬ್ಬರು ಬಾಯ್ತಪ್ಪಿ ಹೇಳಿರುವ ಮಾತುಗಳನ್ನು ನೆನಪಿಸಿಕೊಂಡರಷ್ಟೇ ಸಾಕು. ಜನ ಇಂತಹ ದುಷ್ಟ ತಂತ್ರಗಳನ್ನು ಅರಿತು ತಿರಸ್ಕರಿಬೇಕಾಗಿದೆ.

ಹೀಗೆ ಕೋಮುವಾದಿ ಬಲಪಂಥೀಯರು ಒಂದು ಪ್ರತಿಗಾಮಿ, ಪ್ರಗತಿ-ವಿರೋಧಿ ಮತೀಯ ಧಾರ್ಮಿಕ ಪ್ರಭುತ್ವವನ್ನು ಪ್ರತಿನಿಧಿಸಿದರೆ ಎಡಪಂಥೀಯರು ಸ್ವಾತಂತ್ರ್ಯದ ನಂತರ ಒಂದು ಒಕ್ಕೂಟ ಸ್ವರೂಪದ ಜಾತ್ಯಾತೀತ ಪ್ರಜಾಪ್ರಭುತ್ವವನ್ನು ಸ್ಥಾಪಿಸುವಲ್ಲಿ ಭಾರತೀಯ ಜನತೆ ಇದುವರೆಗೆ ಸಾಧಿಸಿದ್ದನ್ನು ಕ್ರೋಢೀಕರಿಸಿ ಒಂದು ಜನತಾ ಪ್ರಜಾಪ್ರಭುತ್ವದತ್ತ ಪ್ರಗತಿ ಸಾಧಿಸುವ ಕಣ್ಣೋಟವನ್ನು ಪ್ರತಿನಿಧಿಸುತ್ತಾರೆ. ಈ ಎರಡು ಕಣ್ಣೋಟಗಳ ಸಂಘರ್ಷ ದೀರ್ಘಾವಧಿಯಲ್ಲಿ ಇತ್ಯರ್ಥವಾಗುವಂತಹವು. ಈ ನಡುವೆ ಸಮ್ಮಿಶ್ರ ಸರಕಾರಗಳು ಇದಕ್ಕೆ ಅನಿವಾರ್ಯ ಎಂದನಿಸುತ್ತದೆ.

ಹೀಗೆ ಮುಂಬರುವ ಚುನಾವಣೆಗಳಲ್ಲಿ ಭಾರತದ ಜಾತ್ಯಾತೀತ ಮತ್ತು ಒಕ್ಕೂಟ ಸ್ವರೂಪವನ್ನು ಬಲಪಡಿಸಿ ದೇಶದ ಐಕ್ಯತೆಯನ್ನು ಉಳಿಸಿಕೊಳ್ಳುವಂತಹ ಒಂದು ಸುಸಂಗತ ಸೈದ್ಧಾಂತಿಕ ನೆಲೆಯುಳ್ಳಂತದ್ದು ಕೇವಲ ಸಂಯುಕ್ತ ರಂಗ ಮಾತ್ರವೆ. ಕಳೆದ ಒಂದು ವರ್ಷಕ್ಕೂ ಹೆಚ್ಚಿನ ಅವಧಿಯಲ್ಲಿ ಈ ನಿಟ್ಟಿನಲ್ಲಿ ಸಂಯುಕ್ತ ರಂಗದ ಬದ್ಧತೆ ಒರೆಗಲ್ಲಿನಲ್ಲಿ ಸಾಬೀತಾಗಿದೆ. ಈ ರಂಗವನ್ನು ಛಿದ್ರಗೊಳಿಸಲು ಸಕಲ ಪ್ರಯತ್ನ ನಡೆದರೂ ಈ ರಂಗ ಸಂಯುಕ್ತವಾಗಿ ಉಳಿಯಿತಷ್ಟೇ ಅಲ್ಲ, ಈ ಗುರಿಸಾಧನೆಗೆ ಜನತೆಯ ಆದೇಶ ಪಡೆಯುವ ಅದರ ನಿರ್ಧಾರವನ್ನು ಇನ್ನಷ್ಟು ಬಲಗೊಳಿಸಿತು. ತದ್ವಿರುದ್ಧವಾಗಿ ಕಾಂಗ್ರೆಸ್ ಮತ್ತು ಬಿಜೆಪಿಗೆ ಉದ್ದೇಶ ಅಧಿಕಾರ ಗಿಟ್ಟಿಸುವುದಷ್ಟೇ. ಇದಕ್ಕಾಗಿ ಅವರುಗಳು ತಮ್ಮ ಸಮಯಸಾಧಕತನವನ್ನು ಬಹಿರಂಗವಾಗಿಯೇ ಸಮರ್ಥಿಸಿಕೊಳ್ಳುತ್ತಿವೆ. ಆದರೆ ಅವರ ನಗ್ನ ಸಮಯಸಾಧಕತನ ಹಾಗೂ ಅನೀತಿಯುತ ವ್ಯವಹಾರಗಳು ಪ್ರಜಾಪ್ರಭುತ್ವ ಮತ್ತು ಜಾತ್ಯಾತೀತತೆ - ಎರಡನ್ನೂ ಬುಡಮೇಲು ಮಾಡುತ್ತಿವೆ.



ಟೈಮ್ಸ್ ಆಫ್ ಇಂಡಿಯಾದಲ್ಲಿ ಲಕ್ಷ್ಮಣ್

ಸ್ಥಿರತೆ, ಸ್ಥಿರತೆ, ಸ್ಥಿರತೆ...

ಇದೀಗ ಕಾಂಗ್ರೆಸ್, ಬಿಜೆಪಿಗಳು ಬಹುವಾಗಿ ದುರುಪಯೋಗ ಪಡಿಸುತ್ತಿರುವ ಪದಗಳು ವಾಸ್ತವವಾಗಿ ಸ್ಥಿರತೆಯೆಂದರೇನು?

ಸ್ಥಿರತೆಯೆಂದರೆ ಸಂಖ್ಯಾ ಬಹುಮತವಲ್ಲ

ಜನಗಳನ್ನು ಮೆಚ್ಚಿಸಲು ಸಾಧ್ಯ ಎಂಬ ಕಾರಣಕ್ಕಾಗಿ ಬಿಜೆಪಿ ಸ್ಥಿರತೆಯ ಘೋಷಣೆಯನ್ನೆತ್ತಿದೆ. ವಾಸ್ತವವಾಗಿ ಸ್ಥಿರತೆಯ ಬಗ್ಗೆ ಅವರದ್ದು ಅತ್ಯಂತ ಅಪಾಯಕಾರೀ ಸಂಕುಚಿತವಾದ ಅರ್ಥ. ಅವರ ಪ್ರಕಾರ ಸ್ಥಿರತೆಯೆಂದರೆ ಒಂದು ಸರಕಾರವನ್ನು ಐದು ವರ್ಷಗಳ ಕಾಲ ನಡೆಸಲು ಬೇಕಾಗುವ ಸಂಖ್ಯಾಬಲ ಮಾತ್ರ. ಆದರೆ ನೈಜ ಸ್ಥಿರತೆಗೆ ಇದು ಸಾಲದು. ಇಂತಹ ನೈಜ ಸ್ಥಿರತೆ ಕೊಡಲು ಬಿಜೆಪಿಗೆ ಸಾಧ್ಯವೂ ಇಲ್ಲ. ಜಾತ್ಯಾತೀತತೆ ನಮ್ಮ ಸಂವಿಧಾನದ ಮೂಲಾಧಾರ ಎಂದಿದೆ ಸುಪ್ರೀಕೋರ್ಟ್. ಆದರೆ ಬಿಜೆಪಿಯೇನಾದರೂ ಅಪ್ಪಿತಪ್ಪಿ ಅಧಿಕಾರಕ್ಕೆ ಬಂದರೆ ಅದು ತನ್ನ ಕೋಮುವಾದಿ ಅಜೆಂಡಾವನ್ನೇ ಜಾರಿಗೆ ತರಲು ಪ್ರಯತ್ನಿಸುತ್ತದೆ. ಎಲ್ಲಾ ಧಾರ್ಮಿಕ ವಿಭಾಗಗಳೊಂದಿಗೂ ಅದು ಸಮಾನವಾಗಿ ವರ್ತಿಸದು. ಅದೇ ರೀತಿ ವಿವಿಧ ರಾಷ್ಟ್ರೀಯ ಗುಂಪುಗಳೊಂದಿಗೂ. ಹಾಗಿರುವಾಗ ನಮ್ಮ ಐಕ್ಯತೆಯ ಅವಿಭಾಜ್ಯ ಅಂಶವಾದ ಜ್ಯಾತ್ಯಾತೀತ ಮತ್ತು ಒಕ್ಕೂಟಸ್ವರೂಪವನ್ನು ಹಾಳುಗೆಡವಿ ಈ ವಿಭಾಗಗಳಲ್ಲಿ ಭಯದ ಭಾವನೆಯನ್ನು ಮಾತ್ರವೇ ಸೃಷ್ಟಿಸಲಿಲ್ಲ ಬಿಜೆಪಿ ಆಡಳಿತ ಸ್ಥಿರತೆಯನ್ನು ಹೇಗೆ ತಾನೇ ನೀಡಬಲ್ಲದು? ಇತ್ತೀಚೆಗೆ ಜಯಪುರದಲ್ಲಿ ಮುಸ್ಲಿಮರ ಮೇಲೆ ನಡೆಸಿದ ಪೋಲೀಸ್ ಗೋಲೀಬಾರು ಇದಕ್ಕೊಂದು ಸಂಕೇತ

- ಹರ್ಕಿಶನ್‌ಸಿಂಗ್ ಸುರ್ಜಿತ್

ಸ್ಥಿರತೆ ಎಂದರೆ ಕಾಂಗ್ರೆಸ್, ಬಿಜೆಪಿಗೆ ಮತ ನೀಡುವುದಲ್ಲ

ಕಾಂಗ್ರೆಸ್ ಮತ್ತು ಬಿಜೆಪಿಗಳು ತಮ್ಮ ಸ್ವಭಾವಕ್ಕೆ ಅನುಗುಣವಾಗಿ ತಾವು ಮಾತ್ರ ಸ್ಥಿರತೆಯನ್ನು ನೀಡಬಲ್ಲೆವು ಎನ್ನುತ್ತಾರೆ. ಆದರೆ ರಾಜಕೀಯ ಭಾರತದ ಸಮಸ್ಯೆಗಳ ಅರಿವಿರುವವರಿಗೆ ಗೊತ್ತು - ಹೆಚ್ಚೆಚ್ಚು ಜನಗಳನ್ನು ಸಂಯುಕ್ತರಂಗದ ಸುತ್ತ ಅಣಿನೆರೆಸಿ ಅದನ್ನು ವಿಸ್ತರಿಸಿ ಬಲಪಡಿಸಿದರೆ ಮಾತ್ರವೇ, ಅದರಲ್ಲಿನ ಹಲವು ದೌರ್ಬಲ್ಯಗಳನ್ನು ನಿವಾರಿಸಿದರೆ ಮಾತ್ರವೇ ರಾಜಕೀಯ ಸ್ಥಿರತೆ ಸಾಧ್ಯ ಎಂದು. ಬೇರೆ ಮಾತುಗಳಲ್ಲಿ ಹೇಳುವುದಾದರೆ, ರಾಜಕೀಯ ಸ್ಥಿರತೆಯೆಂದರೆ ಕಾಂಗ್ರೆಸ್ ಅಥವಾ ಬಿಜೆಪಿಗೆ ಮತ ನೀಡುವುದಲ್ಲ, ಬದಲಿಗೆ ಸಂಯುಕ್ತ ರಂಗದೊಳಗಿರುವ ದೌರ್ಬಲ್ಯಗಳನ್ನು ನಿವಾರಿಸುವುದು. ಸಂಯುಕ್ತ ರಂಗದ ಸಮಾನ ಕನಿಷ್ಠ ಕಾರ್ಯಕ್ರಮದಲ್ಲಿ ಜನಗಳ ಹಿತಾಸಕ್ತಿಗಳಿಗೆ ಅನುಗುಣವಾಗಿರುವ ಎಲ್ಲರೂ ಒಪ್ಪಿದ ಧೋರಣೆಗಳನ್ನು ಜಾರಿಗೊಳಿಸುವಲ್ಲಿ ಹೆಚ್ಚಿನ ಪ್ರಾಮಾಣಿಕತೆಯಿಂದಷ್ಟೇ ದೇಶದ ರಾಜಕೀಯ ಸ್ಥಿರತೆ ಸಾಧ್ಯ.

- ಇ.ಎಂ.ಎಸ್.ನಂಬೂದರಿಪಾಡ್

ಸ್ಥಿರತೆ ಯಾರಿಗೆ?

ಇತ್ತೀಚಿನ ವರೆಗೆ ದೇಶ ಕಾಂಗ್ರೆಸ್‌ನ ಐದು ವರ್ಷಗಳ ಅಡೆ-ತಡೆಯಿಲ್ಲದ ಆಡಳಿತವನ್ನು ಅನುಭವಿಸಿದೆ. ಆ ಅರ್ಥದಲ್ಲಿ ಅದು ಸ್ಥಿರವಾಗಿತ್ತು. ಆದರೆ ಅದರಿಂದ ಜನರಿಗೆ ದೊರಕಿದ್ದೇನು?

- ಕೋಮು ಸೆಳೆತ ತೀವ್ರಗೊಂಡು ರಾಕ್ಷಸೀ ಸ್ವರೂಪ ಪಡೆದದ್ದು
- ಬಾಬ್ರಿ ಮಸೀದಿ ಧ್ವಂಸ, ಕೋಮು ಹಿಂಸಾಚಾರದಲ್ಲಿ ಸಾವಿರಾರು ಜೀವಗಳ ಬಲಿ, ಇನ್ನೂ ಹಲವರ ಆಸ್ತಿ, ಮನೆಮಾರು ನಷ್ಟ, ಲಕ್ಷಾಂತರ ಅಲ್ಪಸಂಖ್ಯಾತರಲ್ಲಿ ಭೀತಿಯ ಮನಃಸ್ಥಿತಿ
- ಕೋಮುವಾದವನ್ನು ಎದುರಿಸುವ ಬದಲು 'ಸ್ಥಿರ ಸರ್ಕಾರ' ಅದರೊಂದಿಗೆ ರಾಜಿ ಮಾಡಿಕೊಂಡ ಫಲವಾಗಿ ಸಮಸ್ಯೆಗಳು ಇನ್ನಷ್ಟು ತೀವ್ರ.
- ಮೇಲ್ಜಾತಿ ದಮನದಲ್ಲಿ ಹೆಚ್ಚಳ-ಇದರಿಂದಾಗಿ ಜಾತಿ ಸಂಘರ್ಷಗಳು.
- ಆರ್ಥಿಕ ಸುಧಾರಣೆಯ ಧೋರಣೆಯಿಂದಾಗಿ ಅಭೂತಪೂರ್ವ ಹೊರೆ, ಬಡತನದಿಂದ ಸಾವು, ಬೆಲೆಯೇರಿಕೆ, ನಿರುದ್ಯೋಗ ಹೆಚ್ಚಳ, ಲಕ್ಷಾಂತರ ಕಾರ್ಖಾನೆಗಳ ಮುಚ್ಚಿಕೆ, ಲಕ್ಷಾಂತರ ಕಾರ್ಮಿಕರ ರಿಟ್ರೆಂಚ್‌ಮೆಂಟ್
- ಇವೆಲ್ಲಕ್ಕೂ ಕಿರೀಟವಿಟ್ಟಂತೆ ಹಲವಾರು ಹಗರಣಗಳ ಮೂಲಕ ದೇಶವನ್ನು ಲೂಟಿ ಹೊಡೆಯಲು ಐದು ವರ್ಷಗಳ 'ಸ್ಥಿರ' ಸರ್ಕಾರ!

ಹೀಗೆ ಸರ್ಕಾರಕ್ಕೆ ಐದು ವರ್ಷ ಆಳ್ವಿಕೆ ನಡೆಸಲು ನೀಡಿದ ಸ್ಥಿರತೆ ಜನಗಳಿಗೆ ಅತ್ಯಂತ ಅಸ್ಥಿರತೆಯ ಅವಧಿಯಾಯಿತು. ನಮಗೀಗ ಬೇಕಾಗಿರುವುದು ಜನತೆಗಾಗಿ ಸ್ಥಿರತೆಯೇ ಹೊರತು ದೇಶವನ್ನು ಒಂದು ಕೋಮುವಾದಿ ಅನಾಹುತಕ್ಕೆ ತಳ್ಳಲು, ಜನಗಳ ನಡುವೆ ಇನ್ನಷ್ಟು ಅಡ್ಡ ಗೋಡೆಗಳನ್ನು ನಿರ್ಮಿಸುವ ಸರ್ಕಾರಕ್ಕೆ ಸ್ಥಿರತೆಯಲ್ಲ. ಈ ವಿಷಯದಲ್ಲಿ 18 ತಿಂಗಳ ಅಲ್ಪ ಅವಧಿಯಲ್ಲೂ ಸಂಯುಕ್ತರಂಗ ಸರ್ಕಾರದ ನಿರ್ವಹಣೆ ಬಹಳ ಉತ್ತಮವಾದದ್ದು.

ಬಿಜೆಪಿಯಾಗಲೀ, ಕಾಂಗ್ರೆಸ್ ಆಗಲೀ ತಮ್ಮ ಹೊಸ 'ಮಿತ್ರರು' ಗಳ ಜತೆಗೂಡಿ ಜನ ಬಯಸುವ ಸ್ಥಿರತೆ ನೀಡಲಾರರು. ಸ್ಥಿರತೆಯೆಂದರೆ ಬಹುಮತ ರೂಪಿಸಲು ಒಂದು ಕಲಬೆರಕೆ ಜನಾಂಗುಳಿಯನ್ನು ಮುಂದಿಡುವುದಲ್ಲ. ಸ್ಥಿರತೆಯೆಂದರೆ ಜಾತ್ಯಾತೀತತೆಗೆ, ರಾಷ್ಟ್ರೀಯ ಐಕ್ಯತೆಗೆ, ಒಕ್ಕೂಟವಾದಕ್ಕೆ ಮತ್ತು ಜನರ ಆರ್ಥಿಕ ಬೇಡಿಕೆಗಳಿಗೆ ಬದ್ಧತೆ

- ಸೀತಾರಾಂ ಯೆಚೂರಿ

ದೇಶದೊಳಗೆ

ವಿಶ್ವ

ಹೊಸಬರಿಗೆ ಟಿಕೆಟ್ : ಬಿ.ಜೆ.ಪಿ.ಯಲ್ಲಿ ವಿರೋಧ

ಒಂದು ಪುಟ್ಟ ನಿಜ ಕತೆ ಓದಿ. ಕುಂದಾಪುರದ ಬಸ್ ಸ್ಟಾಂಡಿನಲ್ಲಿ ಒಬ್ಬಳು 'ಹುಚ್ಚಿ' ಕಮ್ 'ಭಿಕ್ಷುಕಿ' 'ಒಂದು ರೂಪಾಯಿ ಆದ್ರೂ ಕೊಡಿ' ಎಂದೇ ಭಿಕ್ಷೆ ಬೇಡುತ್ತಿದ್ದಳು. ಒಂದು ರೂಪಾಯಿಗಿಂತ ಹೆಚ್ಚಿನ ಮೌಲ್ಯದ ಹಣ ಕೊಟ್ಟರೆ ತೆಗೆದುಕೊಳ್ಳಲು ಆಕೆ ನಿರಾಕರಿಸುತ್ತಿದ್ದಳು. ಚಿಕ್ಕಂದಿನಲ್ಲಿ ಕಾಣುತ್ತಿದ್ದ ಆ ದೃಶ್ಯ ತಮಾಷೆಯದೂ ಸೋಜಿಗದ್ದೂ ಆಗಿರುತ್ತಿತ್ತು.

ಭಾರತೀಯ ಜನತಾ ಪಕ್ಷ ಎಂಬ ಶಿಸ್ತುಬದ್ಧ, ಮೌಲ್ಯಾಧಾರಿತ ಎಂದು ಬೊಗಳೆ ಕೊಚ್ಚಿಕೊಳ್ಳುವ ಪಕ್ಷದ ಪರಿಸ್ಥಿತಿ ನೋಡಿ ನನಗೀಗ ಅದು ನೆನಪಿಗೆ ಬರುತ್ತಿದೆ.

ಹೇಗಾದರೂ ಮಾಡಿ ಕೇಂದ್ರದಲ್ಲಿ ಅಧಿಕಾರಕ್ಕೆ ಬರಬೇಕೆಂಬ 'ಛಲ' ತೊಟ್ಟಿರುವ ಬಿ.ಜೆ.ಪಿ. ಅಣ್ಣಾ ನೀವಾದ್ರೂ ಬನ್ನಿ; ಅವ್ವಾ ನೀವಾದ್ರೂ ಬನ್ನಿ ಎಂದು ಸಣ್ಣ ಪುಟ್ಟ ಪಕ್ಷಗಳನ್ನು, ಬೇರೆ ಬೇರೆ ಪಕ್ಷಗಳಲ್ಲಿರುವ ನಾಯಕರನ್ನು ಗೋಗರೆದು ಕರೆಯುತ್ತಿರುವುದನ್ನು ನೋಡಿದರೆ ಅಯ್ಯೋ ಪಾಪ ಎನಿಸುತ್ತಿದೆ.

ಹೀಗಾಗಿ, ಸ್ವತಃ ಮೌಲ್ಯ ಕಳೆದುಕೊಂಡು ನಾಚಿಕೆ ಮಾನ ಮರ್ಯಾದೆ ಬಿಟ್ಟ ಈ ಪಕ್ಷ ಇದೀಗ ಭ್ರಷ್ಟಾತಿಭ್ರಷ್ಟ ಪಕ್ಷಗಳನ್ನು, ವ್ಯಕ್ತಿಗಳನ್ನು ತನ್ನೆಡೆಗೆ ಸೆಳೆದುಕೊಳ್ಳಲು ಇನ್ನಿಲ್ಲದ ಕಸರತ್ತುಗಳನ್ನು ನಡೆಸುತ್ತಿದೆ. ಸ್ವಲ್ಪ ಸ್ವಲ್ಪ ಯಶಸ್ವಿಯೂ ಆಗುತ್ತಿದೆ.

ಒಂದ ಕಡೆ ಈ 'ಯಶಸ್ಸಿನ' ಜೊತೆ ಅದು ಆಂತರಿಕವಾಗಿ ಭಾರೀ ಸಮಸ್ಯೆಯನ್ನೇ ಎದುರಿಸತೊಡಗಿದೆ. ಉತ್ತರ ಪ್ರದೇಶದಲ್ಲಿ ಪಕ್ಷಾಂತರ ಮಾಡಿದ ಬೇರೆ ಪಕ್ಷಗಳ ಬಹುತೇಕ ಎಲ್ಲಾ ಶಾಸಕರಿಗೆ ಮಂತ್ರಿ ಸ್ಥಾನ ನೀಡಿದ ಬಿ.ಜೆ.ಪಿ. ಮೌಲ್ಯಗಳಿಗೆ ಇತಿಶ್ರೀ ಹಾಡಿತ್ತು. ಅದೇ ಪರಂಪರೆಯನ್ನು ಇದೀಗ ಲೋಕ ಸಭೆ ಚುನಾವಣೆಯಲ್ಲಿ ಮುಂದುವರಿಸಲು ಅದು ಮುಂದಾಗಿದೆ.

ಈತ್ತೀಚೆಗೆ ಪಕ್ಷ ಸೇರಿದ್ದ ಬಹಳಷ್ಟು ಜನರಿಗೆ ಟಿಕೆಟ್ ನೀಡಲು ಬಿ.ಜೆ.ಪಿ. ನಿರ್ಧರಿಸಿದ್ದು ಇದಕ್ಕೆ ಪಕ್ಷದಲ್ಲಿ ಪ್ರಬಲ ವಿರೋಧ ವ್ಯಕ್ತವಾಗಿದೆ. ಕಾಂಗ್ರೆಸ್‌ನಿಂದ ಹಾರಿಬಂದ ಕಮಲ್ ಚೌಧರಿ ಮತ್ತು ಭಗವತ್ ಝಾ ಆಜಾದ್‌ಗೆ ಸ್ಪರ್ಧಿಸಲು ಟಿಕೆಟ್ ನೀಡುವ ಸಂಭಾವ್ಯತೆ ಬಗ್ಗೆ ಪ್ರತಿಭಟನೆ ಬಂದಿರುವುದು ಇದಕ್ಕೆ ಉದಾಹರಣೆಗಳಾಗಿವೆ.

ಇಷ್ಟು ಮಾತ್ರವೇ ಅಲ್ಲದೆ ಈಗಾಗಲೇ ಬಿಜೆಪಿಯಲ್ಲಿರುವ, ವಿಸರ್ಜಿತ ಲೋಕಸಭೆಯ ಕೆಲವು ಸದಸ್ಯರಿಗೆ ಟಿಕೆಟ್ ಕೊಡುವುದಕ್ಕೆ ವಿರೋಧ ವ್ಯಕ್ತಪಟ್ಟಿದೆ.

ಕರ್ನೂಲ್‌ನಿಂದ ಬಂದಿದ್ದ ಮಹಿಳೆಯರ ಒಂದು ಗುಂಪು ಬಿ.ಜೆ.ಪಿ. ವಕ್ತಾರೆ ಸುಷ್ಮ ಸ್ವರಾಜ್‌ರನ್ನು ಸುತ್ತುವರೆದು ಪ್ರತಿಭಟನೆ ಘೋಷಣೆಗಳನ್ನು ಕೂಗಿತು. 1996ರ ಚುನಾವಣೆಯಲ್ಲಿ ತನ್ನ ಪರವಾಗಿ ಕೆಲಸ ಮಾಡಿದ್ದ ಕಾರ್ಯಕರ್ತರನ್ನು ಅವಮಾನ ಮಾಡುತ್ತಿರುವ ಕರ್ನೂಲ್ ಕ್ಷೇತ್ರದ ಐ.ಡಿ. ಸ್ವಾಮಿಗೆ ಮತ್ತೆ ಟಿಕೆಟ್ ನೀಡಬಾರದು ಎಂಬುದು ಈ ಮಹಿಳೆಯರ ಬೇಡಿಕೆಯಾಗಿತ್ತು.

ಐ.ಡಿ. ಸ್ವಾಮಿಯ ಕೃಪಾ ಕಟಾಕ್ಷದಿಂದ ಅಕ್ರಮ ಸಾರಾಯಿ ದಂಧೆ ನಡೆಯುತ್ತಿದೆ ಎಂದೂ ಅವರು ಆಪಾದಿಸಿದರು.

ಉತ್ತರ ಪ್ರದೇಶದಲ್ಲಿ ಸಮಸ್ಯೆ

ಬಿ.ಜೆ.ಪಿ.ಯ ಪ್ರಮುಖ ಕೋಟೆ ಎಂದು ಹೇಳಲಾಗುವ ಉತ್ತರ ಪ್ರದೇಶದಲ್ಲಿಯೇ ಆ ಪಕ್ಷ ಬಹಳಷ್ಟು ಸಮಸ್ಯೆಯನ್ನು ಎದುರಿಸಬೇಕಾಗಿದೆ.

ಕಲ್ಯಾಣ ಸಿಂಗ್ ಸರಕಾರವನ್ನು ಉಳಿಸಲು 'ನೆರವು' ನೀಡಿದ ಲೋಕತಾಂತ್ರಿಕ ಕಾಂಗ್ರೆಸ್, ಬಿ.ಎಸ್.ಪಿ. ಹಾಗೂ ಜನತಾದಳಗಳ ಬಣಗಳು ಲೋಕಸಭೆ ಚುನಾವಣೆಯಲ್ಲಿ ತಮಗೂ ಪಾಲು ಕೇಳುತ್ತಿವೆ. ಇದನ್ನೆಲ್ಲ ಬಿ.ಜೆ.ಪಿ. ಹೇಗೆ ನಿಭಾಯಿಸುತ್ತದೆ ಎನ್ನುವುದನ್ನು ಕಾದು ನೋಡಬೇಕಿದೆ.

ಪ.ಬಂಗಾಳದಲ್ಲಿ

ಬಿ.ಜೆ.ಪಿ. ಮೈತ್ರಿ ಏರ್ಪಡಿಸಿಕೊಂಡಿರುವ 'ಪಕ್ಷ'ಗಳಲ್ಲಿ ಪ.ಬಂಗಾಳದ 'ಕಾಗದದ ಹುಲಿ' ಮಮತಾ ಬ್ಯಾನರ್ಜಿಯ ತೃಣಮೂಲ ಕಾಂಗ್ರೆಸ್ ಕೂಡ ಒಂದು. ಅದರೊಂದಿಗೆ ಹೊಂದಾಣಿಕೆ ಸಾಧ್ಯವಾದ ಸಂತೋಷದಲ್ಲಿ ಬಿ.ಜೆ.ಪಿ. ಬೀಗುತ್ತಿರುವಾಗಲೇ ಆ ಉತ್ಸಾಹಕ್ಕೆ ತಣ್ಣೀರೆರಚಿರುವ ವಿದ್ಯಮಾನ ವರದಿಯಾಗಿದೆ.

ಬಿಜೆಪಿಯೊಂದಿಗೆ ವೇದಿಕೆ ಹಂಚಿಕೊಳ್ಳುವುದಕ್ಕೆ ತೃಣಮೂಲ ಕಾಂಗ್ರೆಸ್‌ನಲ್ಲಿ ಭಾರೀ ವಿರೋಧ ಕಂಡುಬಂದಿದೆ. ಇದರಿಂದ ಬಿ.ಜೆ.ಪಿ. ಕಂಗೆಟ್ಟು ಹೋಗಿದೆ.

ಕೇವಲ ಸ್ಥಾನ ಹೊಂದಾಣಿಕೆಯಿಂದ ಏನೂ ಆಗುವುದಿಲ್ಲ. ಜಂಟಿಯಾಗಿ ಪ್ರಚಾರ ನಡೆಸದಿದ್ದರೆ ಕೇವಲ ಸ್ಥಾನ ಹೊಂದಾಣಿಕೆಯಿಂದ ಏನೇನು ಸಾಧಿಸಲು ಆಗದು ಎನ್ನುವುದು ಬಿ.ಜೆ.ಪಿ.ಯ ನಿಲುವಾಗಿದೆ.

ಲೋಕ ಶಕ್ತಿಯಲ್ಲಿ ಬಂಡಾಯ

ಬಿ.ಜೆ.ಪಿ. ಅತ್ತೂ ಕರೆದು ಮೈತ್ರಿ ಮಾಡಿಕೊಂಡ ಇನ್ನೊಂದು ಪಕ್ಷವೆಂದರೆ ಸಾರಾಯಿ ಬಾಟ್ಲಿಂಗ್, ರೇವಜಿತು ಭೂ ಹಗರಣ ಮೊದಲಾದ ಹಗರಣಗಳ ಕುಖ್ಯಾತಿಯ ರಾಮಕೃಷ್ಣ ಹೆಗಡೆ ನೇತೃತ್ವದ ಲೋಕ ಶಕ್ತಿ.

ಮೊದಲಿನಿಂದಲೂ ಜಾತ್ಯಾತೀತವಾದಕ್ಕೆ ವಿರೋಧವಾದ ನಿಲುವನ್ನೇ ತಳೆಯುತ್ತಾ ಬಂದಿರುವ ಹೆಗಡೆ ಕೋಮುವಾದಿ ಬಿ.ಜೆ.ಪಿ. ಜೊತೆ ಕೈಜೋಡಿಸಿದ್ದು ಆಶ್ಚರ್ಯದ ವಿಷಯವೇನೂ ಅಲ್ಲ. ಅದು ನಿರೀಕ್ಷಿತವೇ ಆಗಿತ್ತು. ಲೋಕಶಕ್ತಿಯಲ್ಲಿ ಇದಕ್ಕೆ ಭಾರೀ ಪ್ರತಿರೋಧ ವ್ಯಕ್ತವಾಗಿದೆ. ದೆಹಲಿಯಲ್ಲಿ ಬಿಜೆಪಿ-ಲೋಕಶಕ್ತಿ ಮೈತ್ರಿ ಕುದುರಿದ ವಿಷಯ ಪ್ರಸ್ತಾಪವಾಗುತ್ತಲೇ ಅದನ್ನು ವಿರೋಧಿಸಿ ಲೋಕಶಕ್ತಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಮಾಕಾಂತ ಪಾಂಡೆ ಪಕ್ಷಕ್ಕೆ ರಾಜೀನಾಮೆ ನೀಡಿ ಜನತಾದಳವನ್ನು ಸೇರಿದರು.

ತಮ್ಮ ಈ ನಿರ್ಧಾರಕ್ಕೆ ಲೋಕಶಕ್ತಿಯ ಉತ್ತರ ಪ್ರದೇಶ ಘಟಕದ ಪೂರ್ಣ ಬೆಂಬಲವಿದೆ. ಅದರ ಕೇರಳ ಹಾಗೂ ಒರಿಸ್ಸಾ ಘಟಕಗಳೂ ಜನತಾದಳ ಸೇರಲಿವೆ ಎಂದರು.

ಹೀಗೆ ಬಿ.ಜೆ.ಪಿ.ಯ ಮೈತ್ರಿ ಕೂಟಕ್ಕೆ ಹತ್ತು ಹಲವು ರೀತಿಯ ವಿರೋಧ ಪ್ರತಿಭಟನೆಗಳು ದೇಶಾದ್ಯಂತ ದಾಖಲಾಗುತ್ತಿದ್ದು ಇದು ಉತ್ತಮ ವಿದ್ಯಾಮಾನವಾಗಿದೆ. ಕೋಮುವಾದಿ ಶಕ್ತಿಗಳನ್ನು ಸೋಲಿಸುವ ನಿಟ್ಟಿನಲ್ಲಿ ಜಾತ್ಯಾತೀತ ಶಕ್ತಿಗಳು ಇದನ್ನು ಕ್ರೋಢೀಕರಿಸುವುದು ಅಗತ್ಯ.

ಗಯೇ ವೋ ಬಾತೇಂ...

ಬಿ.ಜೆ.ಪಿ. ಮುಖಂಡ ಎ.ಬಿ. ವಾಜಪೇಯಿ ಜ. 8ರಂದು ಹುಬ್ಬಳ್ಳಿಯಲ್ಲಿ ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತಾ ಹಿಂದಿ ಚಲನಚಿತ್ರದ ಹಳೆಯ ಹಾಡೊಂದರ ತುಣುಕನ್ನು ಗುನುಗಿದರು. ಇಸ್ ದಿಲ್ ಕೆ ತುಕುಡೆ ಹಜಾರ್ ಹುಯೆ. ಕೋಯಿ ಯಹಾಂ ಗಿರಾ, ಕೋಯಿ ವಹಾಂ ಗಿರಾ. (ಈ ಹೃದಯ ಒಡೆದು ಸಾವಿರ ಚೂರಾಗಿದೆ. ಇಲ್ಲೊಂದು ಬಿದ್ದಿದೆ. ಅಲ್ಲೊಂದು ಬಿದ್ದಿದೆ ಎನ್ನುವುದು ಅದರ ಅರ್ಥ)

ಜನತಾದಳ ಒಡೆದು ಚೂರಾಗುತ್ತಿರುವುದನ್ನು ಲೇವಡಿ ಮಾಡಲು ಅವರು ಈ ಹಾಡಿನ ಸಾಲನ್ನು ಪ್ರಸ್ತಾಪಿಸಿದರು. ಜನತಾದಳದ ಪರಿಸ್ಥಿತಿ ಹಾಗಿರಲಿ ಬಿ.ಜೆ.ಪಿ. ಮುಖಂಡರೇ, 'ಕಹಾ ಗಯೇ ವೋ ದಿನ್..' ಎಂಬ ಜನಪ್ರಿಯ ಗೀತೆಯ ಸಾಲನ್ನು ಸ್ವಲ್ಪ ಬದಲಾಯಿಸಿ 'ಗಯೇ ವೋ ಬಾತೇಂ ಮೌಲ್ಯೋಂ ರಕ್ಷಾ ಕೀ' (ಮೌಲ್ಯ ರಕ್ಷಣೆಯ ಆ ಮಾತುಗಳು ಎಲ್ಲಿ ಹೋದವು?) ಎಂದು ನಿಮಗೆ ಕೇಳಬೇಕಾಗಿದೆ.

ಏನಂತೀರಿ? ವಾಜಪೇಯಿ ಅಡ್ವಾಣಿಜೀ.

ಮಧ್ಯ ಪ್ರದೇಶದಲ್ಲಿ ಗೋಲಿಬಾರಿಗೆ ಏಳು ಜನರ ಬಲಿ

ನ್ಯಾಯ ಕೇಳಿದ ಜನತೆಯ ಮೇಲೆ ಗುಂಡು ಹಾರಿಸುವ ಕಾಂಗ್ರೆಸ್ ಸರಕಾರದ ಪ್ರವೃತ್ತಿ ಇನ್ನೂ ಮುಂದುವರಿದಿದೆ. ಕಾಂಗ್ರೆಸ್‌ನ ಈ ಜನವಿರೋಧಿ ನೀತಿಗೆ ಮಧ್ಯಪ್ರದೇಶ ಈಚಿನ ಸೇರ್ಪಡೆಯಾಗಿದೆ.

ರಾಜ್ಯದಲ್ಲಿ ಜನವರಿ 12ರಂದು ಪೋಲೀಸ್ ಗೋಲಿಬಾರಿಗೆ ಏಳು ಜನರು ಬಲಿಯಾಗಿದ್ದಾರೆ.

ಬೇತುಲ್ ಜಿಲ್ಲೆಯ ಮೂಲ್ತಾಯ್ ಪಟ್ಟಣದಲ್ಲಿ ತಹಶಿಲ್ದಾರ್ ಕಛೇರಿ ಮುಂದೆ ಚಳವಳಿ ನಿರತರಾಗಿದ್ದ ರೈತರ ಮೇಲೆ ಗುಂಡು ಹಾರಿಸಿದ್ದರಿಂದ ಏಳು ಜನರು ಮೃತಪಟ್ಟಿದ್ದಾರೆ. ಅನೇಕ ಮಂದಿ ಗಾಯಗೊಂಡಿದ್ದಾರೆ.

ಅಕಾಲಿಕ ಮಳೆಯಿಂದಾಗಿ ಬೆಳೆಗಳಿಗೆ ಅಪಾರ ಹಾನಿಯಾಗಿದೆ. ಇದಕ್ಕೆ ಪರಿಹಾರ ನೀಡಬೇಕು ಎಂದು ಒತ್ತಾಯಿಸಿ ರೈತರು ಹಲವು ದಿನಗಳಿಂದ ಚಳವಳಿ ನಡೆಸುತ್ತಿದ್ದಾರೆ. ರೈತರು ಕೇಳಿದ ಪರಿಹಾರ ಮೊತ್ತವನ್ನು ಕೊಡಲು ಅಸಾಧ್ಯ ಎಂದು ಮುಖ್ಯಮಂತ್ರಿ ದಿಗ್ವಿಜಯ್ ಸಿಂಗ್ ಹೇಳಿದ್ದಾರೆ. ಪರಿಹಾರ ಕೊಡಲು ಆಗುವುದಿಲ್ಲ. ಆದರೆ ನ್ಯಾಯ ಕೇಳಿದ ರೈತರ ಜೀವವನ್ನೇ ತೆಗೆಯುವ ಅಗತ್ಯ ಇರಲಿಲ್ಲ; ಅಲ್ಲವೇ?

ಸಿ.ಪಿ.ಐ.[ಎಂ] ೧೬ ನೇ ಮಹಾಧಿವೇಶನದತ್ತ...

ರಾಜ್ಯ ಸಮ್ಮೇಳನಗಳತ್ತ ಕಿರುನೋಟ...

ಸ್ಥಿರತೆಯ ಶತ್ರುಗಳಿಂದ ಸ್ಥಿರತೆಯ ಮಾತು

ಔರಂಗಾಬಾದಿನಲ್ಲಿ ಡಿಸೆಂಬರ್ 24 ರಂದು ಬೃಹತ್ ರ್‍ಯಾಲಿಯೊಂದಿಗೆ ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) 16ನೇ ಮಹಾರಾಷ್ಟ್ರ ರಾಜ್ಯ ಸಮ್ಮೇಳನದ ಉತ್ಸಾಹ ಪೂರ್ಣ ವಾತಾವರಣದಲ್ಲಿ ಆರಂಭ ವಾಯಿತು. ಸಮ್ಮೇಳನ 24ರಿಂದ 26ರ ವರಗೆ ನಡೆಯಿತು.

'ಸ್ಥಿರತೆಯ ಶತ್ರುಗಳು ದೇಶಕ್ಕೆ ಹೇಗೆ ಸ್ಥಿರತೆಯನ್ನು ತಂದು ಕೊಟ್ಟಾರು' ಎಂದು ರ್‍ಯಾಲಿಯ ಮುಖ್ಯ ಭಾಷಣಕಾರರಾದ ಸಿ.ಪಿ.ಐ.(ಎಂ) ಪ್ರಧಾನ ಕಾರ್ಯದರ್ಶಿ ಕಾ. ಹರ್ಕಿಷನ್ ಸಿಂಗ್ ಸುರ್ಜಿತ್ ಪ್ರಶ್ನಿಸಿದರು. ಬಿ.ಜೆ.ಪಿ.ಯ ಸ್ಥಿರ ಸರ್ಕಾರದ ಘೋಷಣೆ ಅಪಹಾಸ್ಯಕರವಾದುದು ಎಂದು ಹೇಳಿದ ಸುರ್ಜಿತ್, ಆ ಪಕ್ಷದ ಅಪಾಯಕಾರಿ ರಾಜಕೀಯವನ್ನು ಎಳೆ ಎಳೆಯಾಗಿ ಬಿಡಿಸಿದರು. ಕಾಂಗ್ರೆಸ್ ಪಕ್ಷದ ದಿವಾಳಿಕೋರ ನೀತಿಗಳ ಮೇಲೆಯೂ ಅದೇ ರೀತಿಯ ಪ್ರಹಾರ ಮಾಡಿದರು. ಒಡೆಯುವ ಎಲ್ಲಾ ಪ್ರಯತ್ನಗಳನ್ನು ಎದುರಿಸಿ ಒಗ್ಗಟ್ಟಿನಿಂದ ಉಳಿದ ಸಂಯುಕ್ತ ರಂಗ ಮುಂದಿನ ಲೋಕಸಭೆ ಚುನಾವಣೆಯಲ್ಲಿ ಮುಂಚೂಣಿ ಪಕ್ಷವಾಗಿ ಹೊರಹೊಮ್ಮುತ್ತದೆ ಎಂಬ ಆಶಯವನ್ನು ಸುರ್ಜಿತ್ ವ್ಯಕ್ತಪಡಿಸಿದರು.

ರಾಜ್ಯದ ಅನೇಕ ಭಾಗಗಳಿಂದ ಬಂದಿದ್ದ ಸಾವಿರಾರು ಪುರುಷರು ಮತ್ತು ಮಹಿಳೆಯರು ಪಟ್ಟಣದಲ್ಲಿ ಕೆಂಪು ಸಾಗರವನ್ನು ಸೃಷ್ಟಿಸಿದ್ದರು. ಮರಾಠವಾಡ ಪ್ರದೇಶದ ರೈತರು ಮತ್ತು ಥಾಣೆ ವಲಯದ ಬುಡಕಟ್ಟು ಜನರು ಗಣನೀಯ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ಕ್ರಾಂತಿ ಚೌಕದಿಂದ ಎಂಪಿ ಲಾಕಾತೀಜ್ ಮೈದಾನದ ವರೆಗೆ ಮೆರವಣಿಗೆ ನಡೆಯಿತು.

ಸಿ.ಪಿ.ಐ.(ಎಂ) ರಾಜ್ಯ ಕಾರ್ಯದರ್ಶಿ ಪ್ರಭಾಕರ ಸಾಂಝ್‌ಗಿರಿ ಬಹಿರಂಗ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಪಾಲಿಟ್ ಬ್ಯೂರೋ ಸದಸ್ಯ ಕಾ॥ ಸೀತಾರಾಮ ಯೆಚೂರಿ ಅವರೂ ಮಾತನಾಡಿದರು.

ಸ್ವಾತಂತ್ರ್ಯ ಸೇನಾನಿಗಳಿಗೆ ಸನ್ಮಾನ

ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದ ಸಿ.ಪಿ.ಐ.(ಎಂ)ನ ಅನೇಕ ನಾಯಕರಿಗೆ ರ್‍ಯಾಲಿಯಲ್ಲಿ ಕಾ॥ ಸುರ್ಜಿತ್ ಹಾರರ್ಪಣೆ ಮಾಡಿ ಸನ್ಮಾನಿಸಿದರು. ಭಾರತದ ಸ್ವಾತಂತ್ರ್ಯ ಸುವರ್ಣ ಮಹೋತ್ಸವ ವರ್ಷದಲ್ಲಿ ಈ ರ್‍ಯಾಲಿ ನಡೆಯುತ್ತಿರುವುದರಿಂದ ಸ್ವಾತಂತ್ರ್ಯ ಹೋರಾಟಗಾರರಿಗೆ ಮಾಡಿದ ಸನ್ಮಾನ ವಿಶೇಷ ಮಹತ್ವ ಪಡೆದಿತ್ತು. ಪಿ.ಬಿ. ರಂಗ್ನೇಕರ್, ಅಪ್ಪಾ(ಗಂಗಾಧರ) ಬುರಂಡೆ, ವಿಠಲರಾವ್ ನಾಯ್ಕ್, ನಾನಾ ಬಲುಸಾರೆ, ಕಾಶ್ಯಪ್ ಮತ್ತು ಗೋವಾ ವಿಮೋಚನಾ ಹೋರಾಟದಲ್ಲಿ ಭಾಗವಹಿಸಿದ್ದ ಕೆ.ಎನ್ .ಬಜಾಜ್ ಶುಭಕೋರಿ ಮಾತನಾಡಿದರು.

ದುಶ್ಯಾಸನ - ಶಕುನಿ ರಾಜಕೀಯ

ಪಿ.ಬಿ. ಸದಸ್ಯ ಕಾ॥ ಯೆಚೂರಿ ತಮ್ಮ ಮೊನಚು ಹಾಗೂ ವ್ಯಂಗ್ಯ ಮಾತುಗಳಿಂದ ಬಿ.ಜೆ.ಪಿ.ಯನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು. 'ಮಹಾಭಾರತ'ವನ್ನು ಪ್ರಸ್ತಾಪಿಸಿದ ಅವರು ಬಿ.ಜೆ.ಪಿ. ದುಶ್ಯಾಸನ ರಾಜಕೀಯವನ್ನು ಅನುಸರಿಸುತ್ತಿದೆ ಎಂದರು. ಕುಟಿಲ ಶಕುನಿಯಂತೆ ಆರ್.ಎಸ್.ಎಸ್. ಬಿ.ಜೆ.ಪಿ.ಗೆ ಮಾರ್ಗದರ್ಶನ ಕೊಡುವ 'ಮಾಮಾ' ಪಾತ್ರವನ್ನು ನಿರ್ವಹಿಸುತ್ತಿದೆ ಎಂದು ಹೇಳಿದರು. ದುಶ್ಯಾಸನ ರಾಜನೀತಿ ಮತ್ತು ಸಿಂಹಾಸನ ರಾಜನೀತಿಯನ್ನು ಲೋಕ ಶಾಸನ(ಜನತೆ) ರಾಜನೀತಿಯ ಮೂಲಕ ಎದುರಿಸಲು ಇದು ಸಕಾಲ ಎಂದು ನುಡಿದರು.

ವಿರೋಧಿಗಳ ಪ್ರಚೋದನೆ ನಡುವೆ ಉತ್ತರ ಪ್ರದೇಶದಲ್ಲಿ ಯಶಸ್ವಿ ಸಮ್ಮೇಳನ

ಸಿ.ಪಿ.ಐ.(ಎಂ) ಉತ್ತರ ಪ್ರದೇಶ ರಾಜ್ಯ 16ನೇ ಸಮ್ಮೇಳನ ಸಹರಾನಪುರದಲ್ಲಿ ಡಿಸೆಂಬರ್ 16ರಿಂದ 18ರ ವರೆಗೆ ನಡೆಯಿತು. ಪ್ರಮುಖ ರೈತ ಹಾಗೂ ಪಕ್ಷದ ಮುಖಂಡ ರಾಜ ಕಿಶೋರ್ ಸಿಂಗ್ ಸ್ಮರಣಾರ್ಥ ಸಮ್ಮೇಳನದ ಸ್ಥಳಕ್ಕೆ ರಾಜಕಿಶೋರ ನಗರ ಎಂದು ಹೆಸರಿಡಲಾಗಿತ್ತು.

ಸ್ವಾತಂತ್ರ್ಯ ಹೋರಾಟ ಕಾಲದಿಂದಲೂ ಕ್ರಾಂತಿಕಾರಿ ಚಟುವಟಿಕೆಗಳು ಮತ್ತು ಅನಂತರ ಎಡಪಂಥೀಯ ಚಟುವಟಿಕೆಯಲ್ಲಿ ಸಕ್ರಿಯವಾಗಿದ್ದ ಸಹರಾನಪುರ ಜಿಲ್ಲೆಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಕೋಮುವಾದಿ ಶಕ್ತಿಗಳ ಮಧ್ಯ ಪ್ರವೇಶದಿಂದಾಗಿ ಪರಿಸ್ಥಿತಿ ಹದಗೆಟ್ಟಿದೆ. ಸಿ.ಪಿ.ಐ (ಎಂ) ರಾಜ್ಯ ಸಮ್ಮೇಳನ ಇಲ್ಲಿ ನಡೆಯುವುದಕ್ಕೆ ಈ ಶಕ್ತಿಗಳು ವಿರೋಧವಾಗಿದ್ದವು. ಹೀಗಾಗಿ, ಸಮ್ಮೇಳನದ ಉದ್ಘಾಟನೆ ಕಾಲಕ್ಕೆ ಪಕ್ಷದ ಜಿಲ್ಲಾ ಕಾರ್ಯದರ್ಶಿ ಕಾ॥ ಗುಲಾಬ್ ಸಿಂಗ್ ಅವರ ಮೇಲೆ ಎರಡು ಬಾರಿ ತುಂಬಾ ಹತ್ತಿರದಿಂದ ಗುಂಡು ಹಾರಿಸಲಾಯಿತು. ಕಾ. ಸಿಂಗ್ ಅವರ ಪ್ರಾಣವನ್ನು ಉಳಿಸಲಿಕ್ಕಾಗಿ ಅವರನ್ನು ತಕ್ಷಣವೇ ಚಂಡೀಗಢದ ಎ.ಜಿ.ಐ. ಆಸ್ಪತ್ರೆಗೆ ಸಾಗಿಸಲಾಯಿತು. ವಿರೋಧಿಗಳ ಪ್ರಚೋದಕ ಚಟುವಟಿಕೆಗಳ ಮಧ್ಯೆಯೂ ತುಂಬಾ ತಾಳ್ಮೆಯಿಂದ ಶಾಂತಿಯುತವಾಗಿ ಸಮ್ಮೇಳನವನ್ನು ನಡೆಸಲಾಯಿತು.

ಪಕ್ಷದ ಪಾಲಿಟ್‌ಬ್ಯೂರೋ ಸದಸ್ಯ ಕಾ॥ ಪ್ರಕಾಶ್ ಕಾರಟ್ ಧ್ವಜಾರೋಹಣ ಮಾಡಿದರು. ಅವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಕಳೆದ ಮೂರು ವರ್ಷಗಳಲ್ಲಿನ ಜಾಗತಿಕ ವಿದ್ಯಮಾನಗಳ ಬಗ್ಗೆ ವಿವರವಾಗಿ ತಿಳಿಸಿದರು.

ರಾಜ್ಯ ಸಮಿತಿ ಕಾರ್ಯದರ್ಶಿ ರಾಮ ಸುಮೇರ್ ಯಾದವ್ ರಾಜಕೀಯ ಮತ್ತು ಸಂಘಟನಾತ್ಮಕ ವರದಿಯನ್ನು ಮಂಡಿಸಿದರು.

40 ಜಿಲ್ಲೆಗಳನ್ನು ಪ್ರತಿನಿಧಿಸಿ 277 ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ವರದಿ ಮೇಲಿನ ಚರ್ಚೆಯಲ್ಲಿ 47 ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಕಾ॥ ಸುರ್ಜಿತ್ ಸಮಾರೋಪ ಭಾಷಣ ಮಾಡಿದರು.

ಸಮ್ಮೇಳನದ ಕೊನೆಯ ದಿನ ಗಾಂಧಿ ಮೈದಾನದಲ್ಲಿ ಹತ್ತು ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸಿದ್ದ ರ್‍ಯಾಲಿ ನಡೆಯಿತು. ಹಿರಿಯ ಸ್ವಾತಂತ್ರ್ಯ ಹೋರಾಟಗಾರ್ತಿ ಹಾಗೂ ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ನಾಯಕಿ ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್ ಬಹಿರಂಗ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಪಕ್ಷದ ಪ್ರಧಾನ ಕಾಯದರ್ಶಿ ಹರ್ಕಿಷನ್‌ಸಿಂಗ್ ಸುರ್ಜಿತ್, ಪ್ರಕಾಶ್‌ಕಾರಟ್, ಸುಭಾಶಿನಿ ಅಲಿ ಮೊದಲಾದವರು ಮಾತನಾಡಿದರು.

39 ಸದಸ್ಯರ ಹೊಸ ರಾಜ್ಯ ಸಮಿತಿ ಆಯ್ಕೆಯಾಗಿದ್ದು ಕಾ॥ ರಾಮಸುಮೇರ್ ಯಾದವ ಕಾರ್ಯದರ್ಶಿಯಾಗಿ ಪುನರಾಯ್ಕೆಗೊಂಡಿದ್ದಾರೆ.

ಹಿಮಾಚಲ ಪ್ರದೇಶ 10ನೇ ರಾಜ್ಯ ಸಮ್ಮೇಳನ

ಮಂಡಿಯಲ್ಲಿ ಡಿಸೆಂಬರ್ 12 ರಂದು ಬಹಿರಂಗ ಸಭೆ ನಡೆಯುವುದರೊಂದಿಗೆ ಸಿ.ಪಿ.ಐ.(ಎಂ) ಹಿಮಾಚಲ ಪ್ರದೇಶ ರಾಜ್ಯ 10ನೇ ಸಮ್ಮೇಳನ ಆರಂಭಗೊಂಡಿತು. ಪಕ್ಷದ ಹಿರಿಯ ನಾಯಕ ಹಾಗೂ ರಾಜ್ಯ ಸಮಿತಿಯ ಮಾಜಿ ಕಾರ್ಯದರ್ಶಿ ತಾರಾ ಚಂದ್ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಪ್ರಮುಖ ಭಾಷಣಕಾರರಾದ ಪಾಲಿಟ್ ಬ್ಯೂರೋ ಸದಸ್ಯ ಕಾ॥ ಸೀತಾರಾಮ ಯೆಚೂರಿ ಪ್ರಸಕ್ತ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿ ಸಂಯುಕ್ತರಂಗದ ಮಹತ್ವದ ಬಗ್ಗೆ ಮಾತನಾಡಿದರು.

ಸಿ.ಪಿ.ಐ.(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಹಾಗೂ ಮಾಜಿ ಶಾಸಕ ರಾಕೇಶ್ ಸಿಂಘಾ, ಜಿ.ಪಿ. ಚೌಹಾಣ್, ಡಾ॥ ಕಾಶ್ಮೀರ ಸಿಂಗ್ ಠಾಕೂರ್, ಅಶೋಕ ವೈದ್ಯ ಮತ್ತು ಅಮರ ಸಿಂಗ್ ರಾಘವಾ ಅವರೂ ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದರು.

12 ರಿಂದ 14ರ ವರೆಗೆ ನಡೆದ ಸಮ್ಮೇಳನದಲ್ಲಿ 132 ಪ್ರತಿನಿಧಿಗಳು ಮತ್ತು 34 ವೀಕ್ಷಕರು ಭಾಗವಹಿಸಿದ್ದರು. ಆ ಪೈಕಿ ಮಹಿಳೆಯರ ಸಂಖ್ಯೆ 12

ಸಮ್ಮೇಳನದಲ್ಲಿ ಆಯ್ಕೆಯಾದ 32 ಸದಸ್ಯರ ಹೊಸ ರಾಜ್ಯ ಸಮಿತಿಗೆ ಕಾ॥ ಮೊಹರ್ ಸಿಂಗ್ ಕಾರ್ಯದರ್ಶಿ ಆಗಿದ್ದಾರೆ.

ಕಾಂಗ್ರೆಸ್ ಮತ್ತು ಬಿ.ಜೆ.ಪಿ.ಯನ್ನು ಸೋಲಿಸಲು ಹಾಗೂ ಬಲಿಷ್ಠ ಎಡ, ಜಾತ್ಯಾತೀತ, ಪ್ರಜಾಸತ್ತಾತ್ಮಕ ಚಳುವಳಿಯನ್ನು ಕಟ್ಟಿ ಬೆಳೆಸಲು ಕರೆ ಕೊಡುವುದರೊಂದಿಗೆ ಸಮ್ಮೇಳನ ಮುಕ್ತಾಯಗೊಂಡಿತು.

ಸ್ವಾತಂತ್ರ್ಯ ಸಂಗ್ರಾಮದ ಕನಸು ನನಸಾಗಲು...

ಸ್ವಾತಂತ್ರ್ಯ ಸಂಗ್ರಾಮದ ಕನಸುಗಳನ್ನು ನನಸು ಮಾಡಲು ಶೋಷಿತ ಜನರು ರಾಷ್ಟ್ರ ರಾಜಕಾರಣದಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಲು ಮುಂದಾಗಬೇಕು ಎಂದು ಸಿ.ಪಿ.ಐ.(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಷನ್ ಸಿಂಗ್ ಸುರ್ಜಿತ್ ಕರೆ ಕೊಟ್ಟಿದ್ದಾರೆ.

ಪಕ್ಷದ ಹರಿಯಾಣ ರಾಜ್ಯ 9ನೇ ಸಮ್ಮೇಳನದ ಅಂಗವಾಗಿ ಡಿಸೆಂಬರ್ 16ರಂದು ರೋಹ್ಟಕ್‌ನಲ್ಲಿ ನಡೆದ ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದ ಸುರ್ಜಿತ್, ಸುಮಾರು 47 ವರ್ಷ ಕಾಲ ಆಡಳಿತ ನಡೆಸಿದ ಕಾಂಗ್ರೆಸ್ ಈ ಕನಸುಗಳಿಗೆ ವಿಶ್ವಾಸ ದ್ರೋಹ ಬಗೆದಿದೆ ಎಂದು ಟೀಕಿಸಿದರು. ಸ್ವಾತಂತ್ರ್ಯದ ಫಲವನ್ನು ಜನ ಸಾಮಾನ್ಯರಿಗೆ ತಲುಪಿಸಲು ಸಿ.ಪಿ.ಐ.(ಎಂ) ಬದ್ಧವಾಗಿದೆ ಎಂದು ಅವರು ಘೋಷಿಸಿದರು.

ಕೃಷಿಕೂಲಿಕಾರರು, ಬಡರೈತರು, ಕೈಗಾರಿಕಾ ಕಾರ್ಮಿಕರು, ನೌಕರರು, ಮಹಿಳೆಯರು ಮತ್ತು ಯುವಜನರು ದೊಡ್ಡ ಸಂಖ್ಯೆಯಲ್ಲಿ ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದರು.

ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದ ಪಕ್ಷದ ರಾಜ್ಯ ಕಾರ್ಯದರ್ಶಿ ಇಂದ್ರಜಿತ್ ಸಿಂಗ್, ಹರಿಯಾಣದ ಎಚ್.ವಿ.ಪಿ.- ಬಿ.ಜೆ.ಪಿ. ಮೈತ್ರಿ ಸರ್ಕಾರದ ಜನವಿರೋಧಿ ನೀತಿಗಳನ್ನು ಬಯಲಿಗೆಳೆದರು. ಜನತೆಯ ಉದ್ಧಾರದ ಆಶ್ವಾಸನೆ ನೀಡಿ ಭಜನ್ ಲಾಲ್ ಸರಕಾರ ಅಧಿಕಾರಕ್ಕೆ ಬಂದಿತ್ತು. ಆದರೆ ಅದು ಈಗ ರೈತರು ಮತ್ತು ಕಾರ್ಮಿಕರ ಶಾಂತಿಯುತ ಚಳುವಳಿಗಳನ್ನು ಬಗ್ಗುಬಡಿಯುತ್ತಿದೆ ಎಂದು ಸಿಂಗ್ ಹೇಳಿದರು. ಈಚಿನ ದಿನಗಳಲ್ಲಿ ರಾಜ್ಯದ ಹಲವೆಡೆ ಅನೇಕ ಮುಗ್ಧ ಜನರು ಪೋಲೀಸರ ಗುಂಡಿಗೆ ಬಲಿಯಾಗಿದ್ದಾರೆ ಎಂದರು.

ಡಿ. 16ರಿಂದ 18 ರವರೆಗೆ ನಡೆದ ಸಮ್ಮೇಳನವನ್ನು ಕಾ॥ ಸುರ್ಜಿತ್ ಉದ್ಘಾಟಿಸಿದರು. ಹಿರಿಯ ನಾಯಕ ಪೃಥ್ವಿ ಸಿಂಗ್ ಧ್ವಜಾರೋಹಣ ಮಾಡಿದರು.

ಕಾರ್ಯದರ್ಶಿ ಮಂಡಿಸಿದ ವರದಿಯ ಮೇಲಿನ ಚರ್ಚೆಯಲ್ಲಿ 47 ಪ್ರತಿನಿಧಿಗಳು ಭಾಗವಹಿಸಿದ್ದರು. 8ನೇ ರಾಜ್ಯ ಸಮ್ಮೇಳನದ ವೇಳೆಗೆ 1340 ಸದಸ್ಯರು ಪಕ್ಷದಲ್ಲಿದ್ದರು. ಈಗ ಅದು 1488 ಕ್ಕೆ ಏರಿದೆ. ಸಾಮೂಹಿಕ ಸಂಘಟನೆಗಳ ಸದಸ್ಯತ್ವ 56 ಸಾವಿರ ಇದ್ದದ್ದು ಈಗ 85 ಸಾವಿರಕ್ಕೆ ತಲುಪಿದೆ.

135 ಪ್ರತಿನಿಧಿಗಳು ಮತ್ತು 11 ವೀಕ್ಷಕರು ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು. ಈ ಪೈಕಿ ಮಹಿಳೆಯರ ಸಂಖ್ಯೆ 11 ಪಾಲಿಟ್‌ಬ್ಯೂರೋ ಸದಸ್ಯ ಸೀತಾರಾಮ್ ಯೆಚೂರಿ ಮತ್ತು ಕೇಂದ್ರ ಕಾರ್ಯದರ್ಶಿ ಮಂಡಳಿ ಸದಸ್ಯ ಸುಕೋಮಲ್ ಸೇನ್ ಅವರು ಪಾಲ್ಗೊಂಡು ಸಮ್ಮೇಳನಕ್ಕೆ ಮಾರ್ಗದರ್ಶನ ನೀಡಿದರು.

29 ಸದಸ್ಯರ ಹೊಸ ರಾಜ್ಯ ಸಮಿತಿ ರಚನೆಯಾಗಿದ್ದು ಕಾ॥ ಇಂದ್ರಜಿತ್ ಸಿಂಗ್ ಕಾರ್ಯದರ್ಶಿಯಾಗಿ ಪುನರಾಯ್ಕೆಗೊಂಡರು.

ಇಂಡೋನೇಶ್ಯಾ - ಆರ್ಥಿಕ ಬಿಕ್ಕಟ್ಟಿನಿಂದ ರಾಜಕೀಯ ಬಿಕ್ಕಟ್ಟಿನತ್ತ

ಇಂಡೋನೇಶ್ಯಾದ ಆರ್ಥಿಕ ಬಿಕ್ಕಟ್ಟು ಯಾವುದೇ ಪರಿಹಾರವಿಲ್ಲದೆ ಮುಂದುವರಿಯುತ್ತಿದ್ದಂತೆ, ಅದು ರಾಜಕೀಯ ಬಿಕ್ಕಟ್ಟು ಆಗಿ ಬೆಳೆಯುವ ಸೂಚನೆಗಳು ಕಾಣುತ್ತಿವೆ. ಇಂಡೋನೇಶ್ಯಾದ ಎಲ್ಲಾ ವಿರೋಧಿ ಪಕ್ಷಗಳು ಅಧ್ಯಕ್ಷ ಸುಹಾರ್ತೋ ಆರ್ಥಿಕ ಬಿಕ್ಕಟ್ಟು ನಿರ್ವಹಿಸಿರುವ ರೀತಿ ಬಗ್ಗೆ ಟೀಕಿಸಿದ್ದು, ಎರಡು ತಿಂಗಳಲ್ಲಿ ನಡೆಯಲಿರುವ ಚುನಾವಣೆಗಳಲ್ಲಿ ಆಳುವ ಪಕ್ಷ ಸುಹಾರ್ತೋರನ್ನು ತನ್ನ ಅಭ್ಯರ್ಥಿಯಾಗಿ ಕಣಕ್ಕಿಳಿಸಬಾರದೆಂದು ಒತ್ತಾಯಿಸಿದೆ. ನಿಷೇಧಿತರಾಗಿರುವ ಮೇಘವತಿ (ಇಂಡೋ ನೇಶ್ಯಾದ ಮೊದಲ ಅಧ್ಯಕ್ಷ ಸುಕರ್ನೋ ರವರ ಪುತ್ರಿ) ಆಳುವ ಪಕ್ಷ ಈ ರೀತಿ ಮಾಡದಿದ್ದರೆ ತಾನು ಅಭ್ಯರ್ಥಿಯಾಗಿ ಸ್ಪರ್ಧಿಸುವುದಾಗಿ ಹೇಳಿದ್ದಾರೆ. ಆಕೆಯ ಮನೆಯ ಮುಂದೆ ಒಂದು ರ್‍ಯಾಲಿ ಸೇರಿತ್ತು, ಸ್ವಯಂ ಸ್ಫೂರ್ತಿವಾಗಿ. ಮುಸ್ಲಿಂ ಮೂಲಭೂತವಾದಿ ಪಕ್ಷ ಸಹ ಅಧ್ಯಕ್ಷ ಸುಹಾರ್ತೋ ರಾಜೀನಾಮೆ ಕೊಟ್ಟು, ಹೊಸ ನಾಯಕರಿಗೆ ಹಾದಿ ಮಾಡಿಕೊಡಬೇಕೆಂದು ಒತ್ತಾಯಿಸಿತ್ತು.

ಈ ನಡುವೆ ಇಂಡೋನೇಶ್ಯಾದ ಜನ ಆ ದೇಶದ ನಾಣ್ಯ-ರೂಪಯ್ಯದ ಬೆಲೆ ಮೂರು ಕಾಸಾಗುತ್ತಿರುವುದನ್ನು ನೋಡಿ ಕಂಗಾಲಾಗಿದ್ದಾರೆ. ಕೆಲವೇ ವಾರಗಳ ಕೆಳಗೆ ಡಾಲರಿಗೆ ಸುಮಾರು 2500 ಇದ್ದ ರೂಪಯ್ಯದ ಬೆಲೆ ಈಗ 10000 ದ ವರೆಗೆ ಕುಸಿದಿದೆ. ಶೇರು ಮಾರುಕಟ್ಟೆಯಲ್ಲಿ ಕುಸಿತ ತೀವ್ರವಾಗಿ ಮುಂದುವರಿಯುತ್ತಿದೆ. ವಿದೇಶಿ ಬಂಡವಾಳ ಹೂಡಿಕೆದಾರರು ತಮ್ಮ ಶೇರುಗಳನ್ನು ದೊಡ್ಡ ಪ್ರಮಾಣದಲ್ಲಿ ಮಾರಾಟ ಮಾಡುತ್ತಿರುವುದು ಈ ಕುಸಿತಕ್ಕೆ ಕಾರಣ. ಜೀವನಾವಶ್ಯಕ ವಸ್ತುಗಳ ಬೆಲೆ ಗಗನಕ್ಕೇರುತ್ತಿರುವುದನ್ನು ಕಂಡ ಜನ ವಾರಗಟ್ಟಲೆಗೆ ಬೇಕಾದ ಜೀವನಾವಶ್ಯಕ ವಸ್ತುಗಳನ್ನು ಖರೀದಿಸುತ್ತಿದ್ದು, ಅವುಗಳ ಅಭಾವ ತಲೆ ದೋರಿದೆ. ಅಂಗಡಿಗಳ ಎದುರು ಜನ ಜಮಾಯಿಸಿದ್ದು ಹೆಚ್ಚು ಕಡಿಮೆ ದೊಂಬಿ ಪರಿಸ್ಥಿತಿ ಉಂಟಾಗಿಸಿದೆ. ಅಧ್ಯಕ್ಷ ಸುಹಾರ್ತೋ ಆರ್ಥಿಕ ಬಿಕ್ಕಟ್ಟು ನಿರ್ವಹಿಸಿರುವ ರೀತಿ ಬಗ್ಗೆ ಜನ ಶಾಪ ಹಾಕುತ್ತಿದ್ದದ್ದು ಅಂಗಡಿಗಳ ಎದುರು ಸಾಮಾನ್ಯ ದೃಶ್ಯವಾಗಿತ್ತು. ಅಂಗಡಿಗಳಲ್ಲಿರುವ ಸರಕುಗಳು ಮಾರಾಟ ಆಗಿ ಹೋಗಿ ಮಧ್ಯಾಹ್ನದ ಹೊತ್ತಿಗೆ ಅಂಗಡಿ ಮುಚ್ಚಿ ಜನಗಳಿಗೆ ಇನ್ನಷ್ಟು ಗಾಬರಿಗೆ ಕಾರಣವಾಗುತ್ತಿತ್ತು.

ಇಂಡೋನೇಶ್ಯಾದ ಆರ್ಥಿಕ ಬಿಕ್ಕಟ್ಟು, ರಾಜಕೀಯ ಬಿಕ್ಕಟ್ಟು ಆಗಿ ಬೆಳೆಯುವ ಸೂಚನೆಗಳು ಕಂಡು ಬರುತ್ತಿರುವುದರಿಂದ ಸಾಮ್ರಾಜ್ಯಶಾಹಿ ನಾಯಕರುಗಳು ಆತಂಕಗೊಂಡಿದ್ದಾರೆ. ಅವರ ಆತಂಕ ಜನಗಳ ಸಮಸ್ಯೆ ಬಗ್ಗೆ ಅಲ್ಲ. ರಾಜಕೀಯ ಒತ್ತಡದಿಂದ ಈಗಿನ ಅಧ್ಯಕ್ಷ ಸುಹಾರ್ತೋ ಸರ್ಕಾರ ಐಎಂಎಫ್ ಸಾಲದ ಶರತ್ತುಗಳನ್ನು ಜಾರಿಗೆ ತರದೆ ಹೋಗಬಹುದು ಎಂದು. ಅಧ್ಯಕ್ಷ ಸುಹಾರ್ತೋ ಇತ್ತೀಚೆಗೆ ಮಂಡಿಸಿದ್ದ ಬಜೆಟ್ ಐಎಂಎಫ್ ಸಾಲದ ಶರತ್ತುಗಳನ್ನು ಜಾರಿಗೆ ತರುವ ಹಾದಿಯಲ್ಲಿ ಇಲ್ಲ. ರಾಜಕೀಯ ಬಿಕ್ಕಟ್ಟು ಬೆಳೆಯುತ್ತಿದ್ದಂತೆ ವಿದೇಶಿ ಬಂಡವಾಳ ಹೂಡಿಕೆದಾರರು ಇನ್ನಷ್ಟು ಗಾಬರಿಗೊಂಡಿದ್ದಾರೆ. ಅವರಿಗೆ ಆಶ್ವಾಸನೆ ಕೊಡಲು ಸಾಮ್ರಾಜ್ಯಶಾಹಿ ನಾಯಕರುಗಳು ಇಂಡೋನೇಶ್ಯಾಕೆ ಸಾಲು ಸಾಲಾಗಿ ಬಂದು ಹೋಗುತ್ತಿದ್ದಾರೆ. ಐಎಂಎಫ್ ನ ಉಚ್ಛ ಮಟ್ಟದ ನಿಯೋಗ, ಅಮೇರಿಕದ ವಾಣಿಜ್ಯ ಕಾರ್ಯದರ್ಶಿ, ರಕ್ಷಣಾ ಕಾರ್ಯದರ್ಶಿಗಳು ಈಗಾಗಲೇ ಭೇಟಿ ನೀಡಿದ್ದಾರೆ. ಜನಗಳಿಗೆ ಏನೇ ತೊಂದರೆ ಆಗಲಿ, ಐಎಂಎಫ್ ಸಾಲದ ಶರತ್ತುಗಳನ್ನು ಜಾರಿಗೆ ತರಲಾಗುವುದು ಎಂಬ ಆಶ್ವಾಸನೆಯನ್ನು ಅಧ್ಯಕ್ಷ ಸುಹಾರ್ತೋರಿಂದ ಪಡೆದು ಹೋಗಿದ್ದಾರೆ. ಆರ್ಥಿಕ ಬಿಕ್ಕಟ್ಟು ತೀವ್ರವಾಗಿರುವ ಮಲೇಶ್ಯಾ, ಥೈಲಾಂಡ್, ದ. ಕೊರಿಯಾಗಳಿಗೂ ಇವರು ಭೇಟಿ ನೀಡಿದ್ದಾರೆ. ಜನರಿಂದ ರಾಜಕೀಯ ದಂಗೆ ಎದುರಿಸಬಹುದಾದ ಈ ನಾಯಕರಿಗೆ ಅಮೆರಿಕನ್ ಮಿಲಿಟರಿ ಬೆಂಬಲದ ಆಶ್ವಾಸನೆ, ಐಎಂಎಫ್ ಸಾಲದ ಶರತ್ತುಗಳನ್ನು ಜಾರಿಗೆ ತರದಿದ್ದರೆ ನಿಮ್ಮ ಸರ್ಕಾರ ಬದಲಾಯಿಸಬೇಕಾದೀತು ಎಂಬ ಎಚ್ಚರಿಕೆ ಎರಡೂ ಕೊಟ್ಟು ಹೋಗಿದ್ದಾರೆ.

ಈ ನಡುವೆ ಐಎಂಎಫ್ ಸಾಲ ಮತ್ತು ಅದರ ಶರತ್ತುಗಳು, ಆರ್ಥಿಕ ಬಿಕ್ಕಟ್ಟು ಮತ್ತು ಜನಗಳ ಸಮಸ್ಯೆಗಳನ್ನು ಇನ್ನಷ್ಟು ಜಟಿಲಗೊಳಿಸುತ್ತವೆ ಎಂಬ ಅಭಿಪ್ರಾಯ ಈ ದೇಶಗಳಲ್ಲಿ ವ್ಯಾಪಕವಾಗಿ ಹಬ್ಬುತ್ತಿದೆ. ಹಿಂದೆ ಬಂಡವಾಳಶಾಹಿ ನೀತಿಗಳಲ್ಲಿ ಅಚಲ ವಿಶ್ವಾಸ ಹೊಂದಿದ್ದವರು ಸಹ ಐಎಂಎಫ್ ಸಾಲ ಮತ್ತು ಅದರ ಶರತ್ತುಗಳು, ವಿದೇಶಿ ಬಂಡವಾಳ ಹೂಡಿಕೆದಾರರ ಹಿತಾಸಕ್ತಿ ಕಾಪಾಡಲು ಹೆಣಗುತ್ತಿವೆ ಆ ದೇಶಗಳ ಸಮಸ್ಯೆಗಳನ್ನು ಪರಿಹರಿಸಲು ಅಲ್ಲ. ಎಂಬ ಅಭಿಪ್ರಾಯ ಸಾಮಾನ್ಯವಾಗಿದೆ. ಬದಲಿ ಪರಿಹಾರದ ಹಾದಿ ಕಂಡು ಹಿಡಿಯಬೇಕೆಂಬ ಒತ್ತಡ ಆ ದೇಶದ ಸರ್ಕಾರಗಳ ಮೇಲೆ ಹೆಚ್ಚುತ್ತಿದೆ.

ಸಾಮ್ರಾಜ್ಯಶಾಹಿ ಈ ಪ್ರದೇಶದ ಸಮಸ್ಯೆಗಳನ್ನು ಯಾವುದೇ ರೀತಿಯಲ್ಲಿ ಪರಿಹರಿಸಲು ತೊಡಗಿದರೂ ಬಂಡವಾಳಶಾಹಿ ಆರ್ಥಿಕ ಬಿಕ್ಕಟ್ಟು ಇನ್ನಷ್ಟು ತೀವ್ರವಾಗುವುದು ಖಂಡಿತ.

ಲೋಕಸಂಚಾರ

ಶರತ್ ಚಂದ್ರ

ಮೆಕ್ಸಿಕೊದ ಚಿಯಾಪಾಸ್‌ನಲ್ಲಿ ಒಂದು ನರಮೇಧ

ಕ್ರಿಸ್‌ಮಸ್‌ನ ಮೂರು ದಿನಗಳ ಮೊದಲು ರಾತ್ರಿ ಮಶಿನ್‌ಗನ್ ಧಾರಿಗಳು ಚಿಯಾಪಾಸ್ ಪ್ರಾಂತ್ಯದ ಎಕ್ಟೀಲ್ ಗ್ರಾಮದಲ್ಲಿ 45 ಜನ ರೆಡ್ ಇಂಡಿಯನ್ನರನ್ನು ಕತ್ತರಿಸಿ ಹಾಕಿದರು. ಈ ನರಮೇಧಕ್ಕೆ ತೀವ್ರ ಪ್ರತಿಭಟನೆ ವ್ಯಕ್ತವಾಗಿದೆ. ಆ ಗ್ರಾಮದ ರೆಡ್ ಇಂಡಿಯನ್ನರು ನಿರಾಶ್ರಿತರ ಕ್ಯಾಂಪ್‌ಗಳಿಗೆ ಆ ನರಮೇಧದ ನಂತರ ಓಡಿ ಹೋಗಿದ್ದರು. ಜನವರಿ ಒಂದರಂದು ಎಕ್ಟೀಲ್ ಗ್ರಾಮದಲ್ಲಿ ಈ ನರಮೇಧದ ವಿರುದ್ಧ ಪ್ರತಿಭಟಿಸಿ ಸಾವಿರ ಜನ ಭಾಗವಹಿಸಿದ್ದ ರ್‍ಯಾಲಿ ಸಂಘಟಿಸಲಾಗಿತ್ತು. ಆ ರ್‍ಯಾಲಿಯನ್ನು ಚರ್ಚು ಹಾಗೂ ಮಾನವ ಹಕ್ಕು ಗುಂಪುಗಳು ಸಂಘಟಿಸಿದ್ದವು. ಆ ರ್‍ಯಾಲಿಯ ನಂತರ ಗ್ರಾಮದ ರೆಡ್ ಇಂಡಿಯನ್ನರು ವಾಪಸು ಬರಲಾರಂಭಿಸಿದ್ದಾರಂತೆ.

ಈ ನರಮೇಧಕ್ಕೆ ಮೆಕ್ಸಿಕೊದಲ್ಲಿ ಹಾಗೂ ಅಂತರರಾಷ್ಟ್ರೀಯವಾಗಿ ಭಾರೀ ಪ್ರತಿಕ್ರಿಯೆ ಬಂದಿದ್ದರಿಂದ, ಮೆಕ್ಸಿಕೊ ಸರ್ಕಾರ ನಡೆಸಿದ ತನಿಖೆಯಲ್ಲಿ ಆ ಗ್ರಾಮದ ಬಳಿ ಇರುವ ನಗರದ ಮೇಯರ್ ಸಹ ಶಾಮೀಲಾಗಿದ್ದು ಪತ್ತೆಯಾಗಿದೆ. ಹಲವಾರು ಜನರನ್ನು ಬಂಧಿಸಲಾಗಿದೆ. ಈ ನರಮೇಧದ ನಿಜವಾದ ಸ್ವರೂಪವನ್ನು ಮರೆಮಾಚಲು, ಇದು ರೆಡ್ ಇಂಡಿಯನ್ನರ ನಡುವಿನ ಅಂತಃಕಲಹ ಎಂಬ ಬಣ್ಣ ಹಚ್ಚುವ ಪ್ರಯತ್ನ ನಡೆಯಿತು. ಆದರೆ ಇದು ಸಫಲವಾಗಲಿಲ್ಲ.

ನಿಜವಾದ ಕಾರಣ ಬಯಲಾಗುವುದಕೆ ಹೆಚ್ಚು ಸಮಯ ಹಿಡಿಯಲಿಲ್ಲ. 1994 ರ ಜನವರಿ ಒಂದರಂದು

ಚಿಯಾಪಾಸ್ ಪ್ರಾಂತ್ಯದಲ್ಲಿ ಝಪಾಟಿಸ್ಟ್ ಗೆರಿಲ್ಲಾಗಳು ಆ ಪ್ರಾಂತ್ಯದ ಹಲವಾರು ನಗರಗಳನ್ನು ವಶಪಡಿಸಿಕೊಂಡು ಮೆಕ್ಸಿಕೊ ಸರ್ಕಾರವನ್ನು ನಡುಗಿಸಿದ್ದರು. ಆಗ ಸರ್ಕಾರಕ್ಕೆ ಸವಾಲಾಗಿದ್ದ ಝಪಾಟಿಸ್ಟ್ ಗೆರಿಲ್ಲಾಗಳ ಜತೆ ಶಾಂತಿ ಮಾತುಕತೆ ಆರಂಭಿಸಿದ್ದ ಸರ್ಕಾರ, 1996 ರ ಹೊತ್ತಿಗೆ ಮಾತುಕತೆ ಬಿದ್ದುಹೋಗುವಂತೆ ಮಾಡಿತ್ತು. ಆ ಮೇಲೆ ಸರ್ಕಾರ ತನ್ನ ಪ್ಯಾರಾ ಮಿಲಿಟರಿಯನ್ನು ಮಾರುವೇಷದಲ್ಲಿ ಝಪಾಟಿಸ್ಟ್ ಗೆರಿಲ್ಲಾಗಳನ್ನು ಹಾಗೂ ಅವರ ಬೆಂಬಲಿಗರನ್ನು ಬೆದರಿಸುವ ಕೆಲಸ ಶುರು ಮಾಡಿತ್ತು. ಆಗಾಗ ಝಪಾಟಿಸ್ಟ್ ಗೆರಿಲ್ಲಾಗಳು ಇದಕ್ಕೆ ಮಾರುತ್ತರ ಕೊಡುತ್ತಿದ್ದರು. ಎಕ್ಟೀಲ್ ಗ್ರಾಮದಲ್ಲಿನ ನರಮೇಧ ಸಹ ಸರ್ಕಾರದ ಈ ಪ್ರಯತ್ನದ ಭಾಗ.

ಅಲ್ಜೀರಿಯಾದಲ್ಲಿ ಮುಂದುವರಿಯುತ್ತಿರುವ ರಕ್ತಪಾತ

ಕಳೆದ ವಾರ ಅಲ್ಜೀರಿಯಾದಲ್ಲಿ ಮೂರು ಪ್ರತ್ಯೇಕ ಘಟನೆಗಳಲ್ಲಿ 400 ಜನರ ನರಮೇಧ ನಡೆದಿದೆ ಎಂದು ವರದಿಯಾಗಿದೆ. ಇದು ಅಲ್ಲಿನ ಸರ್ಕಾರ ಮತ್ತು ಮುಸ್ಲಿಂ ಮೂಲಭೂತವಾದಿಗಳ ನಡುವೆ ಹಲವು ವರ್ಷಗಳಿಂದ ನಡೆಯುತ್ತಿರುವ ಹಿಂಸಾತ್ಮಕ ಘರ್ಷಣೆಗಳ ಮುಂದುವರಿಕೆ. ಈ ವಾರದ ನರಮೇಧದ ವಿಶಿಷ್ಟತೆ ಎಂದರೆ, ಇದು ಪವಿತ್ರ ರಮ್ಜಾನ್ ತಿಂಗಳು ಆರಂಭವಾದ 2-3 ದಿನಗಳಲ್ಲಿ ನಡೆದಿದೆ. ಹಿಂಸೆಯ ತೀವ್ರತೆ, ಕ್ರೌರ್ಯವೂ ಘಟನೆಯಿಂದ ಘಟನೆಗೆ ಏರುತ್ತಿರುವುದು ಕಂಡು ಬಂದಿದೆ. ಅಮಾನುಷ ರೀತಿಯಲ್ಲಿ ಕೊರಳು ಕತ್ತರಿಸುವುದು, ಹೊಟ್ಟೆ ಸೀಳುವುದು, ಹೆಂಗಸರು ಮಕ್ಕಳಿಗೆ ಚಿತ್ರಹಿಂಸೆ ಕೊಡುವುದು ಸಾಮಾನ್ಯವಾಗಿಬಿಟ್ಟಿದೆ. ನರಮೇಧ ನಡೆಯುವ ಜಾಗವೂ ವಿಸ್ತರಿಸುತ್ತಿರುವುದು ಕಂಡು ಬಂದಿದೆ. ನರಮೇಧದ ಸಂಖ್ಯೆಯಲ್ಲಾಗಲಿ, ಬಲಿಯಾಗುವವರ ಸಂಖ್ಯೆಯಲ್ಲಾಗಲಿ ಯಾವುದೇ ರೀತಿಯಲ್ಲಿ ಬದಲಾವಣೆಯಾಗಿಲ್ಲ.

ಕಳೆದ ಕೆಲವು ವರ್ಷಗಳಲ್ಲಿ ಈ ಹಿಂಸಾಚಾರಕ್ಕೆ 60 ಸಾವಿರಕ್ಕೂ ಹೆಚ್ಚು ಜನ ಬಲಿಯಾಗಿದ್ದಾರೆ. ಅಮೆರಿಕ ಮತ್ತು ಯುರೋಪಿನ ದೇಶಗಳು ಇದನ್ನೇ ನೆಪ ಮಾಡಿಕೊಂಡು, ಅಲ್ಜೀರಿಯಾದಲ್ಲಿ ಮೂಗು ತೂರಿಸಲು ಪ್ರಯತ್ನಿಸುತ್ತಿದ್ದಾರೆ. ಅಲ್ಜೀರಿಯಾದ ಸರ್ಕಾರ ಇದು ತನ್ನ ಆಂತರಿಕ ಸಮಸ್ಯೆ ಎಂಬ ನಿಲುವು ತೆಗೆದುಕೊಂಡಿದೆ. ಕೆಲವು ವರ್ಷಗಳ ಹಿಂದೆ ಮುಸ್ಲಿಂ ಮೂಲಭೂತವಾದಿ ಪಕ್ಷ ಇಸ್ಲಾಮಿಕ್ ಸಾಲ್ವೇಶನ್ ಫ್ರಂಟ್ (FIS) ಚುನಾವಣೆಗಳಲ್ಲಿ ಗೆದ್ದಾಗ, ಆಳುವ ಪಕ್ಷ ಈ ಚುನಾವಣಾ ಫಲಿತಾಂಶಗಳನ್ನು ರದ್ದು ಮಾಡಿದಾಗ ಈ ಹಿಂಸಾಚಾರದ ಸರಣಿ ಆರಂಭವಾಯಿತು. ಆ ಮೇಲೆ ಸರ್ಕಾರ ಧರ್ಮವನ್ನು ಚುನಾವಣಾ ಪ್ರಚಾರಕ್ಕೆ ಬಳಸುವುದನ್ನು ನಿಷೇಧಿಸಿ ಸ್ಥಳೀಯ ಚುನಾವಣೆಗಳು ಸೇರಿದಂತೆ ಹಲವು ಹಂತಗಳಲ್ಲಿ ಚುನಾವಣೆಗಳನ್ನು ನಡೆಸಿದೆ. FIS ವಿಪರೀತ ಹಿಂಸಾಚಾರದಿಂದ ತನ್ನ ಜನಬೆಂಬಲ ಕಳೆದುಕೊಳ್ಳುತ್ತಿದೆ. ಇದರಿಂದಾಗಿ FIS ಸರ್ಕಾರದ ಜತೆ ಕದನವಿರಾಮ ಒಪ್ಪಂದಕ್ಕೆ ಬಂದಿತ್ತು. ಆದರೆ FIS ತನ್ನ ಸಶಸ್ತ್ರ ವಿಭಾಗ GIA ದ ಮೇಲಿನ ನಿಯಂತ್ರಣ ಕಳೆದುಕೊಳ್ಳುತ್ತಿರುವುದರಿಂದ, ಈ ಕದನವಿರಾಮ ಜಾರಿಯಾಗಿಲ್ಲ. GIA ಒಡೆದು ಚೂರು ಚೂರಾಗಿದ್ದು ಅದರ ಘಟಕಗಳು ಅರಾಜಕವಾಗಿ ಹಿಂಸಾಚಾರದಲ್ಲಿ ತೊಡಗಿವೆ. ಇವನ್ನು ಸದ್ಯದಲ್ಲೇ ನಿಯಂತ್ರಣದೊಳಗೆ ತರಲಾಗುವುದು. ಇದು ಸರ್ಕಾರದ ಅಂಬೋಣ.

ಆದರೆ ಮುಂದುವರಿಯುತ್ತಿರುವ ರಕ್ತಪಾತ ನೋಡಿದರೆ ಸಮಸ್ಯೆಗೆ ಮೂಲಭೂತವಾದ ಪರಿಹಾರ ಕಂಡುಹಿಡಿದಿಲ್ಲ ಎಂದು ಸ್ಪಷ್ಟವಾಗುತ್ತದೆ. ಸಮಸ್ಯೆಯ ಮೂಲ ಅಲ್ಜೀರಿಯಾದ ಜನತೆಯು ಫ್ರೆಂಚ್ ವಸಾಹತುಶಾಹಿ ವಿರುದ್ಧ ಹೋರಾಟದ ನಾಯಕತ್ವ ವಹಿಸಿದ್ದ ನೇಶನಲ್ ಸಾಲ್ವೇಶನ್ ಫ್ರಂಟ್ (FNS ಈಗಿನ ಆಳುವ ಪಕ್ಷ) ಕಳೆದ ದಶಕದಿಂದ ಜನತೆಯ ಆಸೆ ಆಕಾಂಕ್ಷೆಗಳನ್ನು ಪೂರೈಸದೆ ಹೋದದ್ದು. ಬೇರೆ ಯಾವುದೇ ರಾಜಕೀಯ ಪಕ್ಷ ಇಲ್ಲದ್ದರಿಂದ, ಜನತೆಯ ಅತೃಪ್ತಿಯನ್ನು ಮುಸ್ಲಿಂ ಮೂಲಭೂತವಾದಿಗಳು ಬಳಸಿಕೊಂಡಿರುವುದು. ಸಮಸ್ಯೆಯ ಮೂಲ ಪರಿಹರಿಸದೆ, ಮುಸ್ಲಿಂ ಮೂಲಭೂತವಾದಿಗಳನ್ನು ಬರಿಯ ಮಿಲಿಟರಿ ಕ್ರಮಗಳಿಂದ ದಮನ ಮಾಡಲು ಸಾಧ್ಯವಿಲ್ಲ ಎಂದು ಸರ್ಕಾರ ಮತ್ತು ಆಳುವ ಪಕ್ಷ ಅರಿತುಕೊಳ್ಳದಿರುವುದು ಪರಿಸ್ಥಿತಿಯನ್ನು ಇನ್ನೂ ಗಂಭೀರವಾಗಿಸಿದೆ.

ಫ್ರಾನ್ಸನ್ನು ನಡುಗಿಸಿದ ನಿರುದ್ಯೋಗಿಗಳ ಸಮರಕಹಳೆ

ಫ್ರಾನ್ಸನ್ನು ಕಳೆದ ಒಂದು ತಿಂಗಳಿಂದ ನಿರುದ್ಯೋಗಿಗಳ ವಿಶಿಷ್ಟ ಪ್ರತಿಭಟನಾ ಚಳುವಳಿ ನಡುಗಿಸಿದೆ. ಫ್ರಾನ್ಸಿನ ಹಲವಾರು ನಗರಗಳಲ್ಲಿ ನಿರುದ್ಯೋಗಿಗಳು ಹತ್ತಕ್ಕೂ ಹೆಚ್ಚು ನಿರುದ್ಯೋಗ ಕಚೇರಿಗಳನ್ನು ವಶಪಡಿಸಿಕೊಂಡು ಅಲ್ಲಿ ಧರಣಿ ಸತ್ಯಾಗ್ರಹ ನಡೆಸಿದ್ದಾರೆ. ಈ ವಿಶಿಷ್ಟ ಪ್ರತಿಭಟನಾ ಚಳುವಳಿ ಫ್ರಾನ್ಸ್ ಮಾತ್ರವಲ್ಲ, ಇಡೀ ಜಗತ್ತಿನ ಗಮನ ಸೆಳೆದಿದೆ.

ಫ್ರಾನ್ಸ್‌ನ 31 ಲಕ್ಷ ನಿರುದ್ಯೋಗಿಗಳನ್ನು ಪ್ರತಿನಿಧಿಸುವ ಇವರು ನಿರುದ್ಯೋಗ ಪರಿಹಾರ ಧನದಲ್ಲಿ ಏರಿಕೆ, ಉದ್ಯೋಗಿಗಳಿಗೆ ದೊರೆಯುವ ವಾರ್ಷಿಕ ಬೋನಸ್ ನಿರುದ್ಯೋಗಿಗಳಿಗೂ ಕೊಡುವಂತೆ ಒತ್ತಾಯಿಸುತ್ತಿದ್ದಾರೆ. ಅವರು ಒಂದು ವರ್ಷಕ್ಕೂ ಹೆಚ್ಚು ನಿರುದ್ಯೋಗಿಯಾಗಿದ್ದವರಿಗೆ ನಿರುದ್ಯೋಗ ಪರಿಹಾರ ಧನ ಕಡಿತಗೊಳಿಸುವ ಪದ್ಧತಿಯನ್ನೂ ಕೈ ಬಿಡುವಂತೆ ಒತ್ತಾಯಿಸುತ್ತಿದ್ದಾರೆ.

ಆರಂಭದ ಕೆಲವು ದಿನಗಳಲ್ಲಿ ನಿರುದ್ಯೋಗಿಗಳ ಈ ಚಳುವಳಿಯನ್ನು ಗಂಭೀರವಾಗಿ ತೆಗೆದುಕೊಳ್ಳದಿದ್ದರೂ, ಕಳೆದ ವಾರ ಹೆಚ್ಚು ಕಾಲ ನಿರುದ್ಯೋಗಿಯಾಗಿದ್ದವರಿಗೆ ಪರಿಹಾರ ಒದಗಿಸುವ ಸಲುವಾಗಿ ಸರ್ಕಾರ ಹತ್ತು ಕೋಟಿ ಡಾಲರ್ ಕಾಯ್ದಿರಿಸುವುದು ಎಂದು ಘೋಷಿಸಿದರು. ಸರ್ಕಾರ ಮತ್ತು ಪ್ಯಾರೀಸ್ ಸಾಗಾಣಿಕೆ ಅಧಿಕಾರಿಗಳು ವರ್ಷಕ್ಕೆ 230 ಡಾಲರ್‌ಗಿಂತ ಕಡಿಮೆ ಪರಿಹಾರ ಪಡೆಯುವ ನಿರುದ್ಯೋಗಿಗಳಿಗೆ ಸಾರ್ವಜನಿಕ ಸಾಗಾಣಿಕೆ ಟಿಕೆಟ್‌ಗಳನ್ನು ಕೊಡಲು ನಿರ್ಧರಿಸಿದ್ದಾರೆ.

ಆದರೂ ಹಲವು ನಿರುದ್ಯೋಗ ಕಚೇರಿಗಳಲ್ಲಿ ಚಳುವಳಿ ಮುಂದುವರಿಯುತ್ತಿರುವ ಬಗ್ಗೆ ವರದಿಗಳು ಬಂದಿವೆ. ಪ್ಯಾರೀಸ್ ಮತ್ತು ಮಾರ್ಸೆಲೆಸ್‌ಗಳಲ್ಲಿ 500 ಡಾಲರ್ ವಾರ್ಷಿಕ ಬೋನಸ್ ಕೊಡುವವರೆಗೆ ಚಳುವಳಿ ನಿಲ್ಲಿಸುವುದಿಲ್ಲ ಎಂದಿದ್ದಾರೆ. ಪ್ರಧಾನಿ ಮತ್ತು ಉದ್ಯೋಗ ಸಚಿವರು ಚಳುವಳಿಯನ್ನು ಹಿಂತೆಗೆದುಕೊಳ್ಳುವಂತೆ ಮನವಿ ಮಾಡಿದ್ದಾರೆ.

ನಿರುದ್ಯೋಗಿಗಳ ವಿಶಿಷ್ಟ ಪ್ರತಿಭಟನಾ ಚಳುವಳಿ ಫ್ರಾನ್ಸಿನ ಸೋಶಲಿಸ್ಟ್ ನಾಯಕತ್ವದ ಸರಕಾರದ ಚುನಾವಣಾ ಭರವಸೆಯನ್ನು ನೆನಪಿಸಿದೆ. ಫ್ರಾನ್ಸಿನಲ್ಲಿ ಏಳು ಲಕ್ಷ ಉದ್ಯೋಗಗಳನ್ನು ಸೃಷ್ಟಿಸುವ ಭರವಸೆಯನ್ನು ಜಾರಿಗೆ ತರುವಂತೆ ಒತ್ತಾಯಿಸಿದೆ.

ಬರ್ಲಿನ್‌ನಲ್ಲಿ ಲಕ್ಷ ಜನರ ಎಡಪಂಥೀಯ ರ್‍ಯಾಲಿ

ಬರ್ಲಿನ್‌ನಲ್ಲಿ ಇತ್ತೀಚೆಗೆ ಆರು ವರ್ಷಗಳ ನಂತರ ಲಕ್ಷಕ್ಕೂ ಹೆಚ್ಚು ಜನರು ಭಾಗವಹಿಸಿದ್ದ ಭಾರಿ ರ್‍ಯಾಲಿ ಕಾಣಬಂತು. ಪೂರ್ವ ಜರ್ಮನಿಯಲ್ಲಿ ಸಮಾಜವಾದಿ ವ್ಯವಸ್ಥೆಯ ಪತನದ ನಂತರ ಇದು ಅತಿ ದೊಡ್ಡ ರ್‍ಯಾಲಿಯಾಗಿತ್ತು. ಈ ರ್‍ಯಾಲಿ 1919 ರಲ್ಲಿ ನಡೆದ ರೋಸಾ ಲಕ್ಸಂಬರ್ಗ್, ಕಾರ್ಲ್‌ಲೈಬ್ನಿಕ್ಟ್ ಮತ್ತು ಹಲವಾರು ಕಮ್ಯುನಿಸ್ಟರ ಕೊಲೆಗಳನ್ನು ನೆನಪಿಸಿಕೊಂಡು ಅದರ ವಿರುದ್ಧ ಪ್ರತಿಭಟಿಸುವ ಸಲುವಾಗಿ ಸಂಘಟಿತವಾಗಿತ್ತು.

1990ರಲ್ಲಿ ಬರ್ಲಿನ್ ಗೋಡೆ ಬಿದ್ದ ನಂತರ PDS ಎಂದು ಹೆಸರು ಬದಲಾಯಿಸಿಕೊಂಡ ನಂತರ ಜರ್ಮನ್ ಕಮ್ಯುನಿಸ್ಟ್ ಪಕ್ಷ ಸಂಘಟಿಸಿದ ಅತಿ ದೊಡ್ಡ ರ್‍ಯಾಲಿಯಾಗಿತ್ತು. ಕಳೆದ ವರ್ಷ ಇಂತಹುದೇ ರ್‍ಯಾಲಿಯಲ್ಲಿ ಸುಮಾರು 35 ಸಾವಿರ ಜನ ಭಾಗವಹಿಸಿದ್ದರು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು.

ಯುರೋಪು ಮತ್ತು ಇತರ ಅಭಿವೃದ್ಧ ಬಂಡವಾಳಶಾಹಿ ದೇಶಗಳಲ್ಲಿ, ಮಾಜಿ ಸಮಾಜವಾದಿ ದೇಶಗಳಲ್ಲಿ ಸಮಾಜವಾದದತ್ತ ಜನ ಪುನಃ ತಿರುಗುತ್ತಿರುವುದರ ಸಂಕೇತ ಈ ರ್‍ಯಾಲಿ.

ರಶ್ಯಾದ ಆರ್ಥಿಕ ಧೋರಣೆಗಳು ತಪ್ಪು ವಿಫಲ ಎಂದು ಯೆಲ್ಸಿನ್

ಆರು ವರ್ಷಗಳ ನಂತರ ಸಮಾಜವಾದಿ ದೇಶಗಳ ಜನಗಳಿಗೆ ಮಾತ್ರವಲ್ಲ, ನಾಯಕರಿಗೆ ಸಹ ಜ್ಞಾನೋದಯವಾಗತೊಡಗಿದೆ. ಯೆಲ್ಸಿನ್ ದೇಶವನ್ನುದ್ದೇಶಿಸಿ ಮಾಡಿದ ತಮ್ಮ ಹೊಸ ವರ್ಷದ ಭಾಷಣದಲ್ಲಿ ಕಳೆದ ಆರು ವರ್ಷಗಳಿಂದ ತಾವು ಅನುಸರಿಸುತ್ತಾ ಬಂದಿರುವ ಆರ್ಥಿಕ ನೀತಿಗಳು ವಿಫಲವಾಗಿವೆ ಎಂದು ಒಪ್ಪಿಕೊಂಡಿದ್ದಾರೆ. ಅಲ್ಲದೆ ಈ ಆರ್ಥಿಕ ನೀತಿಗಳು ತಪ್ಪು ಎಂದೂ ಒಪ್ಪಿಕೊಂಡಿದ್ದಾರೆ. ಈ ಆರು ವರ್ಷಗಳಲ್ಲಿ ರಶ್ಯಾ ಯಾವುದೇ ಸಾಧನೆಗಳನ್ನು ಮಾಡಿಲ್ಲ ಮಾತ್ರವಲ್ಲ, ಬಹುಪಾಲು ಜನತೆಯ ಜೀವನ ದುರ್ಭರವಾಗಿದೆ ಎಂದು ಹೇಳಿದ್ದಾರೆ.

ಮಾರುಕಟ್ಟೆ ನೀತಿಗಳನ್ನು ಆರಾಧ್ಯ ದೈವದ ಮಟ್ಟಕ್ಕೆ ಏರಿಸಲಾಯಿತು ಎಂದು ತಮ್ಮದೇ ಸರ್ಕಾರದ ನೀತಿಗಳನ್ನು ಯೆಲ್ಸಿನ್ ಟೀಕಿಸಿದರು. ಹಿಂದಿನ ಪ್ರಧಾನಿ ಗೈದಾರ್ ಮತ್ತು ಪ್ರಸ್ತುತ ಉಪಪ್ರಧಾನಿ ಚುಬಿಯಾಸ್ ರವರನ್ನು ಈ ನೀತಿಗಳಿಗಾಗಿ ಟೀಕಿಸಿದ ಅವರು, ತಾನು ಹಿಂದೆ ದೇಶದ ಜನರಿಗೆ ಜನವರಿ 1 ರೊಳಗೆ ಎಲ್ಲಾ ಬಾಕಿ ಇರುವ ಸಂಬಳ ಕೊಡಿಸುತ್ತೇನೆ ಎಂಬ ತನ್ನ ಭರವಸೆ ಉಳಿಸಿಕೊಳ್ಳಲಾಗಲಿಲ್ಲ ಎಂದು ಒಪ್ಪಿಕೊಂಡರು. ಈ ವರ್ಷದಲ್ಲಿ ಎಲ್ಲಾ ತಪ್ಪುಗಳನ್ನು ಸರಿಪಡಿಸಿಕೊಳ್ಳಲಾಗುವುದು ಎಂದು ಭರವಸೆ ಕೊಟ್ಟರು. ಪ್ರಸ್ತುತ ಉಪಪ್ರಧಾನಿ ಚುಬಿಯಾಸ್ ಮತ್ತು ಅವರ ಹಲವು ಸಹಯೋಗಿಗಳನ್ನು ಸರ್ಕಾರದಿಂದ ಹೊರಗೆ ಹಾಕಲಾಗುವುದು ಎಂದು ರಾಜಕೀಯ ವೀಕ್ಷಕರು ಅಭಿಪ್ರಾಯಪಟ್ಟಿದ್ದಾರೆ.

ಹೊಸ ವರ್ಷ ಘರ್ಷಣೆಯ ಬದಲು ಮಾತುಕತೆ, ಸಹಮತಿಯ ವರ್ಷವಾಗಿರುತ್ತದೆ ಎಂದು ಯೆಲ್ಸಿನ್‌ರ ಹೇಳಿಕೆಯನ್ನು, ರಶ್ಯಾದ ಪಾರ್ಲಿಮೆಂಟಿನಲ್ಲಿ ದೊಡ್ಡ ಶಕ್ತಿಯಾಗಿರುವ ಕಮ್ಯುನಿಸ್ಟ್ ಮತ್ತು ಅದರ ಮಿತ್ರಪಕ್ಷಗಳ ಜತೆ ಸಹಕಾರದತ್ತ ಯೆಲ್ಸಿನ್ ವಾಲುತ್ತಿದ್ದಾರೆ ಎಂದು ಅರ್ಥೈಸಲಾಗಿದೆ.

ಈ ನಡುವೆ ಯೆಲ್ಸಿನ್‌ರ ಆರೋಗ್ಯ ಹದಗೆಟ್ಟಿರುವ ಬಗ್ಗೆ ಬರುತ್ತಿರುವ ವರದಿಗಳ ಹಿನ್ನೆಲೆಯಲ್ಲಿ, ರಶ್ಯಾ ಬಂಡವಾಳಶಾಹಿ ಪುನಃಸ್ಥಾಪನೆಯ ದಾರಿಯಿಂದ ದೂರಸರಿಯುವ ಲಕ್ಷಣಗಳು ಸ್ಪಷ್ಟವಾಗಿ ಕಂಡುಬರುತ್ತಿವೆ ಎನ್ನಬಹುದು.

ಹತ್ತು ಲಕ್ಷ ವಿದೇಶಿಯರು ವಾಪಸು ಹೋಗಿ ಎಂದು ಮಲೇಶ್ಯಾ ಪ್ರಧಾನಿ

ಮಲೇಶ್ಯಾ ತನ್ನ ಆರ್ಥಿಕ ಬಿಕ್ಕಟ್ಟನ್ನು ಪರಿಹರಿಸಲು ಹೊರಟಿರುವ ಈ ಕಾಲಘಟ್ಟದಲ್ಲಿ, ಅಲ್ಲಿ ಈಗ ವಾಸಿಸುತ್ತಿರುವ ಸುಮಾರು ಹತ್ತು ಲಕ್ಷ ವಿದೇಶಿಯರು ತಮ್ಮ ದೇಶಗಳಿಗೆ ವಾಪಸು ಹೋಗಬೇಕಾಗಬಹುದು ಎಂದು ಅಲ್ಲಿನ ಪ್ರಧಾನಿ ಹೇಳಿದ್ದಾರೆ ಎಂದು ವರದಿಯಾಗಿದೆ. ಆದರೆ ಇಂತಹ ಹೇಳಿಕೆ ನೀಡಿಲ್ಲ ಎಂದು ಅವರು ಆಮೇಲೆ ನಿರಾಕರಿಸಿದ್ದೂ ವರದಿಯಾಗಿದೆ.

ಅದು ಏನೇ ಇರಲಿ, ಇಂತಹ ಹೇಳಿಕೆಗಳ ಬಗ್ಗೆ ವದಂತಿಗಳು ಬರುವುದು, ದಕ್ಷಿಣ ಪೂರ್ವ ಏಶ್ಯಾದ ಆರ್ಥಿಕ ಬಿಕ್ಕಟ್ಟಿನ ತೀವ್ರತೆಯನ್ನಂತೂ ಇದು ತೋರಿಸುತ್ತದೆ. ಮಲೇಶ್ಯಾದಲ್ಲಿ ದೊಡ್ಡ ಸಂಖ್ಯೆಯಲ್ಲಿ ವಿದೇಶಿಯರು (ಭಾರತೀಯರೂ ಸೇರಿದಂತೆ) ಕೆಲಸ ಮಾಡುತ್ತಿದ್ದು, ಆರ್ಥಿಕ ಬಿಕ್ಕಟ್ಟಿನ ಫಲವಾಗಿ ಜನಾಂಗೀಯ ಸಮಸ್ಯೆಗಳು ಆರಂಭವಾಗಬಹುದೆಂಬ ಆತಂಕ ಹರಡಿದೆ.

ಮಲೇಶ್ಯಾದಲ್ಲಿ ಮಾತ್ರವಲ್ಲ, ಇಂಡೋನೇಶ್ಯಾ, ಥೈಲಾಂಡ್ ಮುಂತಾದ ದೇಶಗಳಲ್ಲೂ ಬಿಕ್ಕಟ್ಟನ್ನು, ಅಲ್ಪಸಂಖ್ಯಾತ ಚೀನಿ ವ್ಯಾಪಾರಿಗಳ ಮೇಲೆ ತೋರಿಸಿ ಜನಾಂಗೀಯ ಸಮಸ್ಯೆಗಳಾಗಿ ಅವನ್ನು ಪರಿವರ್ತಿಸುವ ಹುನ್ನಾರ ನಡೆದಿದೆ.

ಮಾತುಗಳು ಕೃತಿಗಿಳಿಯಲಿ - ಎಲ್ಲಾ ರಾಜಕೀಯ ಪಕ್ಷಗಳಿಗೆ ಮಹಿಳಾ ಸಂಘಟನೆಗಳ ಮನವಿ

ಮಹಿಳೆಯರಿಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ಇತರ ಮುಖ್ಯ ಪ್ರಶ್ನೆಗಳೊಂದಿಗೆ ಪರಿಗಣಿಸಿ ಅವನ್ನು ರಾಷ್ಟ್ರೀಯ ಅಜೆಂಡಾದಲ್ಲಿ ಸೇರಿಸಬೇಕು ಎಂದು ಏಳು ರಾಷ್ಟ್ರೀಯ ಮಹಿಳಾ ಸಂಘಟನೆಗಳು ಎಲ್ಲಾ ರಾಜಕೀಯ ಪಕ್ಷಗಳಿಗೆ ಮನವಿ ಮಾಡಿಕೊಂಡಿವೆ. ಮೂರು ಭಾಗಗಳ 'ಮಹಿಳಾ ಚಾರ್ಟರ್' (ಮಹಿಳಾ ಆಗ್ರಹ ಪತ್ರ) ನ್ನು ಮುಂದಿಟ್ಟಿರುವ ಈ ಸಂಘಟನೆಗಳು ರಾಜಕೀಯ ಪಕ್ಷಗಳು ಮಹಿಳಾ ಸಮಾನತೆಗೆ ತಮ್ಮ ಬದ್ಧತೆಯನ್ನು ಸಾಬೀತು ಮಾಡಲು ಅವಕ್ಕೆ ಸಂಬಂಧಪಟ್ಟ ಪ್ರಶ್ನೆಗಳನ್ನು ತಂತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಸೇರಿಸಬೇಕು, ನಂತರದ ಅವನ್ನು ಮೂರ್ತ ಧೋರಣೆಗಳಿಗಾಗಿ, ಆಚರಣೆಗಳಾಗಿ ತರಬೇಕು ಎಂದು ಏಳು ಸಂಘಟನೆಗಳು ಆಗ್ರಹಪಡಿಸಿವೆ. ಎಐಡಿಡಬ್ಲ್ಯುಎ, ಎಐಡಬ್ಲ್ಯುಸಿ, ಸಿ.ಡಬ್ಲ್ಯು.ಡಿ.ಎಸ್, ಎಂ.ಡಿ.ಎಸ್., ಜೆ.ಡಬ್ಲ್ಯು.ಪಿ., ಎನ್.ಎಫ್. ಐ.ಡಬ್ಲ್ಯು. ಹಾಗೂ ವೈಡಬ್ಲ್ಯುಸಿಎ ಇವೇ ಆ ಏಳು ರಾಷ್ಟ್ರೀಯ ಮಹಿಳಾ ಸಂಘಟನೆಗಳು.

ಈ ಚಾರ್ಟರ್‌ನ ರಾಜಕೀಯ ವಿಭಾಗದಲ್ಲಿ ಮೂರನೇ ಒಂದು ಮೀಸಲಾತಿಯ ಭರವಸೆಯಿಂದ ಮುಂದೆ ಹೋಗಿ ಹೊಸ ಲೋಕಸಭೆಯ ಮೊದಲ ಅಧಿವೇಶನದಲ್ಲೇ ಮೀಸಲಾತಿ ಮಸೂದೆಯನ್ನು ಅಂಗೀಕರಿಸುವ ಸ್ಪಷ್ಟ ವಚನ ನೀಡಬೇಕೆಂದು ಆಗ್ರಹಪಡಿಸಲಾಗಿದೆ. ಧರ್ಮವನ್ನು ರಾಜಕೀಯದಿಂದ ಪ್ರತ್ಯೇಕಿಸಲಾಗುವುದು ಎಂಬ ಬಗ್ಗೆ ವಚನಬದ್ಧರಾಗಬೇಕು. ಕೋಮು ಆಧಾರದ ಮೇಲೆ ಜನಗಳನ್ನು ಎಬ್ಬಿಸುವುದಿಲ್ಲ ಎಂದು ವಚನ ಕೊಡಬೇಕಾಗಿ ಆಗ್ರಹಿಸಲಾಗಿದೆ. ಚಾರ್ಟರ್‌ನ ಆರ್ಥಿಕ ವಿಭಾಗ ಮಹಿಳಾ ಸಮಾನತೆ ಹಾಗೂ ಆರ್ಥಿಕ ಸ್ವಾತಂತ್ರ್ಯದ ನಡುವಿನ ಕೊಂಡಿಯನ್ನು ಎತ್ತಿಹೇಳಿ ಮಹಿಳಾ ಕೃಷಿಕಾರ್ಮಿಕರು, ಮನೆ ಆಧಾರಿತ ಕಾರ್ಮಿಕರು ಹಾಗೂ ಇತರ ಅಸಂಘಟಿತ ವಲಯದಲ್ಲಿನ ಮಹಿಳಾ ಕಾರ್ಮಿಕರ ಬಗ್ಗೆ ಒಂದು ಶಾಸನ ತರಲು ತಾವು ಬದ್ಧ ಎಂದು ರಾಜಕೀಯ ಪಕ್ಷಗಳು ಸ್ಪಷ್ಟಪಡಿಸಬೇಕು, ದಲಿತ, ಬುಡಕಟ್ಟು ಹಾಗೂ ಓ.ಬಿ.ಸಿ. ಮಹಿಳೆಯರಿಗೆ ನಿರ್ದಿಷ್ಟ ಕಾರ್ಯಕ್ರಮಗಳನ್ನು ಮುಂದಿಡಬೇಕು, ಭೂಸುಧಾರಣೆ ಮಾಡಿ ಮಹಿಳೆಯರಿಗೆ ಜಂಟಿ ಪಟ್ಟ ನೀಡಬೇಕು ಎಂದು ಮಹಿಳಾ ಸಂಘಟನೆಗಳು ಒತ್ತಾಯಿಸಿವೆ. ಒಂದು ಗಮನಾರ್ಹ ಸಂಗತಿಯೆಂದರೆ ಮಹಿಳೆಯರನ್ನು ಇನ್ನಷ್ಟು ಅಂಚಿಗೆ ತಳ್ಳಿರುವ ಜಾಗತೀಕರಣ ಮತ್ತು ಉದಾರೀಕರಣದ ನೀತಿಗಳ ಮರು ಪರಿಶೀಲನೆಯಾಗಬೇಕೆಂಬ ದೇಶದ ಮಹಿಳೆಯರ ಬೇಡಿಕೆಯನ್ನು ಈ ಚಾರ್ಟರ್‌ನಲ್ಲಿ ಸೇರಿಸಲಾಗಿದೆ.

ಚಾರ್ಜರ್‌ನ ಸಾಮಾಜಿಕ ಮತ್ತು ಕಾನೂನು ಭಾಗದಲ್ಲಿ ಎಲ್ಲಾ ಕೋಮುಗಳ ಮಹಿಳೆಯರಿಗೆ ಸಮಾನ ಹಕ್ಕುಗಳಿರಬೇಕು ಎಂಬ ನೀತಿಗೆ ಬದ್ಧತೆಯನ್ನು ಸಾರಬೇಕು ಎಂದು ಒತ್ತಾಯಿಸಲಾಗಿದೆ. ಮಕ್ಕಳ ದುರುಪಯೋಗ, ಮನೆಯೊಳಗಿನ ಹಿಂಸಾಚಾರ ಮತ್ತು ವಿವಾಹಗಳ ಕಡ್ಡಾಯ ರಿಜಿಸ್ಟ್ರೇಶನ್ ಬಗ್ಗೆ ಶಾಸನಗಳನ್ನು ತರಬೇಕು ಎಂದೂ ಮಹಿಳಾ ಚಾರ್ಟರ್ ಒತ್ತಾಯಿಸಿದೆ.

ಎರಡಕ್ಕಿಂತ ಹೆಚ್ಚು ಮಕ್ಕಳಿರುವ ಎಲ್ಲರನ್ನೂ ಚುನಾವಣೆಗಳಿಗೆ ಸ್ಪರ್ಧಿಸಲು ಅನರ್ಹಗೊಳಿಸುವ 79ನೇ ಸಂವಿಧಾನ ತಿದ್ದುಪಡಿ ಮಸೂದೆ ಇನ್ನೂ ಸಂಸತ್ತಿನ ಮುಂದಿದ್ದು ಅದನ್ನು ಹಿಂತೆಗೆದುಕೊಳ್ಳಬೇಕು ಎಂದು ಎಲ್ಲಾ ಏಳು ಮಹಿಳಾ ಸಂಘಟನೆಗಳು ಒತ್ತಾಯಿಸಿವೆ.

(ಐಎನ್‌ಎನ್)

ದಿಲ್ಲಿಯಲ್ಲಿ ಬಿ.ಟಿ.ಆರ್. ಭವನಕ್ಕೆ ಅಡಿಗಲ್ಲು

ನವದೆಹಲಿಯ ಕೇಂದ್ರ ಸ್ಥಳ ರೌಸ್ ಅವೆನ್ಯೂನಲ್ಲಿ ಬಿ.ಟಿ.ರಣದಿವೆ ಭವನಕ್ಕೆ ಡಿಸೆಂಬರ್ 19 ರಂದು ಅಡಿಗಲ್ಲು ಹಾಕಲಾಯಿತು. ಇದು ದೇಶದ ಪ್ರಮುಖ ಕಾರ್ಮಿಕ ಸಂಘಟನೆಯಾದ ಸಿಐಟಿಯು ನ ಕೇಂದ್ರ ಕಾರ್ಯಾಲಯವಲ್ಲದೆ ದೇಶದ ಕಾರ್ಮಿಕ ಆಂದೋಲನದ ಚೈತನ್ಯಶೀಲ ಕೇಂದ್ರವಾಗಲಿದೆ. 'ಇದು ದೇಶದ ಕಾರ್ಮಿಕ ಆಂದೋಲನಕ್ಕೊಂದು ಚಾರಿತ್ರಿಕ ಸಂದರ್ಭ" ಎಂದು ಶಂಕು ಸ್ಥಾಪನೆ ಮಾಡುತ್ತಾ ಸಿಐಟಿಯು ಅಧ್ಯಕ್ಷ ಇ.ಬಾಲಾನಂದನ್ ಹೇಳಿದರು.

ನಡುಗುವ ಚಳಿಯಲ್ಲೂ ಕಾರ್ಮಿಕರು, ಕಾರ್ಯಕರ್ತರು ದೊಡ್ಡ ಸಂಖ್ಯೆಯಲ್ಲಿ ಈ ಸಮಾರಂಭದಲ್ಲಿ ಭಾಗವಹಿಸಿದ್ದರು. ಬಿ.ಟಿ.ಆರ್.ಭವನ ನಿರ್ಮಾಣವಾಗುವ ಇಡೀ ಸ್ಥಳವನ್ನು ಆವರಿಸಿದ್ದ ವರ್ಣರಂಜಿತ ಶಾಮಿಯಾನದಲ್ಲಿ ಈ ಸಮಾರಂಭ ನಡೆಯಿತು. ಸಿಐಟಿಯು ಅಧ್ಯಕ್ಷರು ಹಾಗೂ ಪ್ರಧಾನ ಕಾರ್ಯದರ್ಶಿ ಎಂ.ಕೆ.ಪಂಧೆಯವರು ಈ ಕಟ್ಟಡ ಬೇಗನೇ ರೂಪುಗೊಳ್ಳುತ್ತದೆ ಎಂದು ನಿರೀಕ್ಷೆ ವ್ಯಕ್ತಪಡಿಸಿದರು. ನಿರ್ಮಾಣ ಕಾರ್ಯ ಸದ್ಯದಲ್ಲೇ ಆರಂಭವಾಗಲಿದೆ.

ದೇಶದ ಕಾರ್ಮಿಕ ಆಂದೋಲನದ ಅಪ್ರತಿಮ ಮುಖಂಡರೂ, ವಿಶ್ವ ಮಟ್ಟದಲ್ಲಿ ಒಬ್ಬ ಮಾರ್ಕ್ಸ್‌ವಾದಿ ಚಿಂತಕರಾಗಿದ್ದ ಕಾಂ. ಬಿ.ಟಿ.ರಣದಿವೆ ಯವರ ಜನ್ಮದಿನವೂ ಆದ ಡಿಸೆಂಬರ್ 19. ಈ ಸಭೆ 'ಸಿಐಟಿಯು ನ ಕನಸುಗಳಲ್ಲಿ ಒಂದು ಸಾಕಾರಗೊಳ್ಳುವ' ಅಪರೂಪದ ಸಂದರ್ಭ' ಎಂದು ಇ.ಬಾಲಾನಂದನ್ ಹೇಳಿದರು. ಬಿ.ಟಿ.ಆರ್. ಭವನ ಸಿಐಟಿಯುನ ಕೇಂದ್ರ ಕಾರ್ಯಾಲಯ ವಷ್ಟೇ ಅಲ್ಲ, ಇಡೀ ಕಾರ್ಮಿಕ ಆಂದೋಲನವನ್ನು ಬೆಳೆಸುವ ಒಂದು ಕೇಂದ್ರವಾಗಲಿದೆ ಎಂದು ಅವರು ಹೇಳಿದರು.

ದೇಶದ ಐಕ್ಯತೆ ಮತ್ತು ಜಾತ್ಯಾತೀತತೆಯ ರಕ್ಷಣೆಯ ಹೋರಾಟದಲ್ಲಿ ಕಾರ್ಮಿಕ ವರ್ಗ ನೇತೃತ್ವ ವಹಿಸಬೇಕು ಎಂದು ಒತ್ತಿಹೇಳಿದ ಬಾಲಾನಂದನ್ ಪ್ರಜಾಪ್ರಭುತ್ವವನ್ನು ಕಳಕೊಂಡರೆ ಅತ್ಯಂತ ಹೆಚ್ಚು ತೊಂದರೆಗೊಳಗಾಗುವುದು ಕಾರ್ಮಿಕ ವರ್ಗವೇ ಎಂದರು. ಬಿ.ಟಿ.ಆರ್. ಭವನದ ಬಗ್ಗೆ ಹೇಳುತ್ತಾ ಇದು ಸಕಲ ಆಧುನಿಕ ತಂತ್ರಜ್ಞಾನವನ್ನು ಬಳಸುವ ಆಧುನಿಕ ಕಾರ್ಯಾಲಯವಾಗಲಿದೆ ಎಂದರು. ಏಕೆಂದರೆ ಬೂರ್ಜ್ವಾ ವರ್ಗದ ಎದುರು ಸೆಣಸಲು ಕಾರ್ಮಿಕ ವರ್ಗ ಅತ್ಯುತ್ತಮ ಆಧುನಿಕ ಸಾಧನ, ತಂತ್ರಜ್ಞಾನಗಳಿಂದ ಸಜ್ಜಿತವಾಗಿರಬೇಕು ಎಂದು ಅವರು ಹೇಳಿದರು. ಸಕಲ ಸೌಕರ್ಯಗಳ ಬಿ.ಟಿ.ಆರ್. ಭವನವನ್ನು ನಿರ್ಮಿಸಲು 'ಪ್ರತಿಯೊಬ್ಬ ಕಾರ್ಮಿಕ' ನೆರವಾಗಬೇಕು. ಏಕೆಂದರೆ ಇದು ಕೇವಲ ಸಿಐಟಿಯುಗಲ್ಲ ದೇಶದ ಇಡೀ ಕಾರ್ಮಿಕ ವರ್ಗಕ್ಕಾಗಿ ಎಂದು ಬಾಲಾನಂದನ್ ಮನವಿ ಮಾಡಿಕೊಂಡರು.

ಬಿ.ಟಿ.ಆರ್. ಭವನ ಎರಡು ದಶಕಗಳ ಕಾಲ ಸಿಐಟಿಯು ಗೆ ಮಾರ್ಗದರ್ಶನ ನೀಡಿದ ಈ ಮಹಾನ್ ನೇತಾರನ ಹೆಸರಿನ ಒಂದು ಕಟ್ಟಡ ಮಾತ್ರವೇ ಅಲ್ಲ, ಅವರ ಬೋಧನೆಗಳು ಒಂದು ಚೈತನ್ಯಶಾಲೀ ಪ್ರತಿಬಿಂಬ ವಾಗುತ್ತದೆ ಎಂದು ಪಂಧೆಯವರು ಹೇಳಿದರು. ಇದಕ್ಕಾಗಿ ಕಾರ್ಮಿಕ ವರ್ಗದ ಕಾರ್ಯಕರ್ತರಿಗೆ ಶಿಕ್ಷಣ ನೀಡುವ ಒಂದು ಖಾಯಂ ಶಾಲೆ, ಆರೋಗ್ಯ, ಸುಭದ್ರತೆ, ಪರಿಸರ, ಚಾರಿತ್ರಿಕ ಬದಲಾವಣೆಗಳು ಇತ್ಯಾದಿ. ಇದುವರೆಗೆ ಉಪೇಕ್ಷಿತ ಪ್ರಶ್ನೆಗಳ ಸಂಶೋಧನೆಗಾಗಿ ಒಂದು ಘಟಕ, ಒಂದು ಪೂರ್ಣವಾಗಿ ಸುಸಜ್ಜಿತ ಪುಸ್ತಕ ಭಂಡಾರ ಮತ್ತಿತರ ವಿಭಾಗಗಳು ಬಿ.ಟಿ.ಆರ್. ಭವನದಲ್ಲಿ ಇರುತ್ತದೆ ಎಂದು ಅವರು ಹೇಳಿದರು.

(ಐಎನ್‌ಎನ್)

ಕಾರ್ಮಿಕರು, ಕಲಾವಿದರಿಂದ ಸಫ್ದರ್ ಹಶ್ಮಿ ನೆನಪು

ಜನವರಿ 1, 1989 ರಂದು ದಿಲ್ಲಿಯ ಸಮೀಪದ ಝುಂಡಾಪುರ್‌ನಲ್ಲಿ ಬೀದಿ ನಾಟಕ ಪ್ರದರ್ಶಿಸುತ್ತಿದ್ದಾಗ ಕೊಲೆಯಾದ ಪ್ರಖ್ಯಾತ ಜನಪರ ನಾಟಕಕಾರ ಸಫ್ದರ್ ಹಾಶ್ಮಿಯನ್ನು ಜನವರಿ 1 ರಂದು ಕಾರ್ಮಿಕರು, ಕಲಾವಿದರು ನೆನಪಿಸಿಕೊಂಡರು. ಹಾಶ್ಮಿಯ ಮೇಲೆ ಮಾರಣಾಂತಿಕ ಹಲ್ಲೆ ನಡೆದ ಜಾಗದಲ್ಲಿ ಹಶ್ಮಿಯವರೇ ಸಂಘಟಿಸಿದ ಬೀದಿನಾಟಕ ತಂಡ 'ಜನಮ್' ಬೀದಿನಾಟಕ, ಕ್ರಾಂತಿಕಾರಿ ಹಾಡುಗಳ ಮೂಲಕ ಹಶ್ಮಿಯವರ ಹೋರಾಟವನ್ನು ಮುಂದುವರೆಸುವ ಪಣ ತೊಟ್ಟರೆ, ನವದೆಹಲಿಯ ಸಫ್ದರ್ ಹಾಶ್ಮಿ ಮಾರ್ಗದಲ್ಲಿ ಕೋಮುವಾದದ ವಿರುದ್ಧ 'ಸಂಘರ್ಷ ದಿವಸ'ವಾಗಿ ಕಲಾವಿದರು, ರಾಜಕಾರಣಿಗಳು ಆಚರಿಸಿದರು. ಪ್ರಧಾನ ಮಂತ್ರಿ ಗುಜ್ರಾಲ್, ರೈಲ್ವೇ ಮಂತ್ರಿ ಪಾಸ್ವಾನ್, ಕಲ್ಯಾಣ ಮಂತ್ರಿ ರಾಮೂವಾಲಿಯಾ, ಸಿ.ಪಿ.ಐ.(ಎಂ) ಪೊಲಿಟ್ ಬ್ಯೂರೋ ಸದಸ್ಯ ಸೀತಾರಾಂ ಯೆಚೂರಿ, ಮಾಜಿ ಲೋಕಸಭಾಧ್ಯಕ್ಷ ರಬಿ ರಾಯ್ ಭಾಗವಹಿಸಿದ್ದರು. ಮಾಜಿ ಪ್ರಧಾನ ಮಂತ್ರಿ ವಿ.ಪಿ. ಸಿಂಗ್ ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿ ಶ್ರೀಕಾಂತ್ ಜೆನಾ ಸಂದೇಶ ಕಳುಹಿಸಿದ್ದರು.

ಪ್ರಧಾನ ಮಂತ್ರಿಗಳು ಸೇರಿದಂತೆ ಭಾಗವಹಿಸಿದ್ದ ಎಲ್ಲಾ ರಾಜಕಾರಣಿಗಳು, ವಿವಾನ್ ಸುಂದರಂ, ಸತೀಶ್ ಗುಜ್ರಾಲ್, ಅರ್ಪಿತಾ ಸಿಂಗ್, ಪರಮ್ ಜಿತ್ ಸಿಂಗ್‌ರಂತಹ ಕಲಾವಿದರು, ರಾಜೀವ್ ಧವನ್ ಮತ್ತಿತರ ಕಾನೂನು ಪಂಡಿತರು, ಆಸಿಫ್ ಅಲಿ ಬೇಗ್ ರಂತಹ ಸಂಗೀತಗಾರರು ಹಾಗೂ ಉತ್ಸಾ ಪಟ್ನಾಯಕ್ ಮತ್ತಿತರ ಬುದ್ಧಿಜೀವಿಗಳು ಸಹಿ ಮಾಡಿದ ಒಂದು ಘೋಷಣೆಯನ್ನು ಪ್ರಕಟಿಸಲಾಯಿತು. ಕೋಮುವಾದದ ವಿರುದ್ಧ ಹೋರಾಡುವುದಾಗಿ ಈ ಘೋಷಣೆಯಲ್ಲಿ ಪ್ರತಿಜ್ಞೆ ಮಾಡಲಾಗಿದೆ.

ನಾಲ್ಕು ಹಂತಗಳ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ 50 ವರ್ಷಗಳ ಹಿಂದೆ ಕೋಮುವಾದಿಗಳಿಂದ ಗಾಂಧೀಜಿಯ ಹತ್ಯೆಯ ಮೇಲೆ ಗಮನ ಸೆಳೆದ 'ಹತ್ಯಾ ಏಕ್ ಆಕಾರ್ ಕೀ' ಎಂಬ ನಾಟಕದ ಮುಖ್ಯ ಅಂಶಗಳನ್ನು ಪ್ರಸ್ತುತಪಡಿಸಲಾಯಿತು. ಪ್ರಧಾನ ಮಂತ್ರಿಗಳು ಕೋಮುವಾದ ವಿರೋಧಿ ಹಾಡುಗಳ ಒಂದು ಕ್ಯಾಸೆಟ್‌ನ್ನು ಬಿಡುಗಡೆಗೊಳಿಸಿದರು. ಸಫ್ದರ್‌ಹಶ್ಮಿ ಸ್ಮಾರಕ ಟ್ರಸ್ಟ್ -ಸಹಮತ್ - ಇದನ್ನು ನಿರ್ಮಿಸಿದೆ.

(ಐಎನ್‌ಎನ್)

ಪಕ್ಷಕ್ಕೆ 5000 ರೂ. ದೇಣಿಗೆ

ಪಕ್ಷದ ರಾಜ್ಯ ಕಾರ್ಯದರ್ಶಿ ಹಾಗೂ ಕೇಂದ್ರ ಸಮಿತಿ ಸದಸ್ಯರಾದ ಕಾಂ. ಪಿ. ರಾಮಚಂದ್ರರಾವ್ ಅವರ ಮಗಳು ಉಷಾ ಅವರ ಮದುವೆ ಬೆಂಗಳೂರಿನಲ್ಲಿ ಹೆಚ್.ಎ.ಎಲ್ ನಲ್ಲಿ ಉದ್ಯೋಗದಲ್ಲಿರುವ ಶಂಕರನಾರಾಯಣ ಅವರೊಂದಿಗೆ ಡಿಸೆಂಬರ್ 24 ರಂದು ಮಂಗಳೂರಿನಲ್ಲಿ ನಡೆಯಿತು. ಪಕ್ಷದ ಕಾರ್ಯದರ್ಶಿಗಳು ಮಂಡಳಿ ಸದಸ್ಯರಾದ ಕಾಂ. ಸೂರ್ಯನಾರಾಯಣ ರಾವ್, ಕೆ.ಆರ್.ಶ್ರೀನಿವಾಸ್, ಸಿ. ನಂಜುಂಡಪ್ಪ ಮತ್ತು ವಿ.ಕೆ.ಜೆಲ್ಲಿಯ ಹಲವಾರು ಮುಖಂಡರು ಹಾಗೂ ದಂಪತಿಗಳಿಗೆ ಶುಭಕೋರಿದರು.

ಪಕ್ಷದ ಮೇಲಿನ ಅಭಿಮಾನ ಹಾಗೂ ಮದುವೆ ನೆನಪಿನ ಸಂದರ್ಭದಲ್ಲಿ ರೂ. 5000 ದೇಣಿಗೆಯನ್ನು ಪಕ್ಷಕ್ಕೆ ನೀಡಿರುತ್ತಾರೆ.

ಕಾಂ. ಸೂರಿ ಕರೆ

ಪುಟ 1 ರಿಂದ

ಬಿಜೆಪಿಯನ್ನು ಸೋಲಿಸುವಂತೆ ಕಾರ್ಮಿಕರಿಗೆ ಮನವಿ ಮಾಡಿದರು. ಕಳೆದ ಐವತ್ತು ವರ್ಷಗಳಿಂದ ಆಡಳಿತದ ಚುಕ್ಕಾಣಿ ಹಿಡಿದಿರುವ ಕಾಂಗ್ರೆಸ್ ಪಕ್ಷ ತನ್ನ ಮುಖಂಡರನ್ನು ಶ್ರೀಮಂತರನ್ನಾಗಿಸಿದೆ, ಜನಸಾಮಾನ್ಯರನ್ನು ಬಡವರನ್ನಾಗಿಸಿದ್ಯೆ. ಕೋಮುವಾದಿ ಪಕ್ಷದೊಂದಿಗೆ ಮೈತ್ರಿ ಮಾಡಿಕೊಳ್ಳುವ ಮೂಲಕ ಲೋಕಶಕ್ತಿಯ ರಾಮಕೃಷ್ಣ ಹೆಗಡೆಯವರು ತಮ್ಮ "ಅಮೂಲ್ಯ" ಗಳಿಗೆ ತಿಲಾಂಜಲಿ ನೀಡಿರುವುದು ನಾಚಿಕೆಗೇಡಿತನ ಸಂಗತಿ ಎಂದು ಸೂರಿಯವರು ಟೀಕಿಸಿದರು. ಕಾರ್ಮಿಕರು ಹಾಗೂ ರೈತರ ಹಿತಾಸಕ್ತಿಗಳಿಗಾಗಿ ಹೋರಾಡುವ ಪ್ರತಿನಿಧಿಗಳನ್ನು ಆರಿಸಲು ಮುಂಬರುವ ಚುನಾವಣಾ ಪ್ರಕ್ರಿಯೆಯಲ್ಲಿ ಕಾರ್ಮಿಕರು ಸಕ್ರಿಯವಾಗಿ ಭಾಗವಹಿಸಬೇಕೆಂದು ಅವರು ಕರೆ ನೀಡಿದರು.

ಅಣಕ

ಶರತ್ ಚಂದ್ರ

ನೀಮು ಎಷ್ಟು ಪರ್ಸಂಟೇಜ್ ಕೋಮುವಾದಿಗಳು...?

ರಾಮಕೃಷ್ಣ ಹೆಗಡೆಯವರು ಬಿಜೆಪಿ ಜತೆ ಸೀಟು ಹೊಂದಾಣಿಕೆಯನ್ನು ಸಮರ್ಥಿಸಿಕೊಳ್ಳುತ್ತಾ, ಯಾರೂ ಸಂಪೂರ್ಣ ಕೋಮುವಾದಿಗಳೂ ಇಲ್ಲ, ಜಾತ್ಯಾತೀತರೂ ಅಲ್ಲ ಎಂದಿದ್ದಾರಂತೆ. ಅಂದರೆ ಎಲ್ಲರೂ ಸ್ವಲ್ಪ ಪರ್ಸಂಟೇಜ್ ಕೋಮುವಾದಿಗಳೂ ಇನ್ನುಳಿದ ಪರ್ಸಂಟೇಜ್ ಜಾತ್ಯತೀತರೂ ಎಂದು ಪತ್ರಿಕಾ ಗೋಷ್ಠಿಯಲ್ಲಿ ಅಪ್ಪಣೆ ಕೊಡಿಸಿದ್ದಾರೆ. ಸರಿ, ನೀವು ಎಷ್ಟು ಪರ್ಸಂಟೇಜ್ ಕೋಮುವಾದಿಗಳು..? ಎಂದು ನಮ್ಮ ವರದಿಗಾರ ನಕ್ಷತ್ರಕ ಕೇಳಲಾಗಿ ಹೆಗಡೆಯವರು ಗಡ್ಡ ನೀವಿಕೊಳ್ಳುತ್ತಿದ್ದಂತೆ, ಆಳ್ವಾರವರು ಕೂಡಲೇ 55 ಪರ್ಸಂಟು ಎಂದರಂತೆ. ನಕ್ಷತ್ರಕ ಇದು ಹೇಗೆ ಎಂದು ಅರ್ಥವಾಗದೆ ಬಂದು ಬಿಟ್ಟ. ಆದರೆ ನೀವು ಎಷ್ಟು ಪರ್ಸಂಟೇಜ್ ಕೋಮುವಾದಿಗಳು..? ಎಂಬುದು ಈಗ ನಕ್ಷತ್ರಕನ ಸ್ಪಾಕ್ ಕೊಶ್ಚನ್ನು.

ಜಾರ್ಜ್ ಫೆರ್ನಾಂಡೀಸರನ್ನು ಇದೇ ಪ್ರಶ್ನೆ ಕೇಳಲಾಗಿ ನಾವು ಸುಮಾರು 70-80 ಪರ್ಸಂಟು ಎಂದರಂತೆ. ಜಾರ್ಜ್‌ರಂತಹ ಜಾತ್ಯತೀತರೂ 70-80 ಪರ್ಸಂಟು ಕೋಮುವಾದಿಗಳು ಆದರೆ ಇನ್ನು ದೇಶದ ಗತಿ ಏನು? ಆದರೂ ಛಲ ಬಿಡದ ನಮ್ಮ ನಕ್ಷತ್ರಕ ಇದೇ ಪ್ರಶ್ನೆ ಕೇಳುತ್ತಾ ಬಂದಿದ್ದಾನೆ. ಅವನಿಗೆ ಸಿಕ್ಕಿರುವ ಉತ್ತರದಿಂದ ಹೆಚ್ಚು ಹೆಚ್ಚು ಗಲಿಬಿಲಿಗೊಳ್ಳುತ್ತಾ ಬಂದಿದ್ದಾನೆ. ಹೈದರಾಬಾದಿನಲ್ಲಿ ಪಾರ್ವತಮ್ಮನವರು, ಮದ್ರಾಸಿನಲ್ಲಿ ಜಯಮ್ಮನವರು, ಕಲಕತ್ತೆಯಲ್ಲಿ ಮಮತಾಜೀಯವರು 200ರಿಂದ 800ಪರ್ಸಂಟು ವರೆಗೂ ಹೋದರೆ ಪಾಪ ಗಲಿಬಿಲಿಗೊಳ್ಳದೆ ಇನ್ನೇನು ಮಾಡುತ್ತಾನೆ? ಬಾಳಾ ಠಾಕ್ರೆಯವರು ನಮ್ದು ಫಿಫ್ಟಿ- ಫಿಫ್ಟಿ ಎಂದು ಬಿಡೋದೆ? ಅಯೋಧ್ಯಾದಲ್ಲಿ ರಾಷ್ಟ್ರೀಯ ಸ್ಮಾರಕ ಕಟ್ಟಬೇಕು ಅಂತ ತನ್ನ ಕೋಮುವಾದಿ ಪರ್ಸಂಟನ್ನು 50 ಕ್ಕೆ ಇಳಿಸಿದ್ದಾರಾ? ಎಂದು ನಕ್ಷತ್ರಕ ಕೆಲವು ಜಾತ್ಯತೀತರನ್ನು ಕೇಳೋಣ ಎಂದು ಹೊರಟ.

ಇನ್ನೊಂದು ಜಾತ್ಯತೀತ ರಂಗ ಸಜ್ಜು ಮಾಡುತ್ತಿರುವ ಲಲ್ಲೂಜಿಯವರನ್ನು ಕೇಳಲಾಗಿ, ಹೆಗಡೆಯವರು ನನ್ನ ಮಿತ್ರ ಯಾಕೆ ಗೊತ್ತಾ? ಎಂದರು. ನಕ್ಷತ್ರಕ ಕಣ್ಣು ಕಣ್ಣು ಬಿಡುತ್ತಿರುವಾಗ, ಹೆಗಡೆಯವರು ನನ್ನ ಶತ್ರುವಿನ ಶತ್ರು - ಆದ್ದರಿಂದ ಮಿತ್ರ - ಎಂದರಂತೆ. ಆದರೂ ನಾನು ಈ ಕೋಮುವಾದಿ ಪರ್ಸಂಟು ಒಪ್ಪುವುದಿಲ್ಲ. ಆದರೆ ಭ್ರಷ್ಟಾಚಾರಕ್ಕೆ ಈ ಪರ್ಸಂಟು ಚೆನ್ನಾಗಿ ಒಪ್ಪುತ್ತೆ. ಎಲ್ಲರೂ ಸ್ವಲ್ಪ ಪರ್ಸಂಟೇಜ್ ಭ್ರಷ್ಟಾಚಾರಿಗಳೂ ಇನ್ನುಳಿದ ಪರ್ಸಂಟೇಜ್ ಸಾಚಾಗಳು ಎಂದು ಲಲ್ಲೂಜಿಯವರು ಕೊರೆಯಲು ಆರಂಭಿಸಿದರಂತೆ. ಅಲ್ಲಿಂದ ಕಾಲು ಕಿತ್ತ ನಕ್ಷತ್ರಕ, ಕೇಸರಿಯವರನ್ನು ಕೋಮುವಾದಿ ಪರ್ಸಂಟು ಕೇಳಿದನಂತೆ. ಕೇಸರಿಯವರು ವೀರಾವೇಶದಿಂದ ನೂರು ಪರ್ಸಂಟು ನಮ್ಮದೇ ಸರ್ಕಾರ ಬರುವುದು. ಹಾಗೇನಾದರೂ ಆಗದಿದ್ದರೆ ಮುಂದಿನ ಸರ್ಕಾರ ಉರುಳಿಸುವವರಂತೂ ನಾವೇ ಎಂದರಂತೆ.


ಪೂರಾ ಗಲಿಬಿಲಿಗೊಂಡ ನಕ್ಷತ್ರಕ ನನ್ನ ತಲೆ ತಿನ್ನಲುತೊಡಗಿದ. ನಾನು ಆತನ ಕಾಟ ತಡೆಯಲಾರದೆ, ಈ ಪರ್ಸಂಟು ಆಳ್ವಾ ತಾನೇ ಹೇಳಿದ್ದು. ಅವರನ್ನೇ ಕೇಳು ಎಂದಾಗ, ಯುರೇಕಾ ಎಂದು ಓಡಿದ. ವಾಪಸು ಬಂದು ಬಿದ್ದು ಬಿದ್ದು ನಗತೊಡಗಿದ. ಯಾಕಪ್ಪಾ ಎಂದರೆ, ಆಳ್ವಾರವರ ಪರ್ಸಂಟು ವಿವರಿಸಿದ. ಆಳ್ವಾರವರ ಪರ್ಸಂಟು ಹೀಗಿದೆ - ಕರ್ನಾಟಕದಲ್ಲಿ 28 ಸೀಟಲ್ಲಿ ಬಿಜೆಪಿಗೆ 18, ನಮಗೆ 10. - ಬಿಜೆಪಿ ನೂರು ಪರ್ಸಂಟು ಕೋಮುವಾದಿ ತಾನೇ? ಹಾಗಾದರೆ ನಮ್ಮ ಕೋಮುವಾದಿ ಪರ್ಸಂಟು 55 ಆಗಲಿಲ್ವ?

ಈಗ ನನಗೂ ಜಾರ್ಜ್‌ರವರ 70-80, ಬಾಳಾ ಠಾಕ್ರೆಯವರ 50, ಜಯಮ್ಮನವರ ನೂರಾರು ಕೋಮುವಾದಿ ಪರ್ಸಂಟು ಅರ್ಥವಾಗಲಾರಂಭಿಸಿತು.

ನೀವು ಎಷ್ಟು ಪರ್ಸಂಟೇಜ್ ಕೋಮುವಾದಿಗಳು..? ಎಂದು ಕೇಳುವುದನ್ನಂತೂ ನಕ್ಷತ್ರಕ ಬಿಟ್ಟು ಬಿಟ್ಟಿದ್ದಾನೆ.

ಪದಬಂಧ-೫

- ವಿಶ್ವ



ಮೇಲಿಂದ ಕೆಳಕ್ಕೆ

1. ಕ್ವಿಟ್‌ಇಂಡಿಯಾ ಚಳುವಳಿ ವೇಳೆ ಹಲವು ಕಾರ್ಮಿಕರು ಹೋರಾಟದಲ್ಲಿ ಮಡಿದ ರಾಜ್ಯದ ಒಂದು ಸ್ಥಳ(8)
2. ವಾರದ ರಜೆ ದಿನದಲ್ಲಿ ಇವನಿದ್ದಾನೆ(2)
3. ಕರ್ನಾಟಕದಲ್ಲಿ 'ಮಾಸ್ಟರ್' ಎಂದೇ ಪರಿಚಿತ ನೇತಾರರಿವರು(4)
5. ಸಿಪಿಐ(ಎಂ) ಶಾಸಕರಾಗಿದ್ದ ಒಬ್ಬ ರೈತ ಮುಖಂಡ(6)
7. ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಸಮಿತಿಯ ಹೊಸ ಕಾರ್ಯದರ್ಶಿ (4)
10. ರಾಜ್ಯ ಸಿಐಟಿಯು ಮುಖಂಡರೊಬ್ಬರು ಮೂರಕ್ಷರಗಳಿಂದ ಸುಪರಿಚಿತರು.

1. ಸಿಪಿಐ(ಎಂ) ಕರ್ನಾಟಕ ರಾಜ್ಯ 16ನೇ ಸಮ್ಮೇಳನ ನಡೆದ ಊರು(3)
3. ಸಮ್ಮೇಳನದಲ್ಲಿ ಹಾಜರಿದ್ದು ಮಾರ್ಗದರ್ಶನ ನೀಡಿದ ಪಕ್ಷದ ಪೊಲಿಟ್‌ಬ್ಯೂರೊದ ಒಬ್ಬ ಸದಸ್ಯ(5)
4. ಯಕ್ಷಗಾನದೊಂದಿಗೆ ಬೇರ್ಪಡಿಸದ ಸಂಬಂಧ ಹೊಂದಿರುವ ಒಂದು ವಾದ್ಯ(2)
6. ರೈತ ಕಾರ್ಮಿಕರ ಮೆರವಣಿಗೆಯಲ್ಲಿ ಈ ಘೋಷಣಾ ಪದಕ್ಕೆ ಸ್ಥಾನವಿದ್ದೇ ಇದೆ(3)
7. ಇದು ಉತ್ತರ ಕರ್ನಾಟಕದ 'ಸ್ನಾನ'(3)
8. ಒಂದು ತುಂಡು ಸ್ವಂತದ್ದೆನ್ನುವ ಇದಕ್ಕಾಗಿ ಚೋಮ ಕಂಡ ಕನಸು ನನಸಾಗಲೇ ಇಲ್ಲ (2)
9. ಹೂವಿನ ಎಸಳು(2)
10. ಗೌರಿಬಿದನೂರಿನಲ್ಲಿರುವ ಮಹತ್ವದ ಸ್ವಾತಂತ್ರ್ಯ ಹೋರಾಟದ ಸ್ಥಳ(5)
11. ಪಕ್ಷದ ರಾಜ್ಯ ಸಮ್ಮೇಳನದ ಬಹಿರಂಗ ರ್‍ಯಾಲಿಯಲ್ಲಿ ಇವರದ್ದೇ ಪ್ರಮುಖ ಭಾಷಣ(6)

KRNM/BGS-405 MAG(2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡ ರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು-9 ಮುದ್ರಣ: ಕಂಠೀರವ ಆಫ್‌ಸೆಟ್, ನಂ.6, 7ನೇ ಮುಖ್ಯರಸ್ತೆ, ಎಸ್.ಆರ್.ನಗರ, ಬೆಂ.27